ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಅಪರ ನಿರ್ದೇಶಕರ ಕಾರ್ಯಾಲಯ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

ಪ್ರಾಂತೀಯ ಕಛೇರಿ ಕಲಬುರಗಿ.

# ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2018-19 & 2019-20ನೇ ಸಾಲಿನ ಲೆಕ್ಕಪರಿಶೋಧನಾ ಅಂತಿಮ ವರದಿ.

# ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

## ಭಾಗ-೧

### I. ವಿಶ್ವವಿದ್ಯಾಲಯದ ಸ್ಥಾಪನೆಯ ಹಿನ್ನಲೆ.


ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ (ವಿಎಸ್‌ಕೆಯು), ಬಳ್ಳಾರಿ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಕಾಯ್ದೆ 2000ರ ಮೂಲಕ ಸ್ಥಾಪನೆಯಾಗಿರುತ್ತದೆ. ಇದಕ್ಕೆ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ **"ಕೃಷ್ಣದೇವರಾಯರ"** ಹೆಸರನ್ನು ಇಡಲಾಗಿದೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಹಿಂದೆ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿಯ ಸ್ನಾತಕೋತ್ತರ ಕೇಂದ್ರವಾಗಿತ್ತು ಮತ್ತು ನಂತರ 2010 ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಯಿತು.

ಇದು 120 ಕಾಲೇಜುಗಳೊಂದಿಗೆ ಸಂಲಗ್ನತೆಯನ್ನು ಮಾಡಿಕೊಳ್ಳಲಾಗಿದೆ. ವಿಶ್ವವಿದ್ಯಾಲಯವು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡಿದೆ. ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣದ ನವೀನ ವಿಧಾನಗಳನ್ನು ಕೈಗೊಳ್ಳಲು ಪ್ರಯತ್ನಿಸುತ್ತದೆ. ವಿಶ್ವವಿದ್ಯಾಲಯವು 4 ಕ್ಯಾಂಪಸ್‌ಗಳನ್ನು ಹೊಂದಿದೆ. 1) ಮುಖ್ಯ ಆವರಣ ಜ್ಞಾನ ಸಾಗರ 2) ಸಂಡೂರು ತಾಲ್ಲುಕಿನ ನಂಧಿಹಳ್ಳಿ 3) ಕೊಪ್ಪಳ 4) ಯಲಬುರ್ಗಾ. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಜ್ಞಾನ ಸಾಗರವು ಸುಮಾರು 95.37 ಎಕರೆ ಪ್ರದೇಶದಲ್ಲಿ ಹರಡಿದೆ, ಎಲ್ಲಾ ಪ್ರಮುಖ ಆಡಳಿತವನ್ನು ಹೊಂದಿದೆ. ಇತ್ತೀಚೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ತನ್ನ ದಶಮಾನೋತ್ಸವ ಸಮಾರಂಭವನ್ನು 27 ಜುಲೈ 2020 ರಂದು ಆಚರಿಸಿದೆ.

ವಿಶ್ವವಿದ್ಯಾಲಯದ ಧ್ಯೆಯ ಮತ್ತು ಗುರಿಯು ಧಿಯೋ ಯೋ ನಃ ಪ್ರಚೋದಯಾತ್ ಆಗಿರುತ್ತದೆ.

**II.** **ವಿಶ್ವವಿದ್ಯಾಲಯದ ಸಾಂಸ್ಥಿಕ ರಚನೆ:–**

ವಿಶ್ವವಿದ್ಯಾಲಯದ ಆಡಳಿತದ ಪ್ರಮುಖ ಸಾಂಸ್ಥಿಕ ರಚನೆಯು ಈ ಕೆಳಗಿನಂತಿರುತ್ತದೆ.




**ವಿಶ್ವವಿದ್ಯಾಲಯದ ಸಮಿತಿಗಳು**

| ಕ್ರ. ಸಂ | ಮಂಡಳ/ಸಮಿತಿಯ ಹೆಸರು | ಅಧಿನಿಯಮದಲ್ಲಿನ ಅವಕಾಶ | ಸಮಿತಿಯ ಅಧ್ಯಕ್ಷರು |
|---|---|---|---|
| 1 | ಸಿಂಡಿಕೇಟ್ | ಪ್ರಕರಣ–28(1) | ಕುಲಪತಿಗಳು |
| 2 | ಶಿಕ್ಷಣಮಂಡಳ | ಪ್ರಕರಣ–30(1) | ಕುಲಪತಿಗಳು |
| 3 | ಹಣಕಾಸು ಸಮಿತಿ | ಪ್ರಕರಣ–32(1) | ಕುಲಪತಿಗಳು |
| 4 | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳ | ಪ್ರಕರಣ–35(2) | ಕುಲಪತಿಗಳು |
| 5 | ಕಾಲೇಜು ಅಭಿವೃದ್ಧಿ ಮಂಡಳ | ಕ.ರಾ.ವಿ.ವಿ. ಕಾಯ್ದೆ–2000ದ ಅನುಸಾರ | ಕುಲಪತಿಗಳು |

**ವಿಶ್ವವಿದ್ಯಾಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ.**

| ಕ್ರ.ಸಂ. | ಪ್ರಾಧಿಕಾರ | ಹೊಣೆಗಾರಿಕೆ |
|---|---|---|
| 1 | ಕುಲಪತಿಗಳು | ಪ್ರಕರಣ–15ರ ಅನುಸಾರ ಕುಲಪತಿಗಳು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳ ಸಭೆಗಳನ್ನು ತಾನು ಅಥವಾ ತಾನು ಅಧಿಕಾರ ನೀಡಿರುವ ಅಧಿಕಾರಿಗಳ ಮೂಲಕ ಉಚಿತವಾಗಿ ಸಭಾಸೂಚನೆ ಹೊರಡಿಸುವ ಮೂಲಕ ಕರೆಯುವ ಮತ್ತು ಸಮಿತಿಗಳ ನಿರ್ಣಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು, ಕಾನೂನು ಕಾಯ್ದೆಗಳ ಉಪಬಂಧಗಳು ಪಾಲನೆಯಾಗಿರುವುದನ್ನು ನೋಡಿಕೊಳ್ಳುವ ಅಗತ್ಯ ಅಧಿಕಾರವನ್ನು ಹೊಂದಿರುತ್ತಾರೆ. |
| 2 | ಕುಲಸಚಿವರು (ಆಡಳಿತ) | ಪ್ರಕರಣ–17ರ ಅನುಸಾರ ಕುಲಸಚಿವರು (ಆಡಳಿತ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಗಳ ಪದನಿಮಿತ್ತ ಕಾರ್ಯದರ್ಶಿ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವಿಶ್ವವಿದ್ಯಾನಿಲಯದ ದಾಖಲೆಗಳು, ಮೊಹರು ಹಾಗೂ ಕುಲಪತಿಗಳು ಮತ್ತು ಸಿಂಡಿಕೇಟ್‌ಗಳು ತಮಗೆ ವಹಿಸಿಕೊಟ್ಟ ಇತರೆ ಆಸ್ತಿಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಅಧಿಕೃತ ಪತ್ರವ್ಯವಹಾರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳೊಡನೆ ಮಾಡುವುದು, ಸಿಂಡಿಕೇಟ್ಹಾಗೂ ಶಿಕ್ಷಣ ಮಂಡಳಗಳ, ವ್ಯಾಸಂಗ ಶಾಖೆಗಳ ಹಾಗೂ ಅಧ್ಯಯನ ಮಂಡಳಗಳ ಸಭಾಸೂಚನಾ ಪತ್ರಗಳನ್ನು ಹೊರಡಿಸುವ ಮತ್ತು ನಿರ್ಣಯಗಳ ನಡವಳಿಗಳನ್ನು ನಿರ್ವಹಿಸುವ ಕಾರ್ಯಗಳನ್ನು ಮಾಡುತ್ತಾರೆ. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ನಡೆಸುವ ಸಭೆಗಳ ಸಭಾಕಾರ್ಯ ಸೂಚಿಯನ್ನು ಹಾಗೂ ಸಭೆನಡೆದ ಒಂದುತಿಂಗಳೊಳಗೆ ಸಭಾನಡವಳಿಗಳನ್ನು ಮಾನ್ಯಕುಲಾಧಿಪತಿಗಳು ಮತ್ತು ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಶ್ವವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲಕಾಲಕ್ಕೆ ಕುಲಪತಿಗಳು ಪ್ರತ್ಯಾಯೋಜಿಸುವ ಅಧಿಕಾರಗಳನ್ನು ನಿರ್ವಹಿಸುತ್ತಾರೆ. |
| 3 | ಕುಲಸಚಿವರು (ಪರೀಕ್ಷಾಂಗ) | ಪ್ರಕರಣ–18ರ ಅನುಸಾರ ಕುಲಸಚಿವರು (ಪರೀಕ್ಷಾಂಗ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಸಿಂಡಿಕೇಟ್ ಹಾಗೂ ಶಿಕ್ಷಣಮಂಡಳ, ಹಣಕಾಸುಸಮಿತಿ ಹಾಗೂ ಎಲ್ಲಾ ವ್ಯಾಸಂಗ ಶಾಖೆಗಳ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |
| 4 | ವಿತ್ತಾಧಿಕಾರಿ (ಹಣಕಾಸು ಅಧಿಕಾರಿ) | ಪ್ರಕರಣ–19ರ ಅನುಸಾರ ವಿತ್ತಾಧಿಕಾರಿ (ಹಣಕಾಸುಅಧಿಕಾರಿ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಶಿಕ್ಷಣಮಂಡಳಿಯ ಪದನಿಮಿತ್ತ ಸದಸ್ಯ ಹಾಗೂ ಹಣಕಾಸುಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಇವರು ಹಣಕಾಸು ಸಮಿತಿಯ ನಿಯಂತ್ರಣದಲ್ಲಿ ವಿಶ್ವವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲಕಾಲಕ್ಕೆ ಕುಲಪತಿಗಳು ಹಾಗೂ ಕುಲಸಚಿವರು (ಆಡಳಿತ) ರವರು ಪ್ರತ್ಯಾಯೋಜಿಸುವ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |

**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.**

**<u>ಸಾಮಾನ್ಯ ಮಾಹಿತಿ</u>:**

| | | |
|---|---|---|
| 1 | ಲೆಕ್ಕಪರಿಶೋಧನಾ ಸಂಸ್ಥೆಯ ಹೆಸರು | **ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ.** |
| 2 | ಲೆಕ್ಕಪರಿಶೋಧನಾ ಅವಧಿ | **2018-19 ಮತ್ತು 2019-20.** |
| 3 | ಲೆಕ್ಕಪರಿಶೋಧನಾ ತಂಡದ ವಿವರ | **ಲೆಕ್ಕಪರಿಶೋಧನಾಧಿಕಾರಿಗಳು.**<br>1. ಶ್ರೀ ಪವನಕುಮಾರ<br>2. ಶ್ರೀಮತಿ ಸರೋಜಾ ಸಿ. ಬೆಳಮಗಿ.<br><br>**ಲೆಕ್ಕಾಧೀಕ್ಷಕರು.**<br>1. ಶ್ರೀ ಮುಹಮ್ಮದ ಸನಾಉಲ್ಲಾ.<br><br>**ಲೆಕ್ಕ ಸಹಾಯಕರು.**<br>1. ಶ್ರೀ ಸೂರ್ಯಕಾಂತ ಆರ್. ಜೆ<br>2. ಶ್ರೀ ಪ್ರಶಾಂತಕುಮಾರ<br>3. ಶ್ರೀ ಯಲ್ಲಪ್ಪ<br>4. ಶ್ರೀ ಬಸವಂತ<br>5. ಕು॥ ಅಂಜಲಿ<br>6. ಕು॥ ಶಬಾನಾ |
| 4 | ಲೆಕ್ಕಪರಿಶೋಧನೆ ಪ್ರಾರಂಭವಾದ ದಿನಾಂಕ | **16-09-2021** |
| 5 | ಲೆಕ್ಕಪರಿಶೋಧನೆ ಮುಕ್ತಾಯವಾದ ದಿನಾಂಕ | **14-01-2022** |
| 6 | ಲೆಕ್ಕಪರಿಶೋಧನೆಗೆ ಉಪಯೋಗಿಸಿದ ಮಾನವದಿನಗಳು | **596** ಏಕ ಮಾನವದಿನಗಳು |
| 7 | ಲೆಕ್ಕಪರಿಶೋಧನಾ ವರದಿಯನ್ನು ಪುನರ್ ಪರಿಶೀಲಿಸಿದ ಅಧಿಕಾರಿಗಳ ಹೆಸರು ಮತ್ತು ಪದನಾಮ | ಶ್ರೀ ಬನ್ನಪ್ಪ ಜೆ. ಗುಡಿಮನಿ.<br>ಅಪರ ನಿರ್ದೇಶಕರು,<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ. |
| 8 | ಲೆಕ್ಕಪರಿಶೋಧನಾ ವರದಿಯನ್ನು ಪುನರ್ ಪರಿಶೀಲಿಸಿದ ದಿನಾಂಕ | 28-03-2022 |

## III. ಪ್ರಸ್ತಾವನೆ:

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದಲ್ಲಿನ ಪ್ರಕರಣ-47(1)ರ ಅನ್ವಯ ವಿಶ್ವವಿದ್ಯಾಲಯವು ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್‌ನ ನಿರ್ದೇಶನಗಳನುಸಾರ ತಯಾರಿಸಬೇಕಾಗಿರುತ್ತದೆ. ಹೀಗೆ ತಯಾರಿಸಿದ ವಾರ್ಷಿಕ ಲೆಕ್ಕಗಳನ್ನು ಅಧಿನಿಯಮದ ಪ್ರಕರಣ-47(2)ರ ಅನ್ವಯ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿಯು ಪರಿಶೀಲಿಸಿ ತನ್ನ ನಿರ್ಣಯ/ಶಿಫಾರಸ್ಸಿನೊಡನೆ ಸಿಂಡಿಕೇಟ್‌ಗೆ ಕಳುಹಿಸಬೇಕು. ಸಿಂಡಿಕೇಟ್ ಸಭೆಯು ಶೈಕ್ಷಣಿಕ ಮಂಡಳಿಯ ಶಿಫಾರಸ್ಸುಗಳನ್ನು ಪರಿಗಣಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ಕೈಗೊಂಡ ಕ್ರಮಗಳ ಬಗ್ಗೆ ಅಥವಾ ಕ್ರಮ ಕೈಗೊಳ್ಳದುದಕ್ಕೆ ಕಾರಣಗಳ ಬಗ್ಗೆ ಮಾಹಿತಿಯನ್ನು ಶೈಕ್ಷಣಿಕ ಮಂಡಳಿಯ ಅದರ ಮುಂದಿನ ಸಭೆಗೆ ಕಳುಹಿಸಿಕೊಡಬೇಕು. ಸಿಂಡಿಕೇಟ್ ಅನುಮೋದಿಸಿದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ 2018-19 & 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲೆಕ್ಕಪರಿಶೋಧನೆಯನ್ನು ಅಧಿನಿಯಮದ ಪ್ರಕರಣ-47(3)ರ ಅನುಸಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಕಲಬುರಗಿ ಪ್ರಾಂತೀಯ ಕಛೇರಿಯಿಂದ ಕೈಗೊಂಡು ವರದಿಯನ್ನು ತಯ್ಯಾರಿಸಲಾಗಿದೆ.

ಕರ್ನಾಟಕ ರಾಜ್ಯಪತ್ರ ಪ್ರಕಟಣೆಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2010, ಬೆಂಗಳೂರು, ದಿನಾಂಕ:27-07-2010ರಲ್ಲಿ ಪ್ರಕಟಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2010 ರ 3ನೇ ಪ್ರಕರಣದಲ್ಲಿ 2ನೇ ಉಪಪ್ರಕರಣದ (1ಡಿ)ರ ಪ್ರಕಾರ ದಿನಾಂಕ:27-07-2010 ರಿಂದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಸ್ಥಾಪಿಸಲಾಯಿತು.

ಇದರನ್ವಯ 2010-11 ರಿಂದ 2014-15ರ ವರೆಗೆ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿ ಬಳ್ಳಾರಿ ಇವರು ಲೆಕ್ಕಪರಿಶೋಧನೆ ಕೈಗೊಂಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014 ಬೆಂಗಳೂರು ದಿನಾಂಕ:18-05-2015 ರನ್ವಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕಲಬುರಗಿಯ ಪ್ರಾಂತೀಯ ಕಛೇರಿ ಸ್ಥಾಪಿಸಲಾಗಿರುವುದರಿಂದ 2015-16 ರಿಂದ ಇಲ್ಲಿಯವರೆಗೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಲೆಕ್ಕಪರಿಶೋಧನೆಯನ್ನು ಕೈಗೊಂಡು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಿದ್ದಪಡಿಸಿ ಬಿಡುಗಡೆಗೊಳಿಸಲಾಗುತ್ತಿದೆ.

## IV. **ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ನಿಯಮಗಳು**.

(ಅ). ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸಿದ ಅನುಶಾಸನಗಳು, ಆಧ್ಯಾದೇಶಗಳು, ಪರಿನಿಯಮಗಳು.

(ಆ). ಕರ್ನಾಟಕ ಆರ್ಥಿಕ ಸಂಹಿತೆ 1958.

(ಇ). ಸಾದಿಲ್ವಾರು ವೆಚ್ಚದ ಕೈಪಿಡಿ 1958.

(ಈ). ಕರ್ನಾಟಕ ನಾಗರಿಕ ಸೇವಾ ನಿಯಮಗಳು.

(ಉ). ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ.

(ಊ). ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ.

(ಋ). ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000.

(ಎ). ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು ಹಾಗೂ ಸುತ್ತೋಲೆಗಳು.

(ಏ). ಸಾಮಾನ್ಯ ಆರ್ಥಿಕ ನಿಯಮಗಳು(ಜಿ.ಎಫ್.ಆರ್) 2005-ಯು.ಜಿ.ಸಿ. ಮತ್ತು ರಾಜ್ಯ ಕೇಂದ್ರದ ಯೋಜನೆಗಳ ಅನುದಾನಗಳಿಗಾಗಿ.

(ಐ). ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002 ಹಾಗೂ ತತ್ಸಂಬಂಧ ನಿಯಮಗಳು 2003 (ಕರ್ನಾಟಕ ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಆಕ್ಟ್).

(ಒ). ಕರ್ನಾಟಕ ಸರ್ಕಾರದ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ 1999(ಕೆ.ಸಿ.ಜಿ.ಜಿ.ಆ್ಯಕ್ಟ್).

2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನ್ಯತೆಗಳು ಹಾಗೂ ವಿಶ್ವವಿದ್ಯಾಲಯದ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜಿನೀಯರಿಂಗ್ ವಿಭಾಗ ಮತ್ತು ವಿವಿಧ ಘಟಕಗಳಲ್ಲಿ ಕಂಡುಬಂದ ಗುರುತರವಾದ ನ್ಯೂನ್ಯತೆಗಳನ್ನು ಘಟಕವಾರು ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿಸಲಾಗಿದೆ.

## V. **ಲೆಕ್ಕಪರಿಶೋಧನಾ ವರದಿಗೆ ಕೈಗೊಳ್ಳಬೇಕಾದ ಕ್ರಮ**.

ಈ ಲೆಕ್ಕಪರಿಶೋಧನಾ ವರದಿಯ ಕಂಡಿಕೆಗಳಿಗೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ-2000 ದ ಪ್ರಕರಣ-47 (4)ರ ಅನುಸಾರ ವಿಶ್ವವಿದ್ಯಾಲಯವು ಅನುಸರಣಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

## VI. ವಿಶ್ವವಿದ್ಯಾಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ.

2018-19 & 2019-20ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶ್ವವಿದ್ಯಾಲಯದ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| **ಕುಲಪತಿಗಳು** | 1) ಶ್ರೀ ಡಾ॥ ಎಮ್. ಎಸ್. ಸುಭಾಷ್<br><br>2) ಶ್ರೀ ಪ್ರೊ. ಕೆ.ಆರ್. ವೇಣುಗೋಪಾಲ ರೆಡ್ಡಿ<br>3) ಶ್ರೀ ಪ್ರೊ. ಸಿದ್ದು ಪಿ. ಅಲಗೂರ | 01-04-2018 ರಿಂದ 31-03-2019<br>01-04-2019 ರಿಂದ 15-06-2019<br>15-06-2019 ರಿಂದ 02-08-2019<br>02-08-2019 ರಿಂದ 31-03-2020 |
| **ಕುಲಸಚಿವರು** | 1) ಶ್ರೀ ಪ್ರೊ. ಎಸ್. ಎ. ಪಾಟೀಲ್<br>2) ಶ್ರೀ ಪ್ರೊ. ಕೆ.ವಿ. ಪ್ರಸಾದ<br>3) ಶ್ರೀ ಪ್ರೊ. ಬಿ. ಕೆ. ತುಳಸಿಮಾಲಾ | 01-04-2018 ರಿಂದ 28-07-2018<br>29-07-2018 ರಿಂದ 21-09-2018<br>22-09-2018 ರಿಂದ 31-03-2020 |
| **ಕುಲಸಚಿವರು (ಮೌಲ್ಯಮಾಪನ)** | 1) ಶ್ರೀ ಪ್ರೊ. ಸಿ. ಬಿ. ಹೊನ್ನುಸಿದ್ದಾರ್ಥ<br>2) ಶ್ರೀ ಪ್ರೊ. ಬಿ. ಕೆ. ತುಳಸಿಮಾಲಾ (ಪ್ರಭಾರ)<br>3) ಶ್ರೀ ಪ್ರೊ. ವಿ. ಲೋಕೇಶ (ಪ್ರಭಾರ)<br>4) ಶ್ರೀ ಪ್ರೊ. ಕೆ. ರಮೇಶ | 01-04-2018 ರಿಂದ 20-02-2019<br>20-02-2019 ರಿಂದ 27-02-2019<br>27-02-2019 ರಿಂದ 05-03-2019<br>05-03-2019 ರಿಂದ 31-03-2020 |
| **ಹಣಕಾಸು ಅಧಿಕಾರಿಗಳು** | 1) ಶ್ರೀ ಸುನೀಲ್ ಕುಮಾರ್ ಎಂ.ಎಸ್.<br>2) ಶ್ರೀ ಎನ್. ಆರ್. ರಾಘವೇಂದ್ರ<br>3) ಶ್ರೀ ಎಂ.ಎ ಜುಬೇರ್<br>4) ಶ್ರೀ ಪ್ರೊ. ಬಿ ಕೆ, ತುಳಸಿಮಾಲ (ಪ್ರಭಾರ)<br>5) ಡಾ॥ ಪ್ರಶಾಂತ ಕೆ. ಸಿ. | 01-04-2018 ರಿಂದ 15-08-2018<br>16-08-2018 ರಿಂದ 16-07-2019<br>17-07-2019 ರಿಂದ 30-11-2019<br>01-12-2019 ರಿಂದ 30-11-2019<br>10-01-2020 ರಿಂದ 31-03-2020 |
| **ಸಹಾಯಕ ಕಾರ್ಯಪಾಲಕ ಅಭಿಯಂತರರು** | 1) ಶ್ರೀ ಮುರಳೀಧರ್ ಟಿ. | 01-04-2018 ರಿಂದ 31-03-2020 |

## VII. ಲೆಕ್ಕಪತ್ರ ಪದ್ಧತಿಯ ಸಂಕ್ಷಿಪ್ತ ವಿವರಣೆ :

ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ನಿಧಿ ಆಧಾರಿತ (FBAS) ಲೆಕ್ಕಪತ್ರಗಳನ್ನು ಮತ್ತು ಅಕ್ರ್ಯೂವಲ್ ಲೆಕ್ಕಪತ್ರಗಳನ್ನು ನಿಯಮಾನುಸಾರವಾಗಿ ನಿರ್ವಹಿಸಬೇಕಿದ್ದು, ಆದರೆ ಸದರಿ ವಿಶ್ವವಿದ್ಯಾಲಯದವರು ನಿಧಿ ಆಧಾರಿತ (FBAS) ಲೆಕ್ಕಪತ್ರಗಳನ್ನು ಮತ್ತು ಅಕ್ರೂವಲ್ ಲೆಕ್ಕಪತ್ರಗಳನ್ನು ನಿರ್ವಹಿಸಿರುವುದಿಲ್ಲ.

ಸರಕಾರದಿಂದ/ಯುಜಿಸಿ ಮತ್ತು ಇನ್ನಾವುದೇ ಮೂಲಗಳಿಂದ ಸ್ವೀಕೃತವಾಗುವ ಅನುದಾನಗಳಿಗೆದುರಾಗಿ ನಗದು ಪುಸ್ತಕ, ಬ್ಯಾಂಕ್ ಖಾತೆ ಮತ್ತು ವೋಚರ್ ಮುಂತಾದವುಗಳನ್ನು ನಿರ್ವಹಿಸಲಾಗುತ್ತಿದೆ.

**VIII. ವಾರ್ಷಿಕ ಲೆಕ್ಕಪತ್ರಗಳು ಹಾಗೂ ನಗದು ಲೆಕ್ಕಗಳ ಸಲ್ಲಿಕೆ.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ವಿಶ್ವವಿದ್ಯಾಲಯವು ಪ್ರಾಂತೀಯ ಕಛೇರಿಗೆ ಮಾಸಿಕ ಲೆಕ್ಕಪತ್ರಗಳು ಹಾಗೂ ನಗದು ಲೆಕ್ಕಗಳನ್ನು ನಿಯಮಿತವಾಗಿ ಸಲ್ಲಿಸುವ ಕ್ರಮವನ್ನು ಅನುಸರಿಸುತ್ತಿರುವುದಿಲ್ಲವಾದ್ದರಿಂದ ಹಾಗೂ ಯಾವುದೇ ಅಂಗೀಕೃತ ನಮೂನೆಗಳಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿಲ್ಲವಾದ್ದರಿಂದ ವಿಶ್ವವಿದ್ಯಾನಿಲಯದ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳ ನಿಖರತೆಯನ್ನು ಖಚಿತ ಪಡಿಸಿಕೊಂಡು ಪ್ರಮಾಣೀಕರಿಸುವುದು ಸಾಧ್ಯವಾಗಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-೨೦೦೦ರ ಪ್ರಕರಣ-47(1)ರ ಪ್ರಕಾರ ಸಿಂಡಿಕೇಟ್ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕಾಗಿದ್ದು, ಅದರಂತೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ 2018-19 & 2019-20ನೇ ಸಾಲಿನ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಸದರಿ ಸಾಲಿನ ಸ್ವೀಕೃತಿ ಹಾಗೂ ಪಾವತಿಗಳನ್ನು ಮಾತ್ರ ದಾಖಲಿಸಲಾಗಿದೆ. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ವಿಶ್ವವಿದ್ಯಾನಿಲಯದ 2018-19 ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ದಿನಾಂಕ:30-11-2019 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ದಿನಾಂಕ:07-12-2020 ರಂದು ನಡೆದ ಹಣಕಾಸುಸಮಿತಿ ಸಭೆಯಲ್ಲಿ ಸದರಿ ವಾರ್ಷಿಕ ಲೆಕ್ಕಪತ್ರವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-೨೦೦೦ರ ಪ್ರಕರಣ-47(2)ರ ಪ್ರಕಾರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಸದರಿ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 2018-19ನೇ ಸಾಲಿನ ಹಣಕಾಸಿನ ಸ್ಥಿತಿಗತಿ ಈ ಕೆಳಗಿನಂತಿರುತ್ತದೆ.

| | | |
|---|---|---|
| ದಿನಾಂಕ: 01-04-2018 ರಂದು ಪ್ರಾರಂಭದ ಶಿಲ್ಕು | ರೂ | 21,60,31,034 |
| 2018-19 ರ ಜಮೆ | ರೂ | 62,29,92,314 |
| ಒಟ್ಟು ಆದಾಯ | ರೂ | **83,90,23,348** |
| 2018-19 ರ ವೆಚ್ಚ | ರೂ | 59,69,96,421 |
| ದಿನಾಂಕ: 31-03-2019 ರಂದು ಇರುವ ಅಂತಿಮ ಶಿಲ್ಕು | ರೂ | **24,20,26,927** |

ಸದರಿ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 2019-20ನೇ ಸಾಲಿನ ಹಣಕಾಸಿನ ಸ್ಥಿತಿಗತಿ ಈ ಕೆಳಗಿನಂತಿರುತ್ತದೆ.

| | | |
|---|---|---|
| ದಿನಾಂಕ: 01-04-2019 ರಂದು ಪ್ರಾರಂಭದ ಶಿಲ್ಕು | ರೂ | 24,20,26,927 |
| 2019-20 ರ ಜಮೆ | ರೂ | 66,93,92,875 |
| ಒಟ್ಟು ಆದಾಯ | ರೂ | **91,14,19,802** |
| 2019-20 ರ ವೆಚ್ಚ | ರೂ | 63,71,09,946 |
| ದಿನಾಂಕ: 31-03-2020 ರಂದು ಇರುವ ಅಂತಿಮ ಶಿಲ್ಕು | ರೂ | **27,43,09,856** |

## IX. ವಿಚಾರಣಾ ಪತ್ರಗಳ ಮೇಲೆ ಕೈಗೊಂಡಕ್ರಮ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜಿನೀಯರಿಂಗ್ ವಿಭಾಗ, ಗ್ರಂಥಾಲಯ ವಿಭಾಗ, ವಿದ್ಯಾಮಂಡಳ ವಿಭಾಗ, ಎನ್.ಎಸ್.ಎಸ್. ವಿಭಾಗ ಮತ್ತು ಇತರ ಘಟಕಗಳಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಒಟ್ಟಾರೆ 96 ವಿಚಾರಣೆಗಳನ್ನು ನೀಡಲಾಗಿದ್ದು, ಸದರಿ ವಿಚಾರಣೆಗಳಲ್ಲಿ 32 ವಿಚಾರಣೆಗಳಿಗೆ ಮಾತ್ರ ಮಾಹಿತಿ ನೀಡಲಾಗಿದ್ದು, ಇನ್ನುಳಿದ ಕಂಡಿಕೆಗಳಿಗೆ ಅನುಸರಣೆ ಸಲ್ಲಿಸದ ಪ್ರಯುಕ್ತ ಕಂಡಿಕೆಗಳನ್ನು ಮುಂದುವರೆಸಲಾಗಿದೆ.

## X. ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ.

ವಿಶ್ವವಿದ್ಯಾನಿಲಯದ 2010-11 ಹಾಗೂ 2017-18ನೇ ವರೆಗಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳ ಮತ್ತು ವಸೂಲಾತಿ ಕಂಡಿಕೆಗಳ ಮೊತ್ತ, ತೀರುವಳಿಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತದೆ.

**2010-11 ಹಾಗೂ 2017-18ನೇ ಸಾಲಿನವರೆಗಿನ ಲೆಕ್ಕ ತನಿಖಾ ವರದಿಗಳಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ಹಣದ ವಿವರಣಾ ಪಟ್ಟಿ**

| ಕ್ರ. ಸಂ. | ವರ್ಷ | ಆಕ್ಷೇಪಣೆ | | ವಸೂಲಾತಿ | |
|---|---|---|---|---|---|
| | | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ |
| 1 | 2 | 3 | 4 | 5 | 6 |
| 1 | 2010-11<br>2011-12 | 04 | 2,39,54,488.00 | 01 | 2,80,846.00 |
| 2 | 2012-13 | 04 | 91,63,428.00 | 03 | 4,64,900.00 |
| 3 | 2013-14<br>2014-15 | 22 | 4,77,01,639.00 | 09 | 31,23,643.00 |
| 4 | 2015-16<br>2016-17 | 15 | 4,58,29,349.00 | 16 | 1,95,50,820.00 |
| 5 | 2017-18 | 20 | 14,45,10,994.00 | 18 | 4,60,41,967.00 |
| | **ಒಟ್ಟು** | **65** | **27,11,59,898.00** | **47** | **6,94,62,176.00** |

ಬಾಕಿ ಉಳಿದಿರುವ ಕಂಡಿಕೆಗಳನ್ನು ಸಕಾಲದಲ್ಲಿ ತೀರುವಳಿ ಮಾಡದೆ ಇರುವುದರಿಂದ ನೌಕರರ ವರ್ಗಾವಣೆ, ನಿವೃತ್ತಿ, ಗುತ್ತಿಗೆಗಳ ಮುಕ್ತಾಯ ಇತ್ಯಾದಿ ಕಾರಣಗಳಿಂದ ವಸೂಲಿಸಬೇಕಾದ ಮೊತ್ತಗಳನ್ನು ವಸೂಲಿಸಲಾಗದೇ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ

ಸಂಭವವಿರುತ್ತದೆ. ಕರ್ನಾಟಕ ಬಜೆಟ ಕೈಪಿಡಿಯ ನಿಯಮ-303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಗುರುತಿಸಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಬಟವಾಡೆ ಅಧಿಕಾರಿಗಳು, ನಿಯಂತ್ರಣ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾನಿಲಯವು ಬಜೆಟ್ ಕೈಪಿಡಿಯ ನಿಯಮ-305ರ ಅನುಸಾರ ನಮೂನೆ-21ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಿರ್ವಹಿಸಬೇಕಿದ್ದು, ವಿಶ್ವವಿದ್ಯಾನಿಲಯವು ಸದರಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ಲೆಕ್ಕಪರಿಶೋಧನಾ ಕಂಡಿಕೆಗಳು ಸಂಚಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ. ಆಕ್ಷೇಪಣೆ ಕಂಡಿಕೆಗಳಿಗೆ ಪೂರಕ ದಾಖಲಾತಿಗಳೊಡನೆ ಸೂಕ್ತ ಅನುಪಾಲನಾ ವರದಿ ನೀಡುವ ಮೂಲಕ ಹಾಗೂ ವಸೂಲಾತಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಕೈಗೊಂಡ ಕ್ರಮಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಮಾಹೆಯ ಪ್ರತಿ ಮೂರನೇ ವಾರ ಹಾಜರುಪಡಿಸಿ ತರುವಾಯ ಅಡ್‌ಹಾಕ್ ಸಮಿತಿಯ ಮೂಲಕ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ಸೂಚಿಸಿದೆ.

## XI. ಕೈಗೊಳ್ಳಬೇಕಾದ ಕ್ರಮಗಳು:-

2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನ್ಯತೆಗಳು ಹಾಗೂ ವಿಶ್ವವಿದ್ಯಾಲಯದ ಆಡಳಿತ ವಿಭಾಗ, ಪರೀಕ್ಷಾ ವಿಭಾಗ, ಹಣಕಾಸು ವಿಭಾಗ, ಇಂಜಿನೀಯರಿಂಗ್ ವಿಭಾಗ, ಮತ್ತು ವಿವಿಧ ಘಟಕಗಳಲ್ಲಿ ಕಂಡುಬಂದ ಗುರುತರವಾದ ನ್ಯೂನ್ಯತೆಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮ 2000 ನಿಯಮ 47(4) ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

## XII. ಲೆಕ್ಕಪರಿಶೋಧನಾ ಕಛೇರಿಯಲ್ಲಿ ನಗದು ಖಾತೆಗಳ ಮತ್ತು ಇತರೆ ಖಾತೆಗಳ ರಸೀದಿಗಳು :-

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 47(2) ರ ಪ್ರಕಾರ ವಿಶ್ವವಿದ್ಯಾಲಯಗಳು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ವಿದ್ಯಾವರ್ಧಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಯಿಂದ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕು ಹಾಗೂ 47 (3) ರನ್ವಯ ಸದರಿ ಅನುಮೋದನೆಗೊಂಡ ಲೆಕ್ಕಪತ್ರಗಳನ್ನು ಏಪ್ರಿಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡಬೇಕು. ಆದರೆ ವಿಜಯನಗರ ಶ್ರೀಕೃಷ್ಣದೇವರಾಯ

ವಿಶ್ವವಿದ್ಯಾಲಯದವರು 2018-19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ: 30-11-2019 ರಂದು ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:07-12-2020 ರಂದು ಸಲ್ಲಿಸಿರುತ್ತಾರೆ. ಅಂದರೆ ಇಲ್ಲಿ ಈ ಮೇಲಿನ ನಿಯಮಗಳಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸದೇ ಇರುವ ಪ್ರಯುಕ್ತ ಲೆಕ್ಕಪರಿಶೋಧನೆಯು ವಿಳಂಬವಾಗಿರುತ್ತದೆ.

## XIII. ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ :-

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಇದರ 2018-19 ಮತ್ತು 2019-20ನೇ ಸಾಲಿನಲ್ಲಿ ಈ ಕೆಳಗಿನಂತೆ 09 ಜನ ತನಿಖಾ ಸಿಬ್ಬಂದಿಯಿಂದ ದಿನಾಂಕ:16-09-2021 ರಿಂದ 14-01-2022 ರವರೆಗೆ ಒಟ್ಟು 596 ಮಾನವ ದಿನಗಳನ್ನು ಉಪಯೋಗಿಸಿಕೊಂಡು ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕದ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಸಿಬ್ಬಂದಿ ವಿವರಗಳು | ವೇತನ |
|---|---|---|
| 1 | ಲೆಕ್ಕಪರಿಶೋಧನಾಧಿಕಾರಿ (2) | 2,99,156 |
| 2 | ಲೆಕ್ಕ ಅಧೀಕ್ಷಕರು (1) | 6,26,646 |
| 3 | ಲೆಕ್ಕಪರಿಶೋಧಕರು (6) | 15,89,395 |
| | **ಒಟ್ಟು (09)** | **25,15,197** |

ಸದರಿ ಸಾಲಿನ ಲೆಕ್ಕಪರಿಶೋಧನಾ ಶುಲ್ಕದ ಮೊತ್ತ **ರೂ.25,15,197/-ಗಳ** ಮೊತ್ತವನ್ನು ಲೆಕ್ಕ ಶೀರ್ಷಿಕೆ 0070~60~110~0~01~000ಗೆ ಸಂದಾಯ ಮಾಡಲು ಸೂಚಿಸಿದೆ.

**ಹಿಂದಿನ ಸಾಲಿನ ಬಾಕಿ ಸಮೇತ ಲೆಕ್ಕಪರಿಶೋಧನಾ ಶುಲ್ಕದ ವಸೂಲಾತಿಯ ಮೊತ್ತ.**

| | |
|---|---|
| ಆರಂಭಿಕ ಶಿಲ್ಕು | 18,74,704=00 |
| 2018-19 & 2019-20ನೇ ಸಾಲಿನ ಬೇಡಿಕೆ. | 25,15,197=00 |
| ವಸೂಲಾತಿ ಮೊತ್ತ | 0=00 |
| **ಬಾಕಿ** | **43,89,901=00** |

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಕಲಬುರಗಿ.

**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಪ್ರಸಕ್ತ ಸಾಲಿನ ಅಂದರೆ 2018-19 & 2019-20ನೇ ಸಾಲಿನ ಲೆಕ್ಕಪರಿಶೋಧನಾ ಕಂಡಿಕೆ ವರದಿಯಲ್ಲಿನ ಪ್ರಮುಖ ನ್ಯೂನ್ಯತೆಗಳು/ಆಕ್ಷೇಪಣೆ/ವಸೂಲಾತಿ ಪಟ್ಟಿ.**

| ಕ್ರ. ಸಂ | ಕಂಡಿಕೆ ಸಂಖ್ಯೆ | ಪ್ರಮುಖ ನ್ಯೂನತೆಗಳು | ಅನುಬಂಧ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | 7 | ವಿವಿಧ ಉದ್ದೇಶಗಳಿಗೆ ನೀಡಿರುವ ಮುಂಗಡಗಳನ್ನು ನಿಗದಿತ ಸಮಯದಲ್ಲಿ ಹೊಂದಾಣಿಕೆ ಮಾಡದೇ ಇರುವ ಕುರಿತು. | 03 | 0 | 6,34,909 |
| 2 | 8 | ಟೆಂಡರ್ ತಪ್ಪಿಸುವ ಉದ್ದೇಶದಿಂದ ದರಪಟ್ಟಿ ಕರೆಯುವುದರ ಮೂಲಕ ಸಾಮಗ್ರಿಗಳನ್ನು ಖರೀದಿಸಿರುವ ಕುರಿತು. | - | 2,30,694 | 0 |
| 3 | 9 | 2017-18ನೇ ಸಾಲಿನಲ್ಲಿ ಕರೆದ ಟೆಂಡರನ್ನು ಆಧರಿಸಿ 2018-19ನೇ ಸಾಲಿನಲ್ಲಿ ಕೆಮಿಕಲ್ಸ್‌ಗಳನ್ನು ಖರೀದಿಸಿರುವ ಬಗ್ಗೆ. | - | 4,20,880 | 0 |
| 4 | 10 | Supplying, Installing & commissioning of server AC,UPS, Software's, NAS Box & Networking to different Blocks of VSKUB ಬಿಲ್ ಪಾವತಿ/ಟೆಂಡರ್ ಪ್ರಕ್ರಿಯೆಯಲ್ಲಿ ಗಮನಿಸಿದ ನ್ಯೂನತೆಗಳು. | - | 30,27,555 | 0 |
| 5 | 11 | ಬಳ್ಳಾರಿ ವಿಶ್ವವಿದ್ಯಾಲಯದ ಸ್ನಾತಕೊತ್ತರ ಕೋರ್ಸಗಳ ಪ್ರವೇಶ ಶುಲ್ಕವನ್ನು ವಸೂಲಿಸುವ ಬಗ್ಗೆ. | 04 | 0 | 58,13,502 |
| 6 | 12 | Work completion Reports ಇಲ್ಲದೇ ಕಾಮಗಾರಿಗಳ ಅಂತಿಮ ಬಿಲ್ಲು ಪಾವತಿಸಿರುವ ಬಗ್ಗೆ | - | 1,57,42,558 | 0 |
| 7 | 13 | ಮುಖ್ಯ ದ್ವಾರದಲ್ಲಿ ನಾಮಫಲಕ ಅಳವಡಿಸುವುದು, ಕಲ್ಲಿನ ಕಟ್ಟಡ, ವಿದ್ಯುತ್ ಮತ್ತು ಇತರೆ ಕೆಲಸಗಳು | - | 23,91,725 | 0 |
| 8 | 14 | C/o Faculty Building at VSKUB campus ಕಾಮಗಾರಿಯ ಭದ್ರತಾ ಠೇವಣಿ ಹಣ ಬಿಡುಗಡೆ ಕುರಿತು. | - | 43,72,269 | 0 |
| 9 | 15 | C/O Faculty Building (GF& FF) at VSKUB campus ಕಾಮಗಾರಿಯ VII RA ಬಿಲ್ಲಿನ ಕುರಿತು. | - | 1,14,08,607 | 0 |
| 10 | 17 | ದರಪಟ್ಟಿ ಅಧಿಸೂಚನೆ ಹೊರಡಿಸುವದಕ್ಕಿಂತ ಮೊದಲೇ ದರಪಟ್ಟಿ ಪಡೆದ ಬಗ್ಗೆ. | - | 0 | 14,700 |

| | | | | | |
|---|---|---|---|---|---|
| 11 | 19 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನ ಸಾಗರ ಆವರಣದಲ್ಲಿ ಡಾ.ಬಾಬು ಜಗಜೀವನರಾಮ ಮತ್ತು ಡಾ. ಬಿ.ಆರ್.ಅಂಬೇಡ್ಕರ ಇವರುಗಳ ಪ್ರತಿಮೆಗಳನ್ನು ಒದಗಿಸಿ ಪ್ರತಿಷ್ಠಾಪಿಸಲು ಪ್ಲಾಟ್ ಫಾರಂಗಳನ್ನು ನಿರ್ಮಿಸುವ ಕಾಮಗಾರಿ ಕುರಿತು | 06 | 15,98,327 | 0 |
| 12 | 20 | 2018-19ನೇ ಸಾಲಿನಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯುವ ಸಂಬಂಧ ಕರೆದ ಟೆಂಡರ್‌ನಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು. | - | 0 | 3,95,423 |
| 13 | 21 | 2018-19 ಮತ್ತು 2019-20ನೇ ಸಾಲಿನಲ್ಲಿ ಸರ್ಕಾರದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ಹೊರಗುತ್ತಿಗೆಯ ಆಧಾರದ ಮೇಲೆ ಸೇವೆಯನ್ನು ಪಡೆದಿರುವ ಕುರಿತು. | - | 2,35,05,216 | 0 |
| 14 | 22 | ಮುಂಗಡ ಹಣದ ಹೊಂದಾಣಿಕೆಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳು. | - | 14,916 | 10,630 |
| 15 | 23 | ದರಪಟ್ಟಿ ಕರೆಯದೇ ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ. | - | 0 | 99,000 |
| 16 | 25 | ವಿದ್ಯಾರ್ಥಿ ವಿಕಾಸ ನಿಧಿ ಟ್ರಸ್ಟ್‌ನಿಂದ ಮುದ್ರಣವಾಗುವ YUGDRSHATA ನಿಯತಕಾಲಿಕೆಗೆ ವಿಶ್ವವಿದ್ಯಾಲಯದ ವತಿಯಿಂದ ರೂ. 1.00 ಲಕ್ಷ ದೇಣಿಗೆ ನೀಡಿರುವ ಕುರಿತು. | - | 0 | 1,00,000 |
| 17 | 26 | ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ರವರಿಗೆ ದೇಣಿಗೆ ರೂಪದಲ್ಲಿ ರೂ.10,000/- ಗಳನ್ನು ನೀಡಿರುವ ಕುರಿತು. | - | 0 | 10,000 |
| 18 | 27 | ಪ್ರಶ್ನೆ ಪತ್ರಿಕೆ ಮುದ್ರಣ ಬಿಲ್ಲಿನಲ್ಲಿ ಗಮನಿಸಿದ ನ್ಯೂನ್ಯತೆಗಳು. | 07 | 66,58,685 | 2,58,512 |
| 19 | 28 | ಡಾ॥ ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕಾಗಿ ಬಿಡುಗಡೆಯಾದ ಅನುದಾನವನ್ನು ನಿರ್ವಹಿಸುವಲ್ಲಿ ಕಂಡುಬಂದಿರುವ ನ್ಯೂನತೆಗಳ ಕುರಿತು. | - | 2,67,090 | 0 |
| 20 | 29 | 2019-20ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಹಾಗೂ ವಿಸ್ತರಣೆ ಶುಲ್ಕ ವಸೂಲಿಸುವ ಕುರಿತು. | 08 | 13,44,310 | 12,41,208 |

| | | | | | |
|---|---|---|---|---|---|
| 21 | 30 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ಬಾಕಿ ಇರುವ ಪ್ರವೇಶ ಶುಲ್ಕವನ್ನು ವಸೂಲಾತಿಸುವ ಬಗ್ಗೆ | 09 & 10 | 0 | 6,84,84,210 |
| 22 | 31 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ಬಾಕಿ ಇರುವ ಪ್ರವೇಶ ಶುಲ್ಕವನ್ನು ವಸೂಲಾತಿಸುವ ಬಗ್ಗೆ. | 11 & 12 | 0 | 5,52,05,564 |
| 23 | 32 | 2020-21ನೇ ಸಾಲಿನ ಸಂಯೋಜನಾ ಶುಲ್ಕ ವಸೂಲಾತಿಯಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿ/ ಅಧಿಕಾರಿಗಳಿಂದ ವಂಚನೆಯ ಪ್ರಕರಣ ಕಂಡುಬಂದಿರುವ ಕುರಿತು | 13 & 14 | 0 | 2,12,416 |
| 24 | 33 | ಬಳ್ಳಾರಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಶುಲ್ಕವನ್ನು ವಸೂಲಿಸುವ ಬಗ್ಗೆ. | 15 | 0 | 29,76,755 |
| 25 | 34 | 2020-21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಹಾಗೂ ವಿಸ್ತರಣೆ ಶುಲ್ಕ ವಸೂಲಿಸುವ ಕುರಿತು. | 16 | 6,29,808 | 89,400 |
| 26 | 35 | VSKUB ಯ ಜ್ಞಾನ ಸಾಗರ ಆವರಣದಲ್ಲಿನ ರಾಜ್ಯಪಾಲರ ಸೂಟ್ ಮತ್ತು ಅತೀ ಗಣ್ಯರ ಅತಿಥಿಗೃಹಗಳಿಗೆ ಬೇಕಾಗುವ ಪೀಠೋಪಕರಣ ಕುರಿತು. | 17 | 75,31,525 | 0 |
| 27 | 36 | ಟೆಂಡರ ಕರೆಯುವುದನ್ನು ತಪ್ಪಿಸಲು ಖರೀದಿಗಳನ್ನು ವಿಂಗಡಿಸಿರುವ ಬಗ್ಗೆ. | 18 | 3,29,870 | 0 |
| 28 | 38 | ಕುಲಪತಿಗಳ ನಿವಾಸದ ಕೊಠಡಿಗೆ ಅಗತ್ಯವಾದ ಪೀಠೋಪಕರಣಗಳನ್ನು ಖರೀದಿಸುವಲ್ಲಿ ಕೆ.ಟಿ.ಪಿ.ಪಿ ನಿಯಮವನ್ನು ಉಲ್ಲಂಘಿಸಿರುವ ಕುರಿತು. | - | 2,52,580 | 0 |
| 29 | 39 | ಮುದ್ದತ್ತು ಠೇವಣಿಗಳಲ್ಲಿ ಹಣ ಮಾಡಿಸುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದಿರುವ ಕುರಿತು. | 19ಎ, ಬಿ & ಸಿ. | 17,54,32,734 | 0 |
| 30 | 40 | Sep/Oct-2018 ಮತ್ತು May/ June 2019 ರಲ್ಲಿ ನಡೆಸಿದ ಪರೀಕ್ಷಾ ಅಧಿವೇಶನಕ್ಕೆ ಸಾಮನ್ಯ ವರ್ಗದ (GM) ವಿದ್ಯಾರ್ಥಿಗಳಿಂದ ಕಡಿಮೆ ಪರೀಕ್ಷಾ ಶುಲ್ಕ ವಸೂಲಿಸಿದ ಕುರಿತು. | 20 ಎ & ಬಿ | 0 | 33,33,945 |

| | | | | | |
|---|---|---|---|---|---|
| 31 | 41 | ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ವಿದ್ಯಾವಿಷಯಕ ಪರಿಷತ್ ಸಭೆ/ ಸಿಂಡಿಕೇಟ್ ಸಭೆ/BOS ಸಭೆ ಮತ್ತು ಸಂದರ್ಶನಗಳಿಗೆ ಹಾಜರಾಗಿದ್ದಕ್ಕೆ ಆಸನ ಭತ್ಯೆಯನ್ನು ನೀಡಿರುವ ಕುರಿತು. | 21 | 0 | 46,500 |
| 32 | 42 | 7ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮದಲ್ಲಿ ಟೆಂಡರ್ ಕರೆಯದೇ ನೇರವಾಗಿ ವಿವಿಧ ಏಜೆನ್ಸಿಗಳಿಂದ ದರಪಟ್ಟಿ ಕರೆದು ಸಾಮಗ್ರಿ & ಸೇವೆಯನ್ನು ಪಡೆದಿರುವ ಬಗ್ಗೆ. | – | 8,17,252 | 0 |
| 33 | 43 | 2019-20ನೇ ಸಾಲಿನಲ್ಲಿ ಜರುಗಿಸಲಾದ 7ನೇ ಘಟಿಕೋತ್ಸವ ಸಮಾರಂಭದಲ್ಲಿ KTPP ನಿಯಮ ಪಾಲಿಸದೇ ಸರಕು/ ಸಾಮಗ್ರಿಗಳನ್ನು ಖರೀದಿಸಿರುವ ಕುರಿತು. | – | 6,93,060 | 0 |
| 34 | 44 | ವಾರ್ಷಿಕ ಲೆಕ್ಕ ಪತ್ರದಲ್ಲಿ ನಮೂದಿಸಿದ ವಲಸೆ ಪ್ರಮಾಣ ಪತ್ರಗಳ ಸ್ವೀಕೃತಿ ಶುಲ್ಕದ ಮೊತ್ತಕ್ಕೂ ಮತ್ತು ವಿಶ್ವವಿದ್ಯಾಲಯದವರು ಒದಗಿಸಿದ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸವಿರುವ ಕುರಿತು. | – | 7,34,122 | 0 |
| 35 | 49 | ಟೆಂಡರ್ ಕರೆಯುವುದನ್ನು ತಪ್ಪಿಸಲು ಖರೀದಿಗಳನ್ನು ವಿಂಗಡಿಸಿ ಉಪಕರಣಗಳನ್ನು ಖರೀದಿಸಿದ ಬಗ್ಗೆ. | – | 1,99,638 | 0 |
| 36 | 50 | ಪ್ರಯೋಗಾಲಯದಲ್ಲಿರುವ ಅನಿಲ ಸಂಪರ್ಕಗಳ ದುರಸ್ತಿ ಕಾರ್ಯಕ್ಕೆ ಸಂಬಂಧಿಸಿದ ನ್ಯೂನತೆಗಳು. | – | 20,735 | 0 |
| 37 | 54 | ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಕುರಿತು. | – | 24,28,000 | 0 |
| | | | **ಒಟ್ಟು** | **26,00,52,156** | **13,89,26,674** |

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಕಲಬುರಗಿ.

## ಭಾಗ-2

01. **ಕೊರತೆಯ ಆಯವ್ಯಯವನ್ನು ಮಂಡಿಸಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-2019ನೇ ಸಾಲಿನ ಆಯವ್ಯಯ ಆರ್ಥಿಕ ಸಮಿತಿಯಲ್ಲಿ ದಿನಾಂಕ:26-03-2018 ರಂದು ಮತ್ತು 2019-2020ನೇ ಸಾಲಿನ ಆಯವ್ಯಯ ಆರ್ಥಿಕ ಸಮಿತಿಯಲ್ಲಿ ದಿನಾಂಕ:25-03-2019 ರಂದು ಅನುಮೋದನೆ ಪಡೆಯಾಗಿದೆ. ಆಯವ್ಯಯ ತಯಾರಿಕೆಯಲ್ಲಿ ಅಂದಾಜು ಸ್ವೀಕೃತಿ ಮತ್ತು ವೆಚ್ಚಗಳ ನಡುವೆ ತುಂಬಾ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ ಮತ್ತು ಹಲವು ವರ್ಷಗಳಿಂದ ಕೊರತೆಯ ಆಯವ್ಯಯವನ್ನು ಮಂಡಿಸುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಸಂಬಂಧ ವಿಶ್ವವಿದ್ಯಾಲಯದವರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

ಈ ಕುರಿತು ಕರ್ನಾಟಕ ಆಯವ್ಯಯ ಕೈಪಿಡಿ ನಿಯಮ 110 ರಲ್ಲಿ ತಿಳಿಸಿರುವಂತೆ "ಮುಂಬರುವ ವರ್ಷಕ್ಕಾಗಿ ಅಂದಾಜುಗಳನ್ನು ತಯಾರಿಸುವಲ್ಲಿ ಹಿಂದಿನ ಮೂರು ವರ್ಷಗಳ ವಾಸ್ತವಿಕ ಸರಾಸರಿಯನ್ನು ಮತ್ತು ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳನ್ನು ತಪ್ಪದೇ ದೃಷ್ಟಿಯಲ್ಲಿಟ್ಟುಕೊಂಡಿರಬೇಕು, ಸುಲಭದಲ್ಲಿ ಪುನರಾವರ್ತನೆ ಮಾಡಬಹುದಾದ ಸಂಗತಿ ಎಂದಲ್ಲ, ಆದರೆ ಜಾಣ್ಮೆಯ ನಿರೀಕ್ಷೆಗೆ ಆಧಾರವಾಗಿ ಆ ನಿರೀಕ್ಷೆಯು ವೆಚ್ಚದ ಏರಿಕೆ ಮತ್ತು ಇಳಿಕೆಯಲ್ಲಿ ಕಂಡುಬರುವ ಯಾವುದೇ ಪ್ರವೃತ್ತಿಯನ್ನು ಕಳೆದ ವರ್ಷಗಳ ಅವಧಿಯಲ್ಲಿದ್ದ ಯಾವುದೇ ಅಸಾಧಾರಣ ಲಕ್ಷಣಗಳನ್ನು, ವೆಚ್ಚದ ಅಧಿಕ್ಯದಲ್ಲಿನ ಯಾವುದೇ ಗುರುತಿಸಬಹುದಾದ ಕ್ರಮಬದ್ಧತೆಯನ್ನು ಮತ್ತು ಆಯವ್ಯಯ ವರ್ಷದ ಅವಧಿಯಲ್ಲಿ ನಿಶ್ಚಿತವೆಂದು ತಿಳಿಯಲಾದ ಅಥವಾ ಸಂಭವಿಸಬಹುದಾದ ಯಾವುದೇ ವಿಶೇಷ ಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕು" ಎಂದಿರುತ್ತದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 85 ರಂತೆ "ಸರ್ಕಾರಿ ಲೆಕ್ಕಗಳನ್ನು ಸಾಮಾನ್ಯವಾಗಿ ನಗದು ಆಧಾರದ ಮೇಲೆ ನಿರ್ವಹಿಸುವುದರಿಂದ, ಆಯವ್ಯಯ ವರ್ಷದ ಅವಧಿಯಲ್ಲಿ ಅಂದಾಜು ಅಧಿಕಾರಿಯು ವಾಸ್ತವವಾಗಿ ವಸೂಲು ಮಾಡಬೇಕೆಂದು ಅಥವಾ ಪಾವತಿ ಮಾಡಬೇಕೆಂದು, ನಿರೀಕ್ಷಿಸುವಂಥ ಜಮೆಗಳನ್ನು ಮತ್ತು ಸಂದಾಯಗಳನ್ನು ಮಾತ್ರ ಅಂದಾಜುಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಸಾಧ್ಯವಾದಷ್ಟು ಮಟ್ಟಿಗೆ ಅಂದಾಜನ್ನು ನಿಖರಗೊಳಿಸುವುದು ಇದರ ಉದ್ದೇಶವೇ ಹೊರತು ಮಿತಿಮೀರಿದ ಅಂದಾಜುಗಳನ್ನು ಮಾಡಿ ವರ್ಷದ ಕೊನೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಉಳಿತಾಯಗಳನ್ನು ತೋರಿಸುವುದು,

ಯಾವಾಗಲೂ ಸುರಕ್ಷಿತ ಸ್ಥಿತಿಯಲ್ಲಿರಬೇಕೆಂಬ ಉದ್ದೇಶದಿಂದ ರಾಜ್ಯಾದಾಯವನ್ನು ಕಡಿಮೆ ಅಂದಾಜಿಸಿ ವೆಚ್ಚವನ್ನು ಮಿತಿಮೀರಿ ಅಂದಾಜಿಸುವ ಪ್ರವೃತ್ತಿಯನ್ನು ತಪ್ಪಿಸಬೇಕು" ಎಂದಿರುತ್ತದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 331 ರನ್ವಯ, "ಹಣಕಾಸಿನ ಮತ್ತು ಆಯವ್ಯಯ ಸ್ಥಿತಿಗತಿಯ ಬಗ್ಗೆ ನಿರಂತರ ನಿಗಾ ಇಡುವುದು ಮತ್ತು ಸಂಪನ್ಮೂಲಗಳ ಮತ್ತು ಖರ್ಚುಗಳ ನಡುವೆ ಶಾಶ್ವತ ಅಸಮತೋಲನ ಬಾರದಂತೆ ನೋಡಿಕೊಳ್ಳುವುದು, ಹೆಚ್ಚುವರಿ ಬದ್ಧತೆಗಳು ತಪ್ಪಿಸಲಾಗದಿದ್ದಲ್ಲಿ ಹೊಸ ಸಂಪನ್ಮೂಲಗಳ ಕ್ರೋಢೀಕರಣದ ಮೂಲಕ ಅಥವಾ ಯೋಜನಾ ವೆಚ್ಚವನ್ನು ಕಡಿತಗೊಳಿಸುವ ಮೂಲಕ ವೆಚ್ಚಗಳನ್ನು ಪೂರೈಸಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ" ಎಂದಿರುತ್ತದೆ.

ಆದರೆ ವಿಶ್ವವಿದ್ಯಾಲಯದವರು ಈ ಮೇಲೆ ತಿಳಿಸಿದ ಯಾವುದೇ ನಿಯಮಗಳನ್ನು ಪಾಲಿಸದೇ ಪ್ರತಿ ವರ್ಷ ಕೊರತೆಯ ಆಯವ್ಯಯವನ್ನು ಮಂಡಿಸುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವರ್ಷ | ಆದಾಯ(ಲಕ್ಷ) | ವೆಚ್ಚ(ಲಕ್ಷ) | ಕೊರತೆ (ಲಕ್ಷ) |
|---|---|---|---|---|
| 1 | 2018–19 | 5271.94 | 17083.06 | (–) 11,811.12 |
| 2 | 2019–20 | 7509.70 | 7723.66 | (–) 213.96 |

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ 2018–19 ಮತ್ತು 2019–20ನೇ ಸಾಲಿನಲ್ಲಿ ಆದಾಯಕ್ಕಿಂತಲೂ ವೆಚ್ಚ ಹೆಚ್ಚಾಗಿ ಭರಿಸಿದ್ದು, ಇದು ಕೊರತೆಯ ಆಯವ್ಯಯವನ್ನು ಮಂಡಿಸಿರುವುದು ಸ್ಪಷ್ಟವಿದೆ. ಪ್ರಯುಕ್ತ ಸದರಿ ಕೊರತೆಯ ಆಯವ್ಯಯ ಮಂಡಿಸಿರುವುದಕ್ಕೆ ಸ್ಪಷ್ಟೀಕರಣ ನೀಡಲು ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:02 ದಿನಾಂಕ:21-09-2021 ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಲಾಗಿದೆ.

**೦2. ವಾರ್ಷಿಕ ಲೆಕ್ಕ ಪತ್ರದಲ್ಲಿ ಅತ್ಯಾವಶ್ಯಕ ಆರ್ಥಿಕ ತಃಖ್ತೆಗಳನ್ನು ಅಳವಡಿಸದೇ ಇರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವಾರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾಲಯದವರು ಕೇವಲ ಬ್ಯಾಂಕಿನ ತಃಖ್ತೆಗಳನ್ನು ಮಾತ್ರ ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸಿಕೊಂಡಿರುತ್ತಾರೆ. ಇದರಿಂದಾಗಿ ಪರಿಪೂರ್ಣವಾದ ಆರ್ಥಿಕ ತಃಖ್ತೆಗಳನ್ನು ಅಳವಡಿಸಿಕೊಂಡಿದ್ದಾರೆಂದು ಹೇಳಲು ಕಷ್ಟಸಾಧ್ಯ. ಒಂದು ಸಂಸ್ಥೆಯ ಆರ್ಥಿಕ ತಃಖ್ತೆಗಳೆಂದರೆ.

1) ಸಮತೋಲನ ಪಟ್ಟಿ (Balance sheet)
2) ಸ್ವೀಕೃತಿ ಮತ್ತು ಪಾವತಿಗಳು (Receipts and payments)
3) ಉಳಿತಾಯ ಮತ್ತು ಠೇವಣಿಗಳು (Debt and deposits)
4) ಬ್ಯಾಂಕಿನ ತಃಖ್ತೆಗಳು (Bank statement)

ಈ ಮೇಲೆ ತಿಳಿಸಿದ ಅತ್ಯಾವಶ್ಯಕ ತಃಖ್ತೆಗಳು ಯಾವುದೇ ಒಂದು ವಿಶ್ವವಿದ್ಯಾಲಯದ ಸ್ವೀಕೃತಿ ಮತ್ತು ವೆಚ್ಚಗಳನ್ನು ತಿಳಿಯಲು ಪ್ರಮುಖ ಪಾತ್ರ ವಹಿಸುವುದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸಿಕೊಳ್ಳುವುದು ಕೂಡಾ ತುಂಬಾ ಅವಶ್ಯಕವಾಗಿರುತ್ತದೆ ಮತ್ತು ಸದರಿ ಆರ್ಥಿಕ ತಃಖ್ತೆಗಳು ವಾರ್ಷಿಕ ಲೆಕ್ಕಪತ್ರದಲ್ಲಿದ್ದರೆ ಅದು ಪರಿಪೂರ್ಣವಾದ ವಾರ್ಷಿಕ ಲೆಕ್ಕಪತ್ರಗಳೆಂದು ಕರೆಯಬಹುದೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿನ ಸಮತೋಲನ ಪಟ್ಟಿಯಿಂದ ಮಾತ್ರ ಒಂದು ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಸಾಧ್ಯ.

ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ 2000 ರ ನಿಯಮ 47 ರಲ್ಲಿ, "The annual accounts of the University shall be prepared under the direction of syndicate" ಎಂದಿರುತ್ತದೆ. ದಿನಾಂಕ:11-03-2016 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಐಟಂ ನಂ.19 ರಲ್ಲಿ, "ವಿಶ್ವವಿದ್ಯಾಲಯದ ಸಮತೋಲನ ಪಟ್ಟಿಯನ್ನು (Balance sheet) ನ್ನು ಸಿದ್ಧಪಡಿಸಲು ಶ್ರೀ ಶ್ರೀನಿವಾಸ ತಿವಾರಿಯವರಿಗೆ ಜವಾಬ್ದಾರಿಯನ್ನು ವಹಿಸಲು ತೀರ್ಮಾನಿಸಲಾಯಿತು" ಎಂದಿರುತ್ತದೆ. ಆದರೆ ವಿಶ್ವವಿದ್ಯಾಲಯದವರು ಈ ಕುರಿತು ಯಾವುದೇ ಕ್ರಮವನ್ನು ಕೈಗೊಳ್ಳದೇ ಸಿಂಡಿಕೇಟ್ ನಿರ್ಣಯವನ್ನು ಕಡೆಗಣಿಸಿರುತ್ತಾರೆ ಮತ್ತು ಇಲ್ಲಿಯವರೆಗೆ ಸಮತೋಲನ ಪಟ್ಟಿಯನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾಲಯದವರು ಒದಗಿಸಿದ ಅಪರಿಪೂರ್ಣ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಮಾಣೀಕರಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ ಮತ್ತು ಸದರಿ ತಃಖ್ತೆಗಳು ಅಳವಡಿಸದೇ ಇರುವುದರಿಂದ ವಿಶ್ವವಿದ್ಯಾಲಯದಲ್ಲಿ ಯಾವುದಾದರು ದುರುಪಯೋಗಗಳು ಸಂಭವಿಸಿದರೆ ಹಣಕಾಸು ವಿಭಾಗ ಮತ್ತು ಹಣಕಾಸು ಅಧಿಕಾರಿಗಳು ನೇರ ಜವಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ **ಪತ್ರ ಸಂಖ್ಯೆ:03 ದಿನಾಂಕ: 21-09-2021** ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಲಾಗಿದೆ.

**೦3. ಆಯವ್ಯಯದಲ್ಲಿ ಅವಕಾಶ ಒದಗಿಸಿದ್ದರೂ ಖರ್ಚು ಮಾಡದೇ ಇರುವ ಕುರಿತು**.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2018-19 ಮತು 2019-20ನೇ ಸಾಲಿನ ಆಯವ್ಯಯವನ್ನು ಪರಿಶೀಲಿಸಲಾಗಿ ಆಯವ್ಯಯ ಅಂದಾಜಿನ ಕೆಲವು ಲೆಕ್ಕ ಶೀರ್ಷಿಕೆಗಳು ಹಿಂದಿನ ವರ್ಷ ಯಾವುದೇ ವೆಚ್ಚವಾಗಿಲ್ಲದಿದ್ದರೂ ಅನಗತ್ಯವಾಗಿ ಪ್ರಸಕ್ತ ವರ್ಷದಲ್ಲಿ ಸಹ ಆಯವ್ಯಯವನ್ನು ಕಲ್ಪಿಸಲಾಗಿದೆ.

ಬಜೆಟ್ ಕೈಪಿಡಿ 109 ರನ್ವಯ "The estimates of the current year must never be adopted blindly as a basis for framing those of the following years. There is always a temptation to save trouble by taking the current years estimate for granted and adding something to certain items on which increased expenditure is foreseen, this tendency is to be strongly depreciated. The Estimating officer must give his closest personal attention to each and every items and see that the items of expenditure which have become obsolete are omitted"ಎಂದಿರುತ್ತದೆ. ಅಂದರೆ ಬಳಕೆಯಲ್ಲಿಲ್ಲದ ಆಯವ್ಯಯವನ್ನು ಪದೇ-ಪದೇ ಅವಕಾಶಕ್ಕೆ ಎಡೆಮಾಡದೇ ಆಯವ್ಯಯದಿಂದ ತೆಗೆದು ಹಾಕಿ ಬಳಕೆಯಲ್ಲಿರುವ ಅಂಶಗಳಿಗೆ ಮಾತ್ರ ಪರಿಗಣಿಸಬೇಕೆಂದಿರುತ್ತದೆ.

ಬಜೆಟ್ ಕೈಪಿಡಿ 110ರನ್ವಯ "In preparing the estimates for the coming year, the average of the actuals of the past three years, as also the revised estimates for the current year, should invariably be kept in sight not as something that could conveniently be repeated but as a basis for an intelligent anticipation which takes into account any noticeable tendency for the expenditure to rise or decline, any abnormal features during the past years, any recognisable regularity in the pitch of the expenditure and any special features known to be certain or likely to arise during the budget year" ಎಂದಿರುತ್ತದೆ.

2018-19 ಮತ್ತು 2019-20ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಒದಗಿಸಿದರೂ ಸಹ ಕೆಲವು ಶೀರ್ಷಿಕೆಗಳಲ್ಲಿ ಖರ್ಚು ಮಾಡದೇ ಇರುವುದನ್ನು **ಅನುಬಂಧ-1ರಲ್ಲಿ** ನಮೂದಿಸಲಾಗಿದೆ. ಆಯವ್ಯಯದಲ್ಲಿ ಅವಕಾಶ ಒದಗಿಸಿದರೂ ಖರ್ಚುಮಾಡದೇ ಇರುವುದಕ್ಕೆ ಸ್ಪಷ್ಟೀಕರಣ ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:06, ದಿನಾಂಕ: 22-09-2021 ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಲಾಗಿದೆ.

**೦4. ಆಯವ್ಯಯದಲ್ಲಿ ಒದಗಿಸಿದ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾಗಿ ಖರ್ಚು ಮಾಡಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-2019ನೇ ಸಾಲಿನಲ್ಲಿ ನಮೂದಿಸಿರುವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಆಯವ್ಯಯ ಅಂದಾಜು ಮೊತ್ತ ರೂ.96,48,000/-ಗಳಿದ್ದು, ವಾಸ್ತವಿಕ ವೆಚ್ಚ ರೂ.1,01,49,000/-ಗಳಾಗಿದ್ದು, ವ್ಯತ್ಯಾಸ ರೂ.5,01,000/-ಗಳಷ್ಟು ಇರುತ್ತದೆ. ಮತ್ತು 2019-20ನೇ ಸಾಲಿನಲ್ಲಿ ಆಯವ್ಯಯ ಅಂದಾಜು ಮೊತ್ತ ರೂ.64,66,000/-ಗಳಿದ್ದು, ವಾಸ್ತವಿಕ ವೆಚ್ಚ ರೂ.83,75,000/-ಗಳಾಗಿದ್ದು, ವ್ಯತ್ಯಾಸ ರೂ.19,09,000/-ಗಳಷ್ಟು ಇರುತ್ತದೆ. ಆಯವ್ಯಯ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ಆಯವ್ಯಯದಲ್ಲಿ ಒದಗಿಸಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಖರ್ಚು ಮಾಡಿರುವ ವಿವರವನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ 2000 ನಿಯಮ 48(2)ರಲ್ಲಿ ತಿಳಿಸಿರುವಂತೆ, "The syndicate may in cases where expenditure in excess of the amount provided in the budget is to be incurred or in cases of urgency for reasons to be recorded in writing incur expenditure subject to such restrictions and conditions specified in the statutes where no provision has been made in the budget in respect of such excess expenditure, a report shall be made to the academic council its next meeting" ಎಂದಿರುತ್ತದೆ. ಈ ನಿಯಮದ ಕುರಿತು ವಿಶ್ವವಿದ್ಯಾಲಯದವರು ಯಾವುದೇ ದಾಖಲಾತಿಗಳನ್ನು ಒದಗಿಸಿರುವುದಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ 2000 ರ ನಿಯಮ 48(4)ರಲ್ಲಿ "The University shall, without the prior approval of the State Government not divert for other purposes earmarked funds or revise scales of pay of its staff or implement any scheme which involves any matching contribution from the State Government or a scheme which imposes a recurring liability on the State Government after the assistance from the sponsoring authorities," ಎಂದಿರುತ್ತದೆ.

ಈ ಮೇಲೆ ತಿಳಿಸಿರುವ ನಿಯಮಗಳಲ್ಲಿ ಆಯವ್ಯಯಕ್ಕಿಂತಲೂ ಹೆಚ್ಚಿಗೆ ಖರ್ಚು ಮಾಡಬಹುದಾದ ಸಂದರ್ಭದಲ್ಲಿ ಸ್ಟ್ಯಾಟ್ಯುಟ್‌ನಲ್ಲಿ ತಿಳಿಸಿರುವಂತೆ ಮತ್ತು ಲಿಖಿತ ಕಾರಣಗಳನ್ನು ದಾಖಲಿಸಿ ಖರ್ಚು ಮಾಡಬಹುದೆಂದು ಮತ್ತು ರಾಜ್ಯ ಸರ್ಕಾರದ ಅನುಮತಿಯಿಲ್ಲದೆ ಅನುದಾನವನ್ನು ಬೇರೆ ಕೆಲಸಗಳಿಗೆ ಉಪಯೋಗಿಸತಕ್ಕದಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರೂ ವಿಶ್ವವಿದ್ಯಾಲಯದವರು ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮೊತ್ತಕ್ಕಿಂತ ಹೆಚ್ಚಾಗಿ ಖರ್ಚು ಮಾಡಿ ಸದರಿ ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆಯನ್ನು ಉಲ್ಲಂಘಿಸಿರುತ್ತಾರೆ.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:07 ದಿನಾಂಕ:22-09-2021 ನೀಡಲಾಗಿದೆ**. ಪ್ರಯುಕ್ತ ಆಯವ್ಯಯಕ್ಕಿಂತಲೂ ಹೆಚ್ಚಾಗಿ ಖರ್ಚು ಯಾವ ಆಧಾರದ ಮೇಲೆ ಮಾಡಲಾಗಿದೆ ಎಂದು ತಿಳಿಸಲು ಸೂಚಿಸಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಪುನರ್ ವಿನಿಯೋಗ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ವಿವರಣೆಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಒದಗಿಸುವವರೆಗೂ ಕಂಡಿಕೆಯನ್ನು ಮುಂದುವರೆಸಿದೆ.

**೦೫. 2017-18 ರಲ್ಲಿ ಖರೀದಿಸಿದ ಸಾಮಾಗ್ರಿ 2018-19 ರಲ್ಲಿ ಪಾವತಿ ಮಾಡಿರುವ ಕುರಿತು**.

2017-18 ರಲ್ಲಿ ಖರೀದಿಸಿದ ಸಾಮಾಗ್ರಿ 2018-19 ರಲ್ಲಿ ಪಾವತಿ ಮಾಡಿರುವ ವೋಚರ್ ಸಂಖ್ಯೆ: 35 ಚೆಕ್ ಸಂಖ್ಯೆ: 359669 ದಿನಾಂಕ: 20/04/2018 ರನ್ವಯ ಐ.ಡಿ. ಪ್ರಿಂಟರ್ MA 250 YMCKOK ಖರೀದಿಸಿ Delta Technologies Bangalore ರವರಿಗೆ ರೂ.93,368/-ಗಳು ಪಾವತಿಸಿರುವುದು ಕಂಡುಬಂದಿದೆ. ಸದರಿ ವೋಚರ್ ಸಂಖ್ಯೆಯನ್ನು ಪರಿಶೀಲಿಸಿದಾಗ ಏಜೆನ್ಸಿ ರವರು ಮಾರ್ಚ್-2017 ರಲ್ಲಿ ದರಪಟ್ಟಿ ಸಲ್ಲಿಸಿರುವುದನ್ನು ಮತ್ತು ದಿನಾಂಕ:31-08-2017 ರಂದು ಕುಲಸಚಿವರು ರೂ.93,368/-ಗಳನ್ನು ಪಾವತಿಸಲು Financial Sanction ನೀಡಿದ್ದರೂ ಕೂಡ ದರಪಟ್ಟಿ ಕರೆದ ಸುಮಾರು 13 ತಿಂಗಳ ನಂತರ ಪಾವತಿ ಮಾಡಿರುವುದು ಸಂಶಯಾಸ್ಪದವಾಗಿರುವುದರಿಂದ, ಈ ಕೆಳಗೆ ನೀಡಿರುವ ಅಂಶಗಳಗೆ ಸೂಕ್ತ ವಿವರಣೆ ಮತ್ತು ಅಗತ್ಯ ದಾಖಲೆ ಒದಗಿಸಲು ತಿಳಿಸಿದೆ.

1. ದರಪಟ್ಟಿ ಅಧಿಸೂಚನೆ ಪ್ರತಿ.
2. ದರಪಟ್ಟಿಯಲ್ಲಿ ಭಾಗವಹಿಸಿದ ಎಲ್ಲಾ ಏಜೆನ್ಸಿಗಳ ಮೂಲ ದರಪಟ್ಟಿಗಳು (ಲಕೋಟೆಯೊಂದಿಗೆ).
3. ವಿಳಂಬಕ್ಕೆ ಕಾರಣಗಳನ್ನು ವಿವರಿಸುವುದು.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:08 ದಿನಾಂಕ:23-09-2021 ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕುಲಸಚಿವರ ನೀಡಿದ ಪಾವತಿ ಆದೇಶದ ಪತ್ರ ದಿನಾಂಕ:31-08-2017 ರಲ್ಲಿ ಸಲ್ಲಿಸಿದ ಬಿಲ್ಲಿನಲ್ಲಿ ನ್ಯೂನ್ಯತೆಗಳು ಕಂಡುಬಂದಿರುವ ಹಿನ್ನಲೆಯಲ್ಲಿ, ಸದರಿ ಬಿಲ್ಲಿನಲ್ಲಿ ನ್ಯೂನ್ಯತೆಗಳು ಇರುವುದರಿಂದ ವಿಭಾಗಕ್ಕೆ ಮರಳಿಸಲಾಗಿದ್ದು, ತದನಂತರ ಸರಿಪಡಿಸಿ ಸಲ್ಲಿಸಿದ ಬಿಲ್ಲನ್ನು ದಿನಾಂಕ:20-04-2018 ರಂದು ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿ ಸುಮಾರು 8 ತಿಂಗಳ ವಿಳಂಬವಾಗಿರುವುದರಿಂದ ಸದರಿ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಿದೆ.

**06. 2017-18 ರಲ್ಲಿ ಖರೀದಿಸಿದ ಸಾಮಗ್ರಿಗೆ 2018-19ರಲ್ಲಿ ಪಾವತಿ ಮಾಡಿರುವ ಕುರಿತು.**

2017-18 ರಲ್ಲಿ ಖರೀದಿಸಿದ ಸಾಮಗ್ರಿಗೆ 2018-19ರಲ್ಲಿ ಪಾವತಿ ಮಾಡಿರುವ ವೋಚರ್ ಸಂಖ್ಯೆ:36 ಚೆಕ್ ಸಂಖ್ಯೆ:359670 ದಿನಾಂಕ:20/04/2018 ರನ್ವಯ ಎಚ್.ಐ.ಡಿ. ಪಿ.ವಿ.ಸಿ. ಕಾರ್ಡ್ಸ್ ಖರೀದಿಸಿ Delta Technologies Bangalore ರವರಿಗೆ ರೂ.31,650/-ಗಳನ್ನು ಪಾವತಿಸಿರುವುದು ಕಂಡುಬಂದಿದೆ. ಸದರಿ ವೋಚರನ್ನು ಪರಿಶೀಲಿಸಿದಾಗ ಏಜೆನ್ಸಿರವರು ಮಾರ್ಚ-2017ರಲ್ಲಿ ದರಪಟ್ಟಿ ಸಲ್ಲಿಸಿರುವುದು ಮತ್ತು 30-08-2017 ರಂದು ಕುಲಸಚಿವರು ರೂ.31,650/-ಗಳನ್ನು ಪಾವತಿಸಲು Financial Sanction ನೀಡಿದ್ದರೂ ಕೂಡ, ದರಪಟ್ಟಿ ಕರೆದ ಸುಮಾರು 13 ತಿಂಗಳ ನಂತರ ಪಾವತಿ ಮಾಡಿರುವುದು ಸಂಶಯಾಸ್ಪದವಾಗಿರುವುದರಿಂದ ಈ ಕೆಳಗೆ ನೀಡಿರುವ ಅಂಶಗಳಿಗೆ ಸೂಕ್ತ ವಿವರಣೆ ಮತ್ತು ಅಗತ್ಯ ದಾಖಲೆ ಒದಗಿಸಲು ತಿಳಿಸಿದೆ.

1. ದರಪಟ್ಟಿ ಅಧಿಸೂಚನೆ ಪ್ರತಿ.
2. ದರಪಟ್ಟಿಯಲ್ಲಿ ಭಾಗವಹಿಸಿದ ಎಲ್ಲಾ ಏಜೆನ್ಸಿಗಳ ಮೂಲ ದರಪಟ್ಟಿಗಳು (ಲಕೋಟೆಯೊಂದಿಗೆ).
3 ವಿಳಂಬಕ್ಕೆ ಕಾರಣಗಳನ್ನು ವಿವರಿಸುವುದು.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:09 ದಿನಾಂಕ:23-09-2021 ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕುಲಸಚಿವರ ನೀಡಿದ ಪಾವತಿ ಆದೇಶದ ಪತ್ರ ದಿನಾಂಕ: 30-08-2017 ರಲ್ಲಿ ಸಲ್ಲಿಸಿ ಬಿಲ್ಲಿನಲ್ಲಿ ನ್ಯೂನ್ಯತೆಗಳು ಕಂಡುಬಂದಿರುವ ಹಿನ್ನಲೆಯಲ್ಲಿ, ಸದರಿ ಬಿಲ್ಲಿನಲ್ಲಿ ನ್ಯೂನ್ಯತೆಗಳು ಇರುವುದರಿಂದ ವಿಭಾಗಕ್ಕೆ ಮರಳಿಸಲಾಗಿದ್ದು, ತದನಂತರ ಸರಿಪಡಿಸಿ ಸಲ್ಲಿಸಿದ ಬಿಲ್ಲನ್ನು ದಿನಾಂಕ:20-04-2018 ರಂದು ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿ ಸುಮಾರು 8 ತಿಂಗಳ ವಿಳಂಬವಾಗಿರುವುದರಿಂದ ಸದರಿ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಿದೆ.

**07. ವಿವಿಧ ಉದ್ದೇಶಗಳಿಗೆ ನೀಡಿರುವ ಮುಂಗಡಗಳನ್ನು ನಿಗದಿತ ಸಮಯದಲ್ಲಿ ಹೊಂದಾಣಿಕೆ ಮಾಡದೇ ಇರುವ ಕುರಿತು**.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯವರು ಒದಗಿಸಿರುವ 2018-19 ಮತ್ತು 2019-20ನೇ ಸಾಲಿನ ಮುಂಗಡದ ತಃಖ್ತೆಗಳನ್ನು ಪರಿಶೀಲಿಸಲಾಗಿ ಹಿಂದಿನ ಸಾಲಿನಲ್ಲಿ ನೀಡಿದ ಮುಂಗಡದ ಮೊತ್ತವು ಇಲ್ಲಿಯವರೆಗೆ ಹೊಂದಾಣಿಕೆಯಾಗದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ. ಸದರಿ ಮುಂಗಡದ ಕುರಿತು,

ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇದ 206 ರಂತೆ, "ಒಂದು ವಿಶೇಷ ಮುಂಗಡವನ್ನು ಕೊಡುವಾಗ ಯಾವ ಷರತ್ತಿಗೊಳಪಟ್ಟು ಅದನ್ನು ಮುಂಜೂರು ಮಾಡಲಾಗಿದೆಯೆಂದು ಅವರು ತಮ್ಮ ಆದೇಶದಲ್ಲಿ ನಿರ್ದಿಷ್ಟ ಪಡಿಸುವುದು ಎಂದಿರುತ್ತದೆ."

ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇದ 208 ರಂತೆ, "ಒಂದು ಸರ್ಕಾರಿ ಆದೇಶದ ಮೂಲಕ ಒಬ್ಬ ಸರ್ಕಾರಿ ನೌಕರನಿಗೆ ಒಂದು ಮುಂಗಡವನ್ನು ಕೊಡಲಾಗಿದೆ ಎಂಬುದನ್ನು ಮತ್ತು ಯಾವ ಅವಧಿಯೊಳಗೆ ತೀರಿಸಬೇಕೆಂಬುದನ್ನು ಆದೇಶವು ನಿರ್ದಿಷ್ಟಪಡಿಸಬೇಕು." ಎಂದಿದೆ.

ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇದ 208 (ಎ) ರಂತೆ, "ಒಬ್ಬ ಸರ್ಕಾರಿ ನೌಕರನ ಸೇವೆಯನ್ನು ಮುಕ್ತಾಯಗೊಳಿಸುವ ದಿನಾಂಕದಂದು ಅವನಿಂದ ಬಾಕಿಯಿರುವ ಮುಂಗಡದ ಅಥವಾ ಒಂದು ಭಾಗದ ಸಂಬಂಧದಲ್ಲಿ ಆ ದಿನಾಂಕದವರೆಗೆ ಮಾತ್ರ ಬಡ್ಡಿಯನ್ನು ಅಥವಾ ದಂಡ ರೂಪದ ಬಡ್ಡಿಯನ್ನು ವಿಧಾಯಕ ಮಾಡಲಾಗುವುದು," ಎಂದಿದೆ.

ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇದ 238-(ಸಿ) ರಂತೆ, "ಸರ್ಕಾರಿ ನೌಕರರಿಗೆ ಮಂಜೂರು ಮಾಡಿದ ಬಡ್ಡಿ ಸಹಿತವಾದ ಮುಂಗಡವಾದ ಮೇಲೆ ಆಗಿಂದಾಗೆ ಸರ್ಕಾರದಿಂದ ಗೊತ್ತು ಮಾಡಬಹುದಾದಂತಹ ದರಗಳಲ್ಲಿ ಸರಳ ಬಡ್ಡಿಯನ್ನು ವಿಧಿಸಬೇಕು. ಅಂತಹ ಬಡ್ಡಿಯ ಮುಂಗಡವನ್ನು ಪಡೆದ ದಿನಾಂಕದಿಂದ ಮತ್ತು ಪ್ರತಿ ತಿಂಗಳಿನ ಕಡೆಯ ದಿನಾಂಕದಂದು ಬಾಕಿಯಿರುವ ಹಣದ ಮೇಲೆ ಲೆಕ್ಕಮಾಡಬೇಕು" ಎಂದಿದೆ.

ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇದ 243 ರಂತೆ, "ಎಲ್ಲಾ ಮುಂಗಡಗಳು ಅವುಗಳನ್ನು ಪಡೆಯುವ ಸರ್ಕಾರಿ ನೌಕರರಿಂದ ಪ್ರತಿಯೊಂದು ಸಂದರ್ಭಕ್ಕೂ ಅನ್ವಯವಾಗುವ ನಿಯಮಗಳಿಗೆ ಅನುಸಾರವಾಗಿ ತೀರಿಸತಕ್ಕದ್ದು. ಆದೇಶದಲ್ಲಿಯು ಯಾವ ದಿನಾಂಕದೊಳಗಾಗಿ ಅದು ತೀರಿಸಲ್ಪಡಬೇಕೆಂಬುದನ್ನು ಗೊತ್ತು ಪಡಿಸದೇ ಇರುವ ಸಂದರ್ಭದಲ್ಲಿ, ಪ್ರತಿಯೊಂದು ಮುಂಗಡವು ಅದನ್ನು ತೆಗೆಯಲಾದ ತಿಂಗಳದ ತರುವಾಯದಲ್ಲಿ ಬರುವ ತಿಂಗಳ ಕೊನೆಯೊಳಗಾಗಿ ತೀರಿಸಲ್ಪಡತಕ್ಕದ್ದು" ಎಂದಿದೆ.

ಆದರೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯವರು 2018-19 ಮತ್ತು 2019-20ನೇ ಸಾಲಿನಲ್ಲಿ ವಿವಿಧ ಉದ್ದೇಶಗಳಿಗೆ ಸಿಬ್ಬಂದಿ/ಅಧಿಕಾರಿಗಳ ಹೆಸರಿನಲ್ಲಿ ಮುಂಗಡವನ್ನು ನೀಡಲಾಗಿದೆ. ಸುಮಾರು ಒಂದು ವರ್ಷ ಗತಿಸಿದರು ಮುಂಗಡದ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳದೆ ಈ ಮೇಲೆ ತಿಳಿಸಿರುವ ಕರ್ನಾಟಕ ಆರ್ಥಿಕ ಸಂಹಿತೆ 1958 ನಿಯಮಗಳ ಸ್ಪಷ್ಟ ಉಲ್ಲಂಘನೆಯನ್ನು ಮಾಡಿರುತ್ತಾರೆ. ಸದರಿ ಹೊಂದಾಣಿಕೆಯಾಗದ ವಿವರವನ್ನು ಸಾಮಾನ್ಯ ಬಡ್ಡಿ ದರ ಸೇರಿ ಒಟ್ಟು ಮೊತ್ತ **ರೂ.6,34,909/-ಗಳನ್ನು** **ಅನುಬಂಧ-3ರಲ್ಲಿ** ವಿವರಿಸಿದೆ. ಸದರಿ ಮೊತ್ತವನ್ನು ಅಧಿಕಾರಿ/ಸಿಬ್ಬಂದಿಗಳಿಂದ **ವಸೂಲಿಸಲು ತಿಳಿಸಿದೆ**. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:12 ದಿನಾಂಕ:27-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕಾಲೇಜುಗಳಿಗೆ ಪತ್ರ ವ್ಯವಹಾರ ಮಾಡಿ ವಸೂಲಿಸಲಾಗುವುದು ಎಂದು ತಿಳಿಸಿರುತ್ತಾರೆ, ಕಂಡಿಕೆಯಲ್ಲಿ ನಮೂದಿಸಿರುವ ಮೊತ್ತ ಹೊಂದಣಿಕೆಯಾಗುವವರೆಗೂ ಕಂಡಿಕೆ ಮುಂದುವರೆಸುತ್ತಾ ಸದರಿ ಹೊಂದಾಣಿಕೆಯಾಗದ ಮೊತ್ತ **ರೂ. 6,34,909/-ಗಳನ್ನು ವಸೂಲಾತಿಯಲ್ಲಿಡಲಾಗಿದೆ**.

**೦೮. ಟೆಂಡರ್ ತಪ್ಪಿಸುವ ಉದ್ದೇಶದಿಂದ ದರಪಟ್ಟಿ ಕರೆಯುವುದರ ಮೂಲಕ ಸಾಮಗ್ರಿಗಳನ್ನು ಖರೀದಿಸಿರುವ ಕುರಿತು**.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯವರು 2018-19ನೇ ಸಾಲಿನಲ್ಲಿ ವಿವಿಧ ವಿಭಾಗಗಳಿಗೆ ಬೇಕಾಗುವ HP1136 LaserJet Printer ಅನ್ನು ಖರೀದಿಸಲು ದಿನಾಂಕ:14.05.2018 ರಂದು ದರಪಟ್ಟಿಯನ್ನು ಕರೆಯಲಾಗಿ ಸದರಿ ಒಂದೇ ದರ ಪಟ್ಟಿಯ ಮೇಲೆ ಸುಮಾರು 20 ವಿಭಾಗಗಳು HP LaserJet Printer ಅನ್ನು ಖರೀದಿಸಿ ರೂ. 2,30,694/- ಗಳನ್ನು ಒಂದೇ ಏಜೆನ್ಸಿಯಾದ "Ballary Computers" ರವರಿಗೆ ಒಂದೇ ತಿಂಗಳಿನಲ್ಲಿ (May-2018 ) ರಲ್ಲಿ ಪಾವತಿಸಿದೆ.

ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮಗಳ ನಿಯಮ 55 (49) (ಎ) ಅನ್ವಯ ರೂ.5000 ಮೀರಿದ ಹಾಗು ರೂ. 1 ಲಕ್ಷಗಳವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ದರಪಟ್ಟಿ ಕರೆಯುವುದರ ಮೂಲಕ ಮತ್ತು ರೂ. 1 ಲಕ್ಷಗಿಂತ ಮೇಲಿನ ಯಾವುದೇ ಖರೀದಿಗೆ ಕರ್ನಾಟಕ ಸಾರ್ವಜನಿಕ ಅಧಿನಿಯಮ 1999 ರ ಅನ್ವಯ, ಟೆಂಡರ ಕರೆಯುವುದರ ಮೂಲಕ ಖರೀದಿಸತಕ್ಕದ್ದು ಎಂದು ಆದೇಶವಿರುತ್ತದೆ. ಸದರಿ ಪ್ರಕರಣದಲ್ಲಿ ವಿಶ್ವವಿದ್ಯಾಲಯದವರು ತಮಗೆ ಬೇಕಾದ ಸಾಮಗ್ರಿಯನ್ನು ಟೆಂಡರ್ ಕರೆಯುವುದರ ಮೂಲಕ ಖರೀದಿಸಬೇಕಾಗಿತ್ತು. ಆದರೆ ಟೆಂಡರ್‌ನ್ನು ತಪ್ಪಿಸುವ ಉದ್ದೇಶದಿಂದ ದರಪಟ್ಟಿಯ ಮುಖಾಂತರ ಖರೀದಿಸಿ ಈ ಮೇಲೆ ತಿಳಿಸಿರುವ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 13 ದಿನಾಂಕ: 27-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರವನ್ನು ನೀಡುತ್ತಾ ಕುಲಪತಿಗಳ ನಿರ್ದೇಶನದ ಮೇರೆಗೆ ವಿವಿಧ ವಿಭಾಗಗಳಿಗೆ ಅವಶ್ಯಕವಿರುವ HP1136 LaserJet Printer ಗಳನ್ನು ಖರೀದಿಸಲು ಪ್ರತ್ಯೇಕವಾಗಿ ಅನುಮೋದನೆ ಪಡೆದುಕೊಂಡಿದ್ದು, ಬಿಲ್ಲುಗಳನ್ನು ಪಾವತಿಸುವಾಗ ಒಂದೇ ಬಿಲ್ಲಿನಲ್ಲಿ ರೂ.2,30,694/-ಗಳನ್ನು ಪಾವತಿಸಲಾಗಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಆದರೆ ಒಂದು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಬೇಕಾಗುವ HP1136 LaserJet Printer ಗಳ ಬೇಡಿಕೆಯನ್ನು ಒಟ್ಟಾರೆಯಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಿದ್ದಲ್ಲಿ ಈ ರೀತಿ ಪ್ರತ್ಯೇಕ ಅನುಮೋದನೆ ಪಡೆಯುವ ಅವಶ್ಯಕತೆಯಾಗಲಿ ಅಥವಾ ಟೆಂಡರ್‌ರನ್ನು ತಪ್ಪಿಸುವ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಪ್ರಯುಕ್ತ ನೀಡಿರುವ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುರೆಸುತ್ತಾ ಟೆಂಡರ್ ತಪ್ಪಿಸಿ ದರಪಟ್ಟಿಯ ಮುಖಾಂತರ 2018-19ನೇ ಸಾಲಿನಲ್ಲಿ ಪಾವತಿಯಾದ ಮೊತ್ತ **ರೂ.2,30,694/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**೦೯. 2017-18ನೇ ಸಾಲಿನಲ್ಲಿ ಕರೆದ ಟೆಂಡರನ್ನು ಆಧರಿಸಿ 2018-19ನೇ ಸಾಲಿನಲ್ಲಿ ಕೆಮಿಕಲ್ಸ್‌ಗಳನ್ನು ಖರೀದಿಸಿರುವ ಬಗ್ಗೆ.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದ ರಸಾಯನಶಾಸ್ತ್ರ ವಿಭಾಗಕ್ಕೆ ಬೇಕಾಗುವ ರಸಾಯನಗಳನ್ನು ಖರೀದಿಸಲು 2017-18ನೇ ಸಾಲಿನಲ್ಲಿ ಟೆಂಡರ್ ಕರೆದು ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿರುವಂತೆ ರಸಾಯನಗಳನ್ನು ಖರೀದಿಸಿರುತ್ತಾರೆ.

| ಕ್ರ.ಸಂ. | ಸಾಮಗ್ರಿ | ಅಂದಾಜು ಮೊತ್ತ | ಏಜೆನ್ಸಿ | ಮೊತ್ತ |
|---|---|---|---|---|
| 1. | Instruments | 6.40 ಲಕ್ಷ | ಗಾಯತ್ರಿ ಸೈಂಟಿಫಿಕ ಇನ್‌ಸ್ಟ್ರುಮೆಂಟ್ಸ್ | 7,69,947 |
| 2. | Glass Wares | 3.70 ಲಕ್ಷ | Jain Paints | 2,84,680 |
| 3. | Chemicals | 5.98 ಲಕ್ಷ | Allwin Scientific | 6,61,518 |
| | | | ಒಟ್ಟು | **17,16,145** |

ಸದರಿ ಟೆಂಡರನ್ನು ಆಧರಿಸಿ ವಿಶ್ವವಿದ್ಯಾಲಯ ಇನ್ನಿತರ ಆವರಣ (ಕೊಪ್ಪಳ ಸ್ನಾತಕೋತ್ತರ ಕೇಂದ್ರ) ಗಳಿಗೆ ಬೇಕಾಗುವ Instruments, Glass wares & Chemicals ಖರೀದಿ ಮಾಡಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ಓಚರ್ ಸಂಖ್ಯೆ/ಚೆಕ್ ಸಂಖ್ಯೆ & ದಿನಾಂಕ | ಏಜೆನ್ಸಿ | ಸಾಮಗ್ರಿ | ಮೊತ್ತ |
|---|---|---|---|---|
| 1. | 45/359679 ದಿನಾಂಕ:21.04.2018 | Allwin Scientific | Chemicals | 1,61,661 |
| 2. | 44/359678 ದಿನಾಂಕ:21.04.2018 | Gayathri Indor Solutions | Instruments | 1,88,486 |
| 3. | 43/ದಿನಾಂಕ:21.04.2018 | Jain paints | Glasswares | 70,733 |
| | | | ಒಟ್ಟು | **4,20,880** |

ಸದರಿ ಖರೀದಿಗಳನ್ನು ಸಮಯದ ಅಭಾವ, ಹೊಸ ಪಿ.ಜಿ. ಸೆಂಟರಗೆ ಸದರಿ ಉಪಕರಣಗಳ ಅತ್ಯಾವಶ್ಯಕತೆ ಇದೆ ಎಂದು ತಿಳಿಸುತ್ತಾ, 2017-18 ರಲ್ಲಿ ಖರೀದಿಸಿದ ಮೊತ್ತದ ಶೇ 25% ರೊಳಗೆ 2018-19 ರಲ್ಲಿ ಖರೀದಿಸಲಾಗಿದೆ. ಈ ಸಂಬಂಧ KPWD 133 (1) ರಲ್ಲಿ **"**If the additional quantity is 25%, then the supplemental estimate/Detailed Project Report (DPR) shall have agreement rates, reason being that the contractor by virtue of his agreement condition is bound to do additional work ordered by the Executive Engineer to the extent of 25% at the

agreement rates ಎಂದು ತಿಳಿಸಿದ್ದು, ವಿಶ್ವವಿದ್ಯಾಲಯದವರು 2017-18 ರಲ್ಲಿ ಏಜೆನ್ಸಿಗಳೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ಒಂದು ಸಲ ಟೆಂಡರ್ ಕರೆದು, ಏಜೆನ್ಸಿ ಅಂತಿಮಗೊಳಿಸಿ ಸಾಮಗ್ರಿ ಸರಬರಾಜಾದ ನಂತರ ಆ ಟೆಂಡರ್ ಮುಕ್ತಾಯವಾಗುತ್ತದೆ. ಮತ್ತೆ ಅದೇ ಸಾಮಗ್ರಿ ಖರೀದಿಸಬೇಕಾದರೆ ಪುನಃ ಟೆಂಡರ್ ಕರೆಯಲೇ ಬೇಕು.

ಎರಡನೇಯದಾಗಿ ಅಂದಾಜಿಗಿಂತ 125% ವರೆಗೆ ಹೆಚ್ಚುವರಿ ಕೆಲಸಗಳನ್ನು ಮಾಡಿಸಿಕೊಳ್ಳಬಹುದು ಇದು ಕಾಮಗಾರಿಗೆ ಅನ್ವಯವಾಗುತ್ತದೆ. ಕಾಮಗಾರಿಗಳಿಗೆ ಒಂದು ನಿಖರವಾದ ಅಂದಾಜು ತಯಾರಿಸಲು DSR ಗಳಿರುತ್ತವೆ. ಆದರೆ Chemicals/Instrument ಖರೀದಿಗಾಗಿ ಒಂದು ನಿಖರವಾದ ಅಂದಾಜು ತಯಾರಿಸಲು ಸಾಧ್ಯವಿರುವುದಿಲ್ಲ.

ಮೂರನೇಯದಾಗಿ ಯಾವುದೇ ಒಂದು ಐಟಂನಲ್ಲಿ ಅಂದಾಜಿಗಿಂತ 125% ಖರೀದಿಸಬಹುದಾಗಿದ್ದು, ಒಟ್ಟಾರೆ ಮೊತ್ತ ಅಂದಾಜು ಮಿತಿಯೊಳಗೆ ಇರಬೇಕು. ಈ ಪ್ರಕರಣದಲ್ಲಿ ಒಟ್ಟು ಖರೀದಿಗಳು ಅಂದಾಜಿಗಿಂತ ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿರುವಂತೆ ಹೆಚ್ಚಾಗಿರುತ್ತವೆ.

| ಕ್ರ ಸಂ. | ಸಾಮಗ್ರಿ | ಅಂದಾಜು ಮೊತ್ತ | 2017-18ರ ಖರೀದಿ | 2018-19ರ ಖರೀದಿ | ಒಟ್ಟು | ಹೆಚ್ಚಳ |
|---|---|---|---|---|---|---|
| 1. | Chemicals | 5,98,000 | 6,61,518 | 1,61,661 | 8,23,179 | 37.65% |
| 2. | Instruments | 6,40,000 | 7,69,947 | 1,88,486 | 9,58,433 | 49.75% |
| 3. | Glasswares | 3,70,000 | 2,84,690 | 70,733 | 3,55,423 | (-) 3.93 |
| | **ಒಟ್ಟು** | **16,08,000** | **17,16,155** | **4,20,880** | **21,37,035** | **32.90%** |

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ 2018-19ನೇ ಸಾಲಿನಲ್ಲಿ ಕೊಪ್ಪಳ ಪಿ.ಜಿ. ಕೇಂದ್ರಕ್ಕೆ ಬೇಕಾಗುವ ಸಾಮಗ್ರಿಗಳನ್ನು ಟೆಂಡರ್ ಕರೆಯುವುದರ ಮೂಲಕವೇ ಖರೀದಿಸಬೇಕಾಗಿದ್ದರಿಂದ, ಟೆಂಡರ್ ಪ್ರಕ್ರಿಯೆ ತಪ್ಪಿಸಲಾಗಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 14 ದಿನಾಂಕ:28-09-2021 ರಂದು ನೀಡಲಾಗಿದೆ**. ಕಂಡಿಕೆಯಲ್ಲಿ ನಮೂದಿಸಿರುವ ಅಂಶಗಳಿಗೆ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸುತ್ತಾ 2018-19ನೇ ಸಾಲಿನಲ್ಲಿ ಖರೀದಿಸಿದ ಒಟ್ಟು ಮೊತ್ತ **ರೂ.4,20,880/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

10. **Supplying, installing & commissioning of server AC,UPS, Software's, NAS Box & Networking to different Blocks of VSKUB ಬಿಲ್ ಪಾವತಿ/ಟೆಂಡರ್ ಪ್ರಕ್ರಿಯೆಯಲ್ಲಿ ಗಮನಿಸಿದ ನ್ಯೂನತೆಗಳು**.

ಓಚರ್ ಸಂಖ್ಯೆ:874 ಚೆಕ್ ಸಂಖ್ಯೆ: 360518 ದಿನಾಂಕ 22.12.2018 ರನ್ವಯ ಮೆ॥ Intelleic Systems Kota Complex Bangalore ರವರಿಗೆ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ Supplying, Installing & commissioning of server, AC, UPS, Softwares, NAS Box & Networking ಅಳವಡಿಸಲು ರೂ.30,27,555/- ಗಳನ್ನು ಪಾವತಿಸಲಾಗಿದೆ. ಸದರಿ ಬಿಲ್ಲು ಮತ್ತು ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಈ ಕೆಳಗೆ ವಿವರಿಸಿರುವಂತೆ ನ್ಯೂನತೆಗಳು ಕಂಡುಬಂದಿರುತ್ತವೆ.

1) ದಿನಾಂಕ 27.12.2017 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅಂದಾಜು ಮೊತ್ತ ರೂ. 34.46 ಲಕ್ಷಗಳ ಈ ಮೇಲೆ ತಿಳಿಸಿರುವ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮೋದಿಸಿದ್ದು, ಟೆಂಡರ್ ನೋಟಿಫಿಕೇಶನ ಸಂ: VSKUB/ICT/Tender-03/PN/17-18/13/ ದಿನಾಂಕ:15.02.2018 ರಂದು ಅಧಿಸೂಚನೆ ಹೊರಡಿಸಿದ್ದು, ಸದರಿ ಬಿಡ್‌ನಲ್ಲಿ ಕೇವಲ ಒಬ್ಬ ಬಿಡ್ಡುದಾರ (ವಿನೋದ ಕುಮಾರ ವಿವಿ/Intellic Systems) ಅವನ ಬಿಡ್ಡನ್ನು ಅಂಗೀಕರಿಸಿ ಅದನ್ನು ಸೂಚಿಸಿದ ದರ ರೂ.30,27,555/-ಕ್ಕೆ ಅನುಮೋದನೆ ನೀಡಿ ಸರಬರಾಜು ಆದೇಶ ನೀಡಲಾಗಿದೆ. ಈ ಸಂಬಂಧ ಸರ್ಕಾರದ ಸುತ್ತೋಲೆ ಸಂಖ್ಯೆ:"ಆಇ 1066 ವೆಚ್ಚ-12/2016 ದಿನಾಂಕ:20.03.2017 ರಲ್ಲಿ Single bid is defined as those tenders where only one bid is received before Technical qualification is done" ಎಂದು, ಸುತ್ತೋಲೆ ಸಂ ಆಇ576 ವೆಚ್ಚ-12 2018 ದಿನಾಂಕ: 22.05.2018 ರಲ್ಲಿ ಏಕ ಬಿಡ್ ಟೆಂಡರ್‌ಗಳು ಸ್ವೀಕೃತವಾದ ಸಂದರ್ಭಗಳಲ್ಲಿ, ಸದರಿ ಏಕ ಬಿಡ್ ಟೆಂಡರ್‌ಗಳನ್ನು ತಿರಸ್ಕರಿಸಿ ಮರು ಟೆಂಡರ್ ಕರೆಯುವುದು ಟೆಂಡರ್ ಕರೆಯುವ ಅಧಿಕಾರಿಯ ಪ್ರಥಮ ಆದ್ಯತೆಯಾಗಿರಬೇಕು ಮತ್ತು ಏಕಬಿಡ್ ಪರಿಗಣಿಸಲೇಬೇಕಾದ ಅಸಾಧಾರಣ ಸಂದರ್ಭದಲ್ಲಿ ಇ-ತಂತ್ರಾಂಶದಲ್ಲೇ ದರ ಸಂಧಾನ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಏಕ ಬಿಡ್ ಪರಿಗಣಿಸುವ ಅಸಾಧಾರಣ ಸಂದರ್ಭದ ಬಗ್ಗೆ ಲೆಕ್ಕಪರಿಶೋಧನೆಗೆ ಯಾವುದೇ ಮಾಹಿತಿ ಇರುವುದಿಲ್ಲ. ಇಂತಹ ಪ್ರಕರಣದಲ್ಲಿ ಟೆಂಡರ್ ಮರು ಕರೆಯುವುದು ಸೂಕ್ತ ಕ್ರಮವಾಗಿತ್ತು.

2) ಸದರಿ ಏಕ ಬಿಡ್ಡನ್ನು ಒಪ್ಪಿ ದಿನಾಂಕ:21.06.2018 ರಂದು ಸರಬರಾಜು ಆದೇಶ ನೀಡಿದ್ದು, ದಿನಾಂಕ:16.07.2018 ರಂದು ರೂ 200/- ರ ಸ್ಟ್ಯಾಂಪ್ ಪೇಪರ್ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಕರ್ನಾಟಕ ಸ್ಟ್ಯಾಂಪ್ ಡ್ಯೂಟಿ ಆಕ್ಟ್ 1957 (Amended Act 15 of 2012) ದಿನಾಂಕ: 31.03.2012 ಅನುಚ್ಛೇದ 5 (ii)ರ ಪ್ರಕಾರ ಪ್ರತಿ ಹತ್ತು ಲಕ್ಷಕ್ಕೆ ರೂ.100/- ರಂತೆ ಸ್ಟ್ಯಾಂಪ್ ಪೇಪರ್ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಈ ಪ್ರಕರಣದಲ್ಲಿ ಕೇವಲ ರೂ. 200/- ಪಡೆದಿದ್ದು ಇನ್ನು ಬಾಕಿ ಉಳಿದ ರೂ.200/- ರ ಸ್ಟ್ಯಾಂಪ್ ಪಡೆಯಲು ಅಥವಾ ರೂ. 200/- ಸಂಬಂಧಿಸಿದ ಏಜೆನ್ಸಿಯಿಂದ ಪಡೆದು ಸಂಬಂಧಪಟ್ಟ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ತಿಳಿಸಿದೆ.
3) ಕೆ.ಟಿ.ಪಿ.ಪಿ. ಆಕ್ಟ್‌ನ ನಿಯಮ 28 ಎಚ್, ಐ.ಟಿ.ಟಿ. ಕ್ಲಾಸ್ (clause) 25.5 ಮತ್ತು clause 44 ರನ್ವಯ ಟೆಂಡರ್ ಮೌಲ್ಯದ ಶೇ.5% ರಷ್ಟು ಭದ್ರತಾ ಠೇವಣಿ ಪಡೆಯಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ಸದರಿ ಎಫ್.ಎಸ್.ಡಿ. ಮೊತ್ತ ರೂ. 1,51,378/- ಗಳಾಗುತ್ತಿದ್ದು, ಸದರಿ ಮೊತ್ತ ಪಡೆದ ಬಗ್ಗೆ ಮಾಹಿತಿ ಇರುವುದಿಲ್ಲ ಹಾಗೂ ಸಂಬಂಧಪಟ್ಟ ಬ್ಯಾಂಕ್ ಖಾತೆ (ಸಂ.3866101000022) ಪರಿಶೀಲಿಸಲಾಗಿ ಈ ಮೊತ್ತ ಜಮೆಯಾಗಿರುವುದಿಲ್ಲ.
4) ಸದರಿ ಟೆಂಡರ್‌ನ Standard Tender document ನ Condition ಅನ್ವಯ Period of completion 45 ದಿನಗಳಿರುತ್ತದೆ ಮತ್ತು General Terms and conditions for Tender ನ ಕ್ರಮ ಸಂ.11 ರನ್ವಯ "The university will forfeit the EMD amount if the bidder fails to supply the items within stipulated period" ಎಂದು ಇರುತ್ತದೆ.

ಈ ಪ್ರಕರಣದಲ್ಲಿ ಸರಬರಾಜು ಆದೇಶ 21-06-2018 ರಂದು, ಕರಾರು ಒಪ್ಪಂದ 16-07-2018 ರಂದು, ಮತ್ತು ಬಿಲ್ ದಿನಾಂಕ:10-11-2018 ಆಗಿರುತ್ತದೆ. ಕರಾರು ಒಪ್ಪಂದ ಸುಮಾರು 115 ದಿನಗಳ ನಂತರ ಸಾಮಗ್ರಿ ಸರಬರಾಜು ಆಗಿರುವುದರಿಂದ ಟೆಂಡರ್ ಕಂಡಿಶನ್ ಸಂಖ್ಯೆ:11 ರನ್ವಯ ಸದರಿ ಏಜೆನ್ಸಿಯಿಂದ ಪಡೆದ ಮೊತ್ತ **ರೂ.53,190/-ಗಳ ಇ.ಎಂ,ಡಿ**. ಮೊತ್ತವನ್ನು ಪಾವತಿಸಲಾಗಿರುತ್ತದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 15 ದಿನಾಂಕ: 29-09-2021 ರಂದು ನೀಡಲಾಗಿದೆ.** ಕಂಡಿಕೆಯಲ್ಲಿ ನಮೂದಿಸಿರುವ ಅಂಶಗಳನ್ನು ಮುಂದಿನ ದಿನಗಳಲ್ಲಿ ಅಳವಡಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಉತ್ತರವನ್ನು ಮಾನ್ಯ ಮಾಡಲು ಸಾಧ್ಯವಿರದ ಪ್ರಯುಕ್ತ ಕಂಡಿಕೆ ಮುಂದುವರೆಸುತ್ತಾ ಪಾವತಿಯಾದ ಮೊತ್ತ **ರೂ.30,27,555/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

11. **ಬಳ್ಳಾರಿ ವಿಶ್ವವಿದ್ಯಾಲಯದ ಸ್ನಾತಕೊತ್ತರ ಕೋರ್ಸಗಳ ಪ್ರವೇಶ ಶುಲ್ಕವನ್ನು ವಸೂಲಿಸುವ ಬಗ್ಗೆ.**

ಉಲ್ಲೇಖ:-1 ಕುಲಸಚಿವರು ವಿಶ್ರೀಕಬ ಇವರ ಅಧಿಸೂಚನೆ ಸಂಖ್ಯೆ:ವಿಶ್ರೀಕವಿಬ/ಸ್ನಾಕೊ/ಶೈ.ವೇ.ಪಟ್ಟಿ/2019-20/1822 ದಿನಾಂಕ:20-12-2019.

2 Fees Stucture ದಿನಾಂಕ:12-06-2019

ಉಲ್ಲೇಖಿತ ಅಧಿಸೂಚನೆ (1) ರನ್ವಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಡಿಯಲ್ಲಿ ಬರುವ ಸ್ನಾತಕೋತ್ತರ ಪದವಿಗಳ I, IIIನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ದಂಡ ರಹಿತವಾಗಿ ಪಡೆಯುವ ಕೊನೆಯ ದಿನಾಂಕವು 31.07.2019 ಹಾಗೂ ದಂಡದೊಂದಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ:06.08.2019 ಆಗಿದ್ದು ಹಾಗೂ ಪ್ರಥಮ ಸೆಮಿಸ್ಟರ್ ಆಡಳಿತ ಮಂಡಳಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳು ದಂಡರಹಿತವಾಗಿ ಪ್ರವೇಶ ಪಡೆಯಲು ಕೊನೆಯ ದಿನಾಂಕ:19.08.2019 ಸದರಿ ವಿದ್ಯಾರ್ಥಿಗಳಿಗೆ ದಂಡದೊಂದಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ:21.08.2019 ಎಂದು ನಮೂದಿಸಲಾಗಿದ್ದು, ಆದರೆ ಯಾವುದೇ ವಿದ್ಯಾರ್ಥಿಗಳಿಗೂ ಯಾವುದೇ ರೀತಿಯ ದಂಡ ಶುಲ್ಕದ ಮೊತ್ತ ನಮೂದಿಸಿರುವುದಿಲ್ಲ. ಇದರಿಂದಾಗಿ ಕೊನೆಯ ದಿನಾಂಕ ಮುಗಿದ ನಂತರ ಹಣ ಪಾವತಿ ಮಾಡಿರುವ ವಿದ್ಯಾರ್ಥಿಗಳಿಗೆ ದಂಡ ಶುಲ್ಕ ಎಷ್ಟು ವಸೂಲಿಸಬೇಕೆಂದು ತಿಳಿದು ಬಂದಿರುವುದಿಲ್ಲ. ಸದರಿ ಅಧಿಸೂಚನೆಗಳಲ್ಲಿ ನಿಗದಿಪಡಿಸಿದ ದಿನಾಂಕವಾರು ಶುಲ್ಕವನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಸ್ನಾತಕೋತ್ತರ ಕೋರ್ಸಗಳ ವಿದ್ಯಾರ್ಥಿಗಳ ಪ್ರವೇಶ ಶುಲ್ಕ/ಅರ್ಹತಾ ಶುಲ್ಕದ ಕಡತಗಳನ್ನು ಹಾಗೂ ರಜಿಸ್ಟರ್‌ನ್ನು ಪರೀಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. 2019-20ನೇ ಸಾಲಿನ ಬೇಡಿಕೆ ರೆಜಿಸ್ಟರನಲ್ಲಿ 2018-19ನೇ ಸಾಲಿನಲ್ಲಿ ಬಾಕಿ ಉಳಿದ ಶಿಲ್ಕಿನ ಮೊತ್ತವನ್ನು 2019-20ರ ಆರಂಭಿಕ ಶಿಲ್ಕಿನ ಮೊತ್ತ ನಮೂದಿಸಬೇಕಾಗಿರುತ್ತದೆ.
2. ಸದರಿ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲಾದ ಅರ್ಹತಾ ಶುಲ್ಕದ ರೆಜಿಸ್ಟರನಲ್ಲಿ ಬರಬೇಕಾದ ಶುಲ್ಕ ಹಾಗೂ ಸಂದಾಯವಾಗಿರುವ ಮೊತ್ತ ಹಾಗೂ ಬಾಕಿ ಉಳಿದ ಶಿಲ್ಕಿನ ಮೊತ್ತಗಳನ್ನು ನಿಖರವಾಗಿ ನಮೂದಿಸಿರುವುದಿಲ್ಲ. ಮುಂದುವರೆದಂತೆ ಸದರಿ ರಜಿಸ್ಟರ್‌ನ್ನು ವರ್ಷಾಂತ್ಯದಲ್ಲಿ ನಮೂದಿಸಲಾದ ಅಂಕಿ ಅಂಶಗಳು ಅಧೀಕೃತವಾಗಿರುವುದಕ್ಕೆ ಯಾವುದೇ ಅಧಿಕಾರಿ/ಸಿಬ್ಬಂದಿಗಳು ಸಹಿ ಮಾಡಿರುವುದಿಲ್ಲ. ಆದ್ದರಿಂದ ನಿರ್ವಹಿಸಲಾದ ರೆಜಿಸ್ಟರ್‌ನ್ನು ನಮೂದಿಸಲಾದ ವಿವರಗಳಿಗೆ ಮಾನ್ಯ ಮಾಡಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಂತೆ ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ವಿವರ | ಸ್ನಾತಕೋತ್ತರ ವಿಭಾಗಗಳು | ಬೇಡಿಕೆ | ವಸೂಲಿ | ಬಾಕಿ |
|---|---|---|---|---|---|
| 01 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ | 19 | 1,43,10,788 | 84,97,286 | 58,13,502 |

ಈ ಮೇಲೆ ವಿವರಿಸಿದಂತೆ ಬೇಡಿಕೆ ರೂ. 1,43,10,788/- ವಸೂಲಾತಿ ರೂ. 84,97,286/- ಹಾಗೂ ಇನ್ನು ಬರಬೇಕಾದ ಬಾಕಿ ರೂ. 58,13,502/- ಗಳು ಆಗಿರುತ್ತದೆ. ಹಾಗೂ ಉಲ್ಲೇಖ 01 ರಂತೆ ಕೊನೆಯ ದಿನಾಂಕವನ್ನು ನಮೂದಿಸಿದ್ದು ಅದಕ್ಕೆ ಯಾವುದೇ ಮೊತ್ತ ನಮೂದಿಸಿರುವುದಿಲ್ಲ. ಇದರಿಂದಾಗಿ ಎಲ್ಲಾ ಕೇಂದ್ರ/ವಿಭಾಗಗಳ ಕೊನೆಯ ದಿನಾಂಕ ಮುಗಿದ ನಂತರ 1 ಹಾಗೂ 2 ತಿಂಗಳುಗಳ ನಂತರ ವಿಶ್ವವಿದ್ಯಾಲಯಕ್ಕೆ ಹಣ ಭರಿಸಿರುವುದು ಕಂಡುಬಂದಿರುತ್ತದೆ.

3. ಪ್ರವೇಶ ಶುಲ್ಕವನ್ನು ಕೆಲವು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಆನ್‌ಲೈನ ಮುಖಾಂತರ ವಿಶ್ವವಿದ್ಯಾಲಯದ ವೆಬ್‌ಸೈಟಿನ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿದ್ದು ಅವುಗಳ ಚಲನ ಪ್ರತಿ ವಿಶ್ವವಿದ್ಯಾಲಯಕ್ಕೆ ದಾಖಲಿಸಿರುವುದು ಕಂಡುಬಂದಿರುವುದಿಲ್ಲ. ಇನ್ನು ಕೆಲವು ಮಹಾವಿದ್ಯಾಲಯಗಳು ಸಂದಾಯ ಮಾಡುತ್ತಿರುವ ಬಗ್ಗೆ ಹಾಗೂ ಕೆಲವೊಂದು ಮಹಾವಿದ್ಯಾಲಯದವರು ಅಪೂರ್ಣ ಶುಲ್ಕವನ್ನು ಸಂದಾಯ ಮಾಡುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಇದರಿಂದ ಪ್ರತಿ ವರ್ಷವು ಮಹಾವಿದ್ಯಾಲಯಗಳಿಂದ ಬರಬೇಕಾದ ಪ್ರವೇಶ ಶುಲ್ಕದ ಕೋಟಿಗಳಷ್ಟು ಮೊತ್ತವು ವಸೂಲಾತಿಯಾಗದೆ ಬಾಕಿ ಉಳಿದುಕೊಳ್ಳುತ್ತಿದೆ.

   ಆದ್ದರಿಂದ ಪ್ರವೇಶ ಶುಲ್ಕವನ್ನು ಸಂದಾಯ ಮಾಡಲು ಅನುಸರಿಸುತ್ತಿರುವ ಸದರಿ ಪದ್ದತಿಯನ್ನು ಬದಲಾಯಿಸಿ ನೇರವಾಗಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾಲಯದ ವೆಬ್‌ಸೈಟನ್ನು online ಮುಖಾಂತರ ಶುಲ್ಕ ಪಾವತಿಯ ಪದ್ಧತಿಯನ್ನು ಅಳವಡಿಸಬಹುದಾಗಿದೆಯೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ನೀಡಲಾಗಿದೆ.

4. ಅನುಬಂಧ-4ರಲ್ಲಿ ತೋರಿಸಿದಂತೆ ಮಹಾವಿದ್ಯಾಲಯಗಳಿಂದ ವಸೂಲಾತಿಯಾಗಬೇಕಾದ ಒಟ್ಟು ಮೊತ್ತ ರೂ.58,13,502/-ಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಖಾತೆಗೆ ಭರಿಸಲು ಸೂಚಿಸಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 16 ದಿನಾಂಕ: 29-09-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಸೂಲಾತಿಯ ಕ್ರಮ ಕಾರ್ಯಗತದಲ್ಲಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಮೊತ್ತ **ರೂ.58,13,502/- ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

12. **Work completion Reports ಇಲ್ಲದೇ ಕಾಮಗಾರಿಗಳ ಅಂತಿಮ ಬಿಲ್ಲು ಪಾವತಿಸಿರುವ ಬಗ್ಗೆ.**

2018-19 ಮತ್ತು 2019-20ನೇ ಸಾಲಿನಲ್ಲಿ ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿರುವ ಕಾಮಗಾರಿಗಳ ಅಂತಿಮ ಬಿಲ್ಲುನ Completion reports ತಯಾರಿಸದೇ ಪಾವತಿಸಿರುವ ಕುರಿತು.

| Sl No. | Subject | Total payment | Final bill payment | Agency Name | Cheque No. |
|---|---|---|---|---|---|
| 1 | VC, Registrar, Registrar (Evaluation) FO & EE Quarters | 3,37,93,999 | 64,95,113 | M/S Shrinivas Contruction | 192621/ 05-10-2018 |
| 2 | Maintenance & special repairs to VSKU P.G Center Campus & Koppal | 20,15,801 | 1,45,122 | M/S Nizamuddin Basha | 192631/ 15-11-2018 |
| 3 | Bayalu Ranga Mandira | 57,66,770 | 34,42,795 | M/S R.G Venkatesh | 192635/ 07-02-2019 |
| 4 | Faculty Buiding @ VSKUB Campus | - | 43,72,269 | M/S High Greega infratech | 192640/ 21-02-2019 |
| 5 | Chain link fencing RCC Round | 65,30,858 | 12,87,259 | M/S B.C Timma reddy | 192663/ 05-03-2020 |
| | | **Total** | **1,57,42,558** | | |

Completion reports ಕುರಿತು, KPWD 193 (1) ರನ್ವಯ Before the final bill is paid to the contractor, the Departmental officers should furnish certificates of completion of works as per terms and conditions of the contractor ಎಂದು, 193 (2) ರಲ್ಲಿ The certificates of completion should be furnished by the concerned officers within a period of one month after the actual date of completion ಎಂದು, KPWD 223 ರಲ್ಲಿ The accounts of all works must be closed as soon as the works are completed and completion report sent to compeleted authority within three months ಎಂದು, 223 (6)ರಲ್ಲಿ completion reports before being forwarded to the concerned competent authority shall be noted in the register of sanction to estimates & number

and date of all completion reports shall be quoted on the pages of register of works below closing entries" ಎಂದು ತಿಳಿಸಲಾಗಿದೆ. ಆದರೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯವರು 2018-19 ಮತ್ತು 2019-20ನೇ ಸಾಲಿನಲ್ಲಿ ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿರುವ ಕಾಮಗಾರಿಗಳ ಅಂತಿಮ ಬಿಲ್ಲುಗಳನ್ನು ಕಾಮಗಾರಿಗಳ completion reports (ನಿಗದಿತ ನಮೂನೆಗಳಲ್ಲಿ) ತಯಾರಿಸದೇ ಪಾವತಿಸಿರುವುದು ಗಮನಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 17 ದಿನಾಂಕ: 29-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕೆ.ಪಿ.ಡಬ್ಲ್ಯೂ.ಡಿ. ನಿಯಮಗಳಂತೆ ಕಾಮಾಗಾರಿ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸುತ್ತಾ ಅವುಗಳ ಪತ್ರಿಗಳನ್ನು ಉತ್ತರಗಳೊಂದಿಗೆ ಸಲ್ಲಿಸಲಾಗಿದೆ. ಆದರೆ ಎಲ್ಲಾ Completion certificate ಮೇಲೆ AEE ರವರ ಸಹಿ ಇದ್ದು, ನಿಯಮ KPWD 193(1) ರನ್ವಯ ರೂ.20 ಲಕ್ಷಕ್ಕಿಂತ ಮೇಲ್ಪಟ್ಟು ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರಗಳನ್ನು ಕಾರ್ಯಪಾಲಕ ಅಭಿಯಂತರರು ನೀಡಬೇಕಾಗಿರುತ್ತದೆ. ಸಹಾಯಕ ಕಾರ್ಯ ಪಾಲಕ ಅಭಿಯಂತರರು ನೀಡಿರುವ ಮುಕ್ತಾಯ ಪ್ರಮಾಣ ಪತ್ರಗಳನ್ನು ಮಾನ್ಯ ಮಾಡದೇ ಕಂಡಿಕೆ ಮುಂದುವರೆಸುತ್ತಾ ಸದರಿ Final billಗೆ ಪಾವತಿಸಿದ ಮೊತ್ತ ರೂ.64,95,113 + 1,45,122 + 34,42,795 + 43,72,269 + 12,87,259 = **1,57,42,558/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**13. ಮುಖ್ಯ ದ್ವಾರದಲ್ಲಿ ನಾಮಫಲಕ ಅಳವಡಿಸುವುದು, ಕಲ್ಲಿನ ಕಟ್ಟಡ, ವಿದ್ಯುತ್ ಮತ್ತು ಇತರೆ ಕೆಲಸಗಳು.**

| | | |
|---|---|---|
| ಅಂದಾಜು ಮೊತ್ತ ರೂ. | : | 23,52,000/– |
| ಕರಾರು ಒಪ್ಪಂದದ ಮೊತ್ತ ರೂ. | : | 23,49,675/– |
| ಏಜೆನ್ಸಿಯ ಹೆಸರು | : | ಶ್ರೀ ನಿಜಾಮುದ್ದೀನ್ ಬಾಷಾ. |
| 1st RA Bill Rs. | : | 6,38,380.82 |
| 2nd RA Bill Rs. | : | 17,53,343.83 Vide vr No. 1+2 |
| | : | 23,91,724.65 Cheque No. 192617 Dated:25.04.2018 |
| Excess over Estimated cost | : | 23,52,000 - 23,91,724.6 = 39,724 i.e 1.69% |
| Excess over Agreement cost | : | 23,49,675 - 23,91,724=42,049 ie 1.79% |
| Work order date | : | 12.04.2017 |
| Date of Mark out | : | 01.06.2017 |
| Completion date | : | 30.07.2017 |
| Completion date (As per actual) | : | 03.02.2018 |
| Delay | : | 216 days |

ಸದರಿ ಕಾಮಗಾರಿಯ ವೆಚ್ಚವು ಟೆಂಡರಿಗಿಟ್ಟ ಅಂದಾಜು ಮೊತ್ತಕ್ಕಿಂತ ರೂ.39,724/– ie 1.69% ಗಳಷ್ಟು ಹೆಚ್ಚಾಗಿದ್ದು, ಸದರಿ ಹೆಚ್ಚುವರಿ ವೆಚ್ಚವನ್ನು ಯಾವ ಕಾಮಗಾರಿಯ ಉಳಿತಾಯದಿಂದ ಭರಿಸಿದೆ ವಿವರಿಸುವುದು.

ಸದರಿ ಕಾಮಗಾರಿಯ ವೆಚ್ಚವು ಕರಾರು ಒಪ್ಪಂದದ ಮೊತ್ತಕ್ಕಿಂತ ರೂ. 42,049/– ie 1.79% ಗಳಷ್ಟು ಹೆಚ್ಚಾಗಿದ್ದು ಸದರಿ ಹೆಚ್ಚುವರಿ ಮೊತ್ತವನ್ನು ಭರಿಸಲು ಗುತ್ತಿಗೆದಾರನಿಂದ (KPWD 184 (4) ರನ್ವಯ ಮಾಡಿಕೊಳ್ಳಲಾದ ಪರಿಷ್ಕೃತ ಕರಾರು ಒಪ್ಪಂದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಸದರಿ ಕಾಮಗಾರಿಯ ಕಾರ್ಯಾದೇಶವು ದಿನಾಂಕ 12.04.2017 ರಂದು ನೀಡಿದ್ದು, ಮಾರ್ಕಔಟ್ ದಿನಾಂಕ 01.06.2017 ರಂದು ನೀಡಿದೆ ಕೆಪಿಡಬ್ಲೂಡಿ Code 196 (1) ರನ್ವಯ The site should be handed over to contractor within 15 days ಎಂದು ತಿಳಿಸಿದೆ. ಇಲ್ಲಿ Mark out ನೀಡಲು ಸುಮಾರು 49 ದಿನಗಳು ತೆಗೆದುಕೊಂಡಿದ್ದು ವಿಳಂಬಕ್ಕೆ ಕಾರಣಗಳನ್ನು ನೀಡುವುದು.

ಸದರಿ ಕಾಮಗಾರಿಯು ದಿನಾಂಕ: 30.07.2017 ರಂದೇ ಮುಗಿಯಬೇಕಾಗಿತ್ತು. ಆದರೆ ಸುಮಾರು 216 ದಿನಗಳ ವಿಳಂಬದ ನಂತರ ದಿನಾಂಕ:03.02.2018 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಕಾಮಗಾರಿಯ ಅವಧಿ ವಿಸ್ತರಣೆಗೆ ಕಾರಣ ನೀಡುತ್ತಾ ಸದರಿ ಕಾಮಗಾರಿಯ ಸ್ಥಳವು ತುಂಗಭದ್ರಾ ಮಂಡಳಿಯ ವ್ಯಾಪ್ತಿಯಲ್ಲಿದ್ದೂ ಮಂಡಳಿಯಿಂದ ಅನುಮತಿ ಪಡೆಯಲು ವಿಳಂಬವಾಗಿದೆ ಎಂದು ಮತ್ತು 07/2017, 08/2017, 09/2017, 10/2017 ತಿಂಗಳುಗಳಲ್ಲಿ ಬಳ್ಳಾರಿಯಲ್ಲಿ ಭಾರಿ ಮಳೆಯಿಂದ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ ಎಂದು ಗುತ್ತಿಗೆದಾರನು ದಂಡ ರಹಿತವಾಗಿ ಕೆಲಸದ ಅವಧಿಯನ್ನು ವಿಸ್ತರಿಸಲು ಕೋರಿದ ಪ್ರಯುಕ್ತ ಅವಧಿ ವಿಸ್ತರಣೆ ಮಾಡಲಾಗಿದೆ. ಆದರೆ ಈ ಸಂಬಂಧ ಕೆಪಿಡಬ್ಲ್ಯೂಡಿ 195 (2), (3), (5), (6), (7) & (8) ಗಳಲ್ಲಿ ತಿಳಿಸಿರುವಂತೆ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಸದರಿ ಕಾಮಗಾರಿಗಳಲ್ಲಿ ವಿವರ ಈ ಕೆಳಗಿನಂತಿರುತ್ತದೆ.

| Sl No. | Item No | Tender Qty | Executed Qty | Excess Qty | Rate | Amount |
|---|---|---|---|---|---|---|
| 1 | 1 | 85 | 213.93 | 128.93 | 47 | 6,059.71 |
| 2 | 4 | 53 | 99.53 | 46.53 | 4240 | 1,97,287.20 |
| 3 | 9 | 23 | 62.33 | 39.33 | 298 | 11,720.34 |
| 4 | 22 | 54 | 91.41 | 37.41 | 640 | 23,942.40 |
| 5 | 36(a) | 180 | 299.10 | 119.10 | 18 | 2,143.80 |
| 6 | 36(b) | 19 | 169.80 | 79.80 | 29 | 2314.20 |
| | | | | | **Total** | **2,43,467.65** |

ಈ ಕೆಳಗೆ ನಮೂದಿಸಿದ ರಲ್ಲಿ ವಿವರಿಸಿರುವಂತೆ ಒಟ್ಟು 6 ಐಟಂಗಳಲ್ಲಿ ಪರಿಮಾಣಗಳು ಅಂದಾಜು ಪರಿಮಾಣಗಳಿಗಿಂತ 125% ಗಿಂತ ಹೆಚ್ಚಾಗಿದ್ದು, ಕೆಪಿಡಬ್ಲ್ಯೂಡಿ 133 (1) ರಲ್ಲಿ ತಿಳಿಸಿರುವಂತೆ ಕ್ರಮಕೈಗೊಂಡಿರುವುದಿಲ್ಲ. ಅದೇ ರೀತಿ ಸದರಿ ಹೆಚ್ಚುವರಿ ಪರಿಮಾಣಗಳನ್ನು ಕೈಗೊಳ್ಳಲು ಕೆಪಿಡಬ್ಲ್ಯೂಡಿ Code ನ 184 (9) ರಲ್ಲಿ ತಿಳಿಸಿರುವಂತೆ ಸಕ್ಷಮ ಪ್ರಾಧಿಕಾರದಿಂದ ಮೊದಲೇ ಅನುಮತಿ ಪಡೆಯದೇ ಕಾಮಗಾರಿ ಮುಕ್ತಾಯದ ನಂತರ ನೇರವಾಗಿ ಅಂತಿಮ ಬಿಲ್ಲು ಪಾವತಿಸಲು ಅನುಮತಿ ಪಡೆದಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

ಮುಂದುವರೆದು ಕೆಪಿಡಬ್ಲ್ಯೂಡಿ ನಿಯಮ 193 (1) ರಲ್ಲಿ ತಿಳಿಸಿರುವಂತೆ ಕಾಮಗಾರಿ ಮುಕ್ತಾಯ ಪತ್ರವನ್ನು ನೀಡದೇ ಅಂತಿಮ ಬಿಲ್ಲು ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 19 ದಿನಾಂಕ: 29-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿಶ್ವವಿದ್ಯಾಲಯವು ಮುಂದಿನ

ಕಾಮಾಗಾರಿಗಳಲ್ಲಿ ಕರಾರು ಒಪ್ಪಂದಕ್ಕಿಂತ ಹೆಚ್ಚಿನ ವೆಚ್ಚವಾದಲ್ಲಿ ಪರಿಷ್ಕೃತ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲಾಗುವುದೆಂದು, ವಿಶ್ವವಿದ್ಯಾಲಯದ ಮುಂದಿನ ಕಾಮಾಗಾರಿಗಳಲ್ಲಿನ ಸಿಟುಗಳಲ್ಲಿ ಅಂದಾಜು ಪರಿಮಾಣಗಳಗಿಂತ 125% ಗಿಂತ ಹೆಚ್ಚಾದಲ್ಲಿ KPWD 133(1) ದಲ್ಲಿ ಮತ್ತು 189(9) ರಲ್ಲಿ ತಿಳಿಸಿರುವಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ಪಾವತಿಯಾದ ಒಟ್ಟು ಮೊತ್ತ **ರೂ.23,91,725/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

14. **C/o Faculty Building at VSKUB Compus ಕಾಮಗಾರಿಯ ಭದ್ರತಾ ಠೇವಣಿ ಹಣ ಬಿಡುಗಡೆ ಕುರಿತು**.

ಓಚರ್ ಸಂಖ್ಯೆ 25 ಚೆಕ್ ಸಂಖ್ಯೆ 192641 ದಿನಾಂಕ: 21.02.2019 ರನ್ವಯ C/o Faculty Building at VSKUB Compus ನಿರ್ಮಿಸಿದ ಗುತ್ತಿಗೆದಾರ (M/s Higreeva Infratec Pvt Ltd.) ರವರ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ FSD ಮೊತ್ತವನ್ನು ಬಿಡುಗಡೆಗೊಳಸಿದೆ. ಈ ಸಂಬಂಧ ಲೆಕ್ಕಪರಿಶೋಧನೆಗೆ ಈ ಕೆಳಗಿನ ಅಂಶಗಳಗೆ ಸೂಕ್ತ ವಿವರಣೆ ನೀಡಲು ಕೋರಲಾಗಿದೆ.

1) ಕಾಮಗಾರಿಯ ಮುಕ್ತಾಯ ಪ್ರಮಾಣ ಪತ್ರಗಳನ್ನು (ನಿಗದಿತ ನಮೂನೆ (P.W.G. 45,46,47) ಪರಿಶೀಲಿಸದೇ FSD ಹಣ ಹೇಗೆ ಬಿಡುಗಡೆಗೊಳಸಿದೆ ವಿವರಿಸುವುದು.
2) Defects Liability Period ನಲ್ಲಿ (KPWD 192 ರನ್ವಯ) ಕಾಮಗಾರಿಗಳನ್ನು ಗುತ್ತಿಗೆದಾರನು ತನ್ನ ಸ್ವಂತ ಖರ್ಚಿನಲ್ಲಿ ಸುಸ್ಥಿತಿಯಲ್ಲಿ ನಿರ್ವಹಿಸಬೇಕು. ಈ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು ಗುತ್ತಿಗೆದಾರನು ಸದರಿ ಕಾಮಗಾರಿಯನ್ನು ತನ್ನ ಸ್ವಂತ ಖರ್ಚಿನಲ್ಲಿ ಸುಸ್ಥಿತಿಯಲ್ಲಿ ನಿರ್ವಹಿಸಿರುತ್ತಾನೆಂದು ಮತ್ತು ಕಾಮಗಾರಿಯ ಸುಸ್ಥಿತಿಯ ನಿರ್ವಹಣೆ ಕುರಿತು ವಿಶ್ವವಿದ್ಯಾಲಯದಿಂದ ಯಾವುದೇ ವೆಚ್ಚ ಭರಿಸಲಾಗಿಲ್ಲವೆಂದು ಸೂಕ್ತ ಪ್ರಮಾಣ ಪತ್ರ ನೀಡಬೇಕು.
3) ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಓಚರ್ ಸಂ. 29 ಚೆಕ್ ಸಂಖ್ಯೆ. 192640 ದಿನಾಂಕ: 21.02.2019 ರನ್ವಯ VII$^{th}$ & Part Bill ಅನ್ವಯ ರೂ. 43,72,269/- ಗಳನ್ನು ಪಾವತಿಸಿದ್ದು, ಸದರಿ ಕಾಮಗಾರಿಯ ಅಂತಿಮ ಬಿಲ್ಲು ಸಹ ಪಾವತಿಯಾಗಿರುವುದಿಲ್ಲ. ಈ ರೀತಿ ಅಂತಿಮ ಬಿಲ್ಲು ಪಾವತಿಯಾಗದೇ FSD ಹಣವನ್ನು ಹೇಗೆ ಬಿಡುಗಡೆಗೊಳಸಲಾಗಿದೆ ವಿವರಿಸುವುದು.
4) ಓಚರ್ ಸಂಖ್ಯೆ 24 ರನ್ವಯ VII & Part bill ನ್ನು ಪಾವತಿಸಿದ್ದು, ಸದರಿ ಬಿಲ್ಲಿನಲ್ಲಿ FSD ರೂಪದಲ್ಲಿ ರೂ.2,62,336/- ಕಟಾಯಿಸಿದ್ದು, ಓಚರ್ ಸಂಖ್ಯೆ 25 ರನ್ವಯ, ಸದರಿ VII & Part ಬಿಲ್ಲಿನಲ್ಲಿ ಕಟಾಯಿಸಿದ ಮೊತ್ತ ಬಿಡುಗಡೆಗೊಳಸಿದೆ. ಕಾರಣಗಳೇನು? ನಿಯಮಗಳನ್ನು ಉಲ್ಲೇಖಿಸಿ ವಿವರಿಸುವುದು.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 20 ದಿನಾಂಕ: 29-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆ ಉತ್ತರ ನೀಡುತ್ತಾ ಸದರಿ ಕಾಮಗಾರಿಯು ದಿನಾಂಕ: 28-02-2015 ರಂದೇ ಮುಗಿದಿರುವುದರಿಂದ ಅಂತಿಮ ಬಿಲ್ಲಿನ ಜೊತೆ FSD ಹಣವನ್ನು

ಬಿಡುಗಡೆ ಮಾಡಲಾಗಿದೆಂದು ತಿಳಿಸಲಾಗಿದೆ. ಆದರೆ ಸದರಿ ಕಾಮಗಾರಿಯು ದಿನಾಂಕ: 28-02-2015 ರಂದು ಮುಗಿದ ಬಗ್ಗೆ ದೃಢೀಕರಣದ ದಾಖಲೆಗಳು ಲಗತ್ತಿಸಿರುವುದಿಲ್ಲ, ವಿಶ್ವವಿದ್ಯಾಲಯದ ಮುಂದಿನ ಕಾಮಗಾರಿಗಳಲ್ಲಿ FSD ಹಣ ಬಿಡುಗಡೆಗೊಳಿಸುವ ಮೊದಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ವಿಶ್ವವಿದ್ಯಾಲಯದಿಂದ ಯಾವುದೇ ವೆಚ್ಚ ಭರಿಸಲಾಗಿಲ್ಲವೆಂಬ ಸೂಕ್ತ ಪ್ರಮಾಣ ಪತ್ರವನ್ನು ನೀಡದೇ ಕ್ರಮ ವಹಿಸಲಾಗುವುದು ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಒಟ್ಟು ಮೊತ್ತ **ರೂ.43,72,269/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. (ಆಕ್ಷೇಪಣೆ ಮೊತ್ತ ರೂ. 43,72,269/-ಗಳು ಕಂಡಿಕೆ/ವಿಚಾರಣೆ ಸಂಖ್ಯೆ:21 ರಲ್ಲಿ ಸೇರಿಕೊಂಡಿರುತ್ತದೆ)

15. **C/O Faculty Building (GF & FF) at VSKUB campus ಕಾಮಗಾರಿಯ VII RA ಬಿಲ್ಲಿನ ಕುರಿತು**.

| | | |
|---|---|---|
| Agency Name | : | Jagadeeshwardu Chillukuri (M/S Hight greeva infratech) |
| Work order date | : | 23.08.2013 |
| Date of Mark out- | : | 29.09.2012 |
| Date of Agreement | : | 10.09.2012 |
| Estimated cost- | : | 6,35,00,000 |
| Agreement Amount- | : | 6,98,58,353 |
| EIRL I- | : | 11,21,347 |
| EIRL II- | : | 3,61,806 |
| **Total Amount** | **:** | **7,13,41,506** |

ಸದರಿ ಕಾಮಗಾರಿಯ VI & part bill ವರೆಗೆ ರೂ.7,05,36,311/-ಗಳು ಪಾವತಿಯಾಗಿದ್ದು, ಈಗ ವೋಚರ್ ಸಂಖ್ಯೆ:24 ಚೆಕ್ ಸಂಖ್ಯೆ:192640 ದಿನಾಂಕ:21.02.2019 ರನ್ವಯ ರೂ.43,72,296/- ಗಳನ್ನು ಪಾವತಿಸಲಾಗಿದೆ. ಈ ಸಂಬಂಧ ಈ ಕೆಳಗಿನ ಅಂಶಗಳಿಗೆ ವಿವರಣೆ ಕೋರಿದೆ.

ಕೆಪಿಡಬ್ಲ್ಯೂಡಿ ನಿಯಮ 191 ರನ್ವಯ ಕಾಮಗಾರಿಯ ವೆಚ್ಚವು ಅಂದಾಜು ವೆಚ್ಚಕ್ಕಿಂತ ಶೇ. 5% ಮಿರುತ್ತಿದ್ದರೆ ಕಡ್ಡಾಯವಾಗಿ ಪರಿಷ್ಕೃತ ಅಂದಾಜು ತಯಾರಿಸಿ ಅನುಮೋದನೆ ಪಡೆಯಬೇಕು. ಆದರೆ ಈ ಪ್ರಕರಣದಲ್ಲಿ ಕರಾರು ಒಪ್ಪಂದದ ಮೊತ್ತವೇ ಅಂದಾಜು ಮೊತ್ತಕ್ಕಿಂತ ಸುಮಾರು 10% ಪ್ರತಿಶತ ಹೆಚ್ಚಾಗಿರುತ್ತದೆ. ಈಗ ವೋಚರ್ ಸಂಖ್ಯೆ:24 ರನ್ವಯ ಪಾವತಿಯಾದ ಮೊತ್ತ ಕೂಡಿಸಿದರೆ ಒಟ್ಟು ಪಾವತಿ ರೂ.7,49,08,607/-ಗಳಾಗಿದ್ದು ಇದು ಅಂದಾಜು ಮೊತ್ತಕ್ಕೆ ಹೋಲಿಸಿದರೆ ಸುಮಾರು ರೂ.1,14,08,607/- ಶೇ.17.96% ಹೆಚ್ಚಾಗಿದೆ. ಕೆ.ಪಿ.ಡಬ್ಲ್ಯೂ.ಡಿ ನಿಯಮ 191 ರಲ್ಲಿ Excess over the sanctioned estimate should be strictly avoided. However a revised estimate must be prepared when a sanctioned estimate is likely to be exceeded by more than 5%. The revised estimate so prepared shall be got approved by competent authority as per Govt order pwd 671 FC-01 2009 Date: 30.02.2010. The field engineer as well as AEE shall be responsible for prompt submission of revised estimate" ಎಂದು ತಿಳಿಸಿದೆ. ಆದರೆ ಈ ಪ್ರಕರಣದಲ್ಲಿ ಅಂದಾಜಿಗಿಂತ ಶೇ. 17.96% ಗಳಷ್ಟು ಹೆಚ್ಚಿನ ಖರ್ಚು ಭರಿಸಿದ್ದು, ಸದರಿ ಹೆಚ್ಚುವರಿ ಖರ್ಚನ್ನು ಪರಿಷ್ಕೃತ ಅಂದಾಜು ಪಟ್ಟಿ ಮಂಜೂರಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ**

**ಪತ್ರ ಸಂಖ್ಯೆ: 21 ದಿನಾಂಕ:29-09-2021 ರಂದು ನೀಡಲಾಗಿದೆ**. ಸದರಿ ಕಾಮಾಗಾರಿಗೆ ಅಂದಾಜಿಗಿಂತ ಹೆಚ್ಚುವರಿ ವೆಚ್ಚವಾಗಿದಕ್ಕೆ ಸವಿಸ್ತರವಾಗಿ ಉತ್ತರ ನೀಡಲಾಗಿದೆ. ಆದರೆ ಅಂದಾಜು ಮೊತ್ತಕ್ಕಿಂತ ಕರಾರು ಒಪ್ಪಂದದ ಮೊತ್ತವು ಹೆಚ್ಚಾಗಿರುವುದಕ್ಕೆ ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ ಮತ್ತು ಕೆ.ಪಿ.ಡಬ್ಲ್ಯೂ.ಡಿ ನಿಯಮ 191 ರನ್ವಯ ಪರಿಷ್ಕೃತ ಅಂದಾಜು ಮಂಜುರಿಸಿಕೊಳ್ಳುವುದು ಅವಶ್ಯವಿರುವುದರಿಂದ ಅಂದಾಜು ಮೊತ್ತ (ರೂ.6,35,00,000/-ಕ್ಕಿಂತ ಹೆಚ್ಚುವರಿಯಾದ ಮೊತ್ತ (ರೂ.7,49,08,607/- ರೂ.6,35,00,000) **ರೂ.1,14,08,607/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

16. **ನಗದು ಪುಸ್ತಕವನ್ನು ನಿರ್ವಹಿಸದೇ ಇರುವ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯವರು ಒದಗಿಸಿದ ಮಾಹಿತಿಯ ಪ್ರಕಾರ ವಿಶ್ವವಿದ್ಯಾಲಯವು ಪ್ರಾರಂಭದಿಂದ ಇಲ್ಲಿಯವರೆಗೆ ನಗದು ಪುಸ್ತಕವನ್ನು ನಿರ್ವಹಿಸದೇ ವ್ಯವಹಾರವನ್ನು (Transaction) ಕೈಗೊಳ್ಳುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.

ನಗದು ಪುಸ್ತಕದ ಕುರಿತು, ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 329 (i) ರಲ್ಲಿ "Every officer receiving money on behalf of the government should maintain a cash book" ಎಂದು ii) ರಲ್ಲಿ "All monetory transctions should be entered in the cash book as soon as they occur and attested by the head of the office in token of check ಎಂದು iii) ರಲ್ಲಿ "The cash book should be closed regularly and completely checked, The cash balance should be checked with the figures shown in the cash book everyday and the same should verify the totalling of the cash book or have this done by some responsible subordinate other than the writer of the cash book and initial it as correct" ಎಂದು iv) ರಲ್ಲಿ "at the end of each month, the head of the office should verify the cash balance in the cash book and record a signed and dated certificate to that effect. The certificate should also be recorded on the monthly cash account" ಎಂದಿರುತ್ತದೆ.

ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 331 ರಲ್ಲಿ "The cash book has to be written up from day to day, the entry relating to each item of receipt or expenditure being made simultaneously with the transaction. The balance on hand at the beginning of each day being brought forward on the receipt side, the sums received during the course of the day are entered on the receipt side in the order of the receipt while on the expenditure side money spent is entered item by item, noting against each item the corresponding voucher number. The cash book should be closed at the end of each day and the balance struck at the end of the month, after

transactions of the last day of the month are over, the cash book should be closed, as usual, as at the end of each day, and the particulars of items working up to the cash balance should be given in detail" ಎಂದಿರುತ್ತದೆ.

ಈ ಮೇಲಿನ ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 329 ಮತ್ತು 331 ರಲ್ಲಿ ನಗದು ಪುಸ್ತಕವನ್ನು ಬರೆಯುವ ಕುರಿತು ಹಾಗೂ ಹೇಗೆ ಬರೆಯಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ/ನಿಖರವಾಗಿ ತಿಳಿಸಲಾಗಿದೆ. ನಗದು ಪುಸ್ತಕ ನಿರ್ವಹಣೆ ಕುರಿತು ಸ್ಪಷ್ಟ ನಿಯಮಗಳಿದ್ದರೂ ಸಹ ವಿಶ್ವವಿದ್ಯಾಲಯದವರು ನಗದು ಪುಸ್ತಕ ಬರೆಯದೇ ಸದರಿ ನಿಯಮಗಳನ್ನು ಉಲ್ಲಂಘಿಸುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.

ಯಾವುದೇ ಸ್ವೀಕೃತಿ ಮತ್ತು ಪಾವತಿಗೆ ನಗದು ಪುಸ್ತಕವು ಆಧಾರಸ್ಥಂಬವಾಗಿದ್ದು, ನಗದು ಪುಸ್ತಕ ನಿರ್ವಹಿಸದೇ ವಿಶ್ವವಿದ್ಯಾಲಯದಲ್ಲಿ ವ್ಯವಹಾರವನ್ನು ಕೈಗೊಳ್ಳುತ್ತಿರುವುದನ್ನು ಮಾನ್ಯ ಮಾಡಲು ಸಾಧ್ಯವಿಲ್ಲ ಮತ್ತು ಯಾವುದಾದರೂ ಹಣ ದುರುಪಯೋಗವಾದಲ್ಲಿ ಹಣಕಾಸು ಸಮಿತಿ/ಹಣಕಾಸು ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡೆಯಲಾಗಿದೆ ಮತ್ತು ನಗದು ಪುಸ್ತಕ ನಿರ್ವಹಿಸದೇ 2018-19 ಮತ್ತು 2019-20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ ರೂ. 59,69,96,421/- ಮತ್ತು ರೂ. 63,71,09,946/- ಒಟ್ಟಾರೆ ರೂ.123,41,06,367/-ಗಳನ್ನು ಯಾಕೆ ಆಕ್ಷೇಪಣೆಯಲ್ಲಿಡಬಾರದು ಎಂಬುದಕ್ಕೆ ಸ್ಪಷ್ಟೀಕರಣ ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 25 ದಿನಾಂಕ: 30-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮುಂದಿನ ಆರ್ಥಿಕ ವರ್ಷದಿಂದ ನಗದು ಪುಸ್ತಕವನ್ನು ನಿರ್ವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುರೆಸಿದೆ.

17. **ದರಪಟ್ಟಿ ಅಧಿಸೂಚನೆ ಹೊರಡಿಸುವದಕ್ಕಿಂತ ಮೊದಲೇ ದರಪಟ್ಟಿ ಪಡೆದ ಬಗ್ಗೆ.**

ವೋಚರ್ ನಂ:1177 ಚೆಕ್ ಸಂ.360823 ದಿನಾಂಕ:12.03.2019 ರನ್ವಯ ಕ್ರೀಡಾ ವಿಭಾಗಕ್ಕೆ ಟ್ರ್ಯಾಕ್ ಸೂಟ್ಸ ಮತ್ತು ಟಿ.ಶರ್ಟ್ಸ ಸರಬರಾಜು ಮಾಡಿದ್ದಕ್ಕೆ ಶ್ರೀ ರಾಘವೇಂದ್ರ ಸ್ಪೋರ್ಟ್ಸ ಬಳ್ಳಾರಿಯವರಿಗೆ 14,700/-ಪಾವತಿಸಿರುವುದು ಗಮನಿಸಿದೆ. ಸದರಿ ಪಾವತಿ ವೋಚರ್ ಪರಿಶೀಲಿಸಿದಾಗ ಸಾಮಾಗ್ರಿಗಳನ್ನು ಖರೀದಿಸಲು (ಅಧಿಸೂಚನೆ ಸಂಖ್ಯೆ: ಕ್ರ.ಸಂಖ್ಯೆ: ವಿಶ್ರೀಕೃವಿಬ/ಕ್ರೀಡಾ ವಿಭಾಗ/2018-19 ದಿನಾಂಕ:11.03.2019 ರಂದು ದರಪಟ್ಟಿ ಅಧಿಸೂಚನೆ ಹೊರಡಿಸಲಾಗಿದೆ. ದರಪಟ್ಟಿಯಲ್ಲಿ ಭಾಗವಹಿಸಿದ ಶ್ರೀ ರಾಘವೇಂದ್ರ ಸ್ಪೋರ್ಟ್ಸರವರು ದಿನಾಂಕ:07.03.2019 ರಂದು ದರಪಟ್ಟಿ ಸಲ್ಲಿಸಿರುತ್ತಾರೆ. ಅಂದರೆ ದರಪಟ್ಟಿ ಅಧಿಸೂಚನೆ ಹೊರಡಿಸುವುದಕ್ಕಿಂತ ನಾಲ್ಕು (4) ದಿನ ಮೊದಲೆ ಶ್ರೀ ರಾಘವೇಂದ್ರ ಸ್ಪೋರ್ಟ್ಸರವರು ದರಪಟ್ಟಿ ಸಲ್ಲಿಸಿರುತ್ತಾರೆ.

ಶ್ರೀ ರಾಘವೇಂದ್ರ ಸ್ಪೋರ್ಟ್ಸರವರು ದಿನಾಂಕ:18.03.2019 ರಂದು ಬಿಲ್ಲು ತಯಾರಿಸಿರುತ್ತಾರೆ. ಅಂದರೆ ಬಿಲ್ಲು ತಯಾರು ಆಗುವುದಕ್ಕಿಂತ 6 ದಿನ ಮುಂಚೇಯೇ ವಿಶ್ವವಿದ್ಯಾಲಯದವರು ಚೆಕ್ಕು ನೀಡಿರುತ್ತಾರೆ.

ಶ್ರೀ ರಾಘವೇಂದ್ರ ಸ್ಪೋರ್ಟ್ಸರವರು ನೀಡಿದ ಬಿಲ್ಲಿನ ಮೇಲೆ ಸಾಮಗ್ರಿಯ ಗುಣಮಟ್ಟ ಕುರಿತು ಮತ್ತು ಸಾಮಗ್ರಿಗಳನ್ನು ಸ್ಟಾಕ್ ರೆಜಿಸ್ಟರಗೆ ತೆಗೆದುಕೊಂಡ ಬಗ್ಗೆ ಸೂಕ್ತ ಪ್ರಮಾಣ ಪತ್ರಗಳನ್ನು ನೀಡಿರುವುದಿಲ್ಲ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 26 ದಿನಾಂಕ: 30-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಅವಸರದಲ್ಲಿ ಸಮವಸ್ತ್ರ ಖರೀದಿ ಪ್ರಕ್ರಿಯೆ ಮಾಡಿರುವುದರಿಂದ ದಿನಾಂಕದಲ್ಲಿ ವ್ಯತ್ಯಾಸವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಬಿಲ್ಲುಗಳು ಬೋಗಸ್ ಬಿಲ್ಲುಗಳೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡೆಯಲಾಗಿದೆ. ಕಾರಣ ಪಾವತಿ ಮೊತ್ತ ರೂ. **14,700/- ರೂಪಾಯಿಯನ್ನು ಸಂಬಂಧಿಸಿರುವದರಿಂದ ವಸೂಲಾತಿಯಲ್ಲಿಡಲಾಗಿದೆ**.

**18. ಎಸ್.ಸಿ.ಪಿ/ಟಿ.ಎಸ್.ಪಿ ಮಾರ್ಗಸೂಚಿಗಳನ್ನು ಅನುಸರಿಸದಿರುವ ಕುರಿತು.**

2018-19 & 2019-20ನೇ ಸಾಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯವರು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗೆ ಒದಗಿಸಿರುವ ಅನುದಾನದ ಮಾಹಿತಿಯು ಈ ಕೆಳಗಿನಂತಿರುತ್ತದೆ.

<table>
<tr><th>Year</th><th colspan="2">Budget Estimate</th><th>Actual expanditure upto Mar-2019</th></tr>
<tr><td>2018-19 1)</td><td>SCP</td><td>443.20</td><td>262.28</td></tr>
<tr><td>2)</td><td>TSP</td><td>1340.00</td><td>0.00</td></tr>
<tr><td></td><td>TOTAL</td><td>1783.20</td><td>262.28</td></tr>
<tr><td>2019-20 1)</td><td>SCP</td><td>0.00</td><td rowspan="2">0.00</td></tr>
<tr><td>2)</td><td>TSP</td><td>10.40</td></tr>
<tr><td></td><td>TOTAL</td><td>10.40</td><td>0.00</td></tr>
</table>

ಈ ಮೇಲಿನ ಕೋಷ್ಟಕದಲ್ಲಿ ವಿವರಿಸಿದಂತೆ 2018-19ನೇ ಸಾಲಿನಲ್ಲಿ ಟಿ.ಎಸ್.ಪಿ. ಯೋಜನೆಗೆ ರೂ.1340 ಲಕ್ಷಗಳ ಆಯವ್ಯಯವನ್ನು, 2019-20ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗೆ ರೂ. 10.40 ಲಕ್ಷಗಳ ಆಯವ್ಯಯವನ್ನು ಒದಗಿಸಿದರೂ ಯಾವುದೇ ಖರ್ಚನ್ನು ವಿಶ್ವವಿದ್ಯಾಲಯದವರು ಮಾಡಿರುವುದಿಲ್ಲ. ಬಾಕಿ ಉಳಿದ ಅನುದಾನವನ್ನೆ ನಿರಂತರವಾಗಿ ಮುಂದುವರೆಸುತ್ತಾ ಬರುತ್ತಿರುವುದು ಗಮನಿಸಿದೆ.

The Karnataka scheduled castes sub-allocation and Tribal sub-allocation (planning allocation and utilization of Financial Resources) ACT 2013 section 13 ರ ಪ್ರಕಾರ The state government shall, in every financial year, earmark in such manner as may be prescribed, a portion of the Total plan outlays of the state which shall be proportionate to the scheduled castes/scheduled tribes population of the state, the scheduled castes sub-plan and tribal sub-plan fund. In case of unspent amount out of allocation in a particular financial year, the same may be added to the next year allocation, but shall not be carried further beyond that year ಎಂದು ತಿಳಿಸಿದೆ. ಆದರೆ VSKUB ಯಲ್ಲಿ 2013-14 ರಿಂದ ಬಿಡುಗಡೆಯಾದ ಅನುದಾನ ಹಾಗೂ ಮಾಡಲಾದ ಖರ್ಚುಗಳನ್ನು ಪರಿಶೀಲಿಸಿದಾಗ ಸದರಿ ನಿಯಮಗಳ ಕ್ರಮ ಸಂ.13 ರ ಈ ನಿಯಮವನ್ನು ಪಾಲಿಸದೇ ಇರುವುದು ಸ್ಪಷ್ಟವಿದೆ. (ವಿವರ ಅನುಬಂಧ-5 ರಲ್ಲಿ ವಿವರಿಸಿದೆ) ಈ ಸಂಬಂಧ ವಿಶ್ವವಿದ್ಯಾಲಯದಲ್ಲಿ ಹಣಕಾಸು ವರ್ಷದಲ್ಲಿ ಖರ್ಚಾಗದೆ ಬಾಕಿ ಉಳಿದ

ಮೊತ್ತವನ್ನು ಮುಂದಿನ ಹಣಕಾಸು ವರ್ಷದ ನಂತರವು ಉಪಯೋಗಿಸಲು ಸರಕಾರದಿಂದ ಅನುಮತಿ ಪಡೆದಿದೆಯೇ? ಪಡೆದಿದ್ದರೆ ಪತ್ರ ವ್ಯವಹಾರದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲು ತಿಳಿಸಿದೆ.

ಸದರಿ section 16 ರ ನಿಯಮದಲ್ಲಿ the departments shall ensure coverage of the scheduled castes or the scheduled tribes in the ongoing general schemes consistent with their eligibility for the same ಎಂದು ತಿಳಿಸಿದ್ದು, ಈ ಸಂಬಂಧ ವಿಶ್ವವಿದ್ಯಾಲಯದವರು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸುವುದು.

ವಿಶ್ವವಿದ್ಯಾಲಯವು 2019-20ನೇ ಸಾಲಿನ ಆಯುವ್ಯಯ ಅಂದಾಜುಗಳನ್ನು ಪರಿಶೀಲಿಸಲಾಗಿ ಎಸ್‌ಸಿಪಿ/ಟಿಎಸ್‌ಪಿ ಗಳಿಗೆ ಯಾವುದೇ ಅನುದಾನ ಒದಗಿಸದೇ ಇರುವುದು ಗಮನಿಸಿದೆ. ಈ ರೀತಿ ಅನುದಾನ ಒದಗಿಸದೇ ಇರುವುದರಿಂದ ಸರ್ಕಾರದಿಂದ ಬರಬಹುದಾದಂತಹ ಅನುದಾನಗಳನ್ನು ತಪ್ಪಿಸಿದಂತಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ ಮತ್ತು ಈ ರೀತಿ ಅನುದಾನವನ್ನು ಒದಗಿಸದೇ ಇರುವುದಕ್ಕೆ ವಿಶ್ವವಿದ್ಯಾಲಯದವರು ಯಾವುದೇ ಅನುಪಾಲನೆಯನ್ನು ನೀಡಿರುವುದಿಲ್ಲ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ The Karnataka scheduled castes sub-allocation and Tribal sub-allocation (Planning, Allocation and Utilization of Financial Resources) Act 2013 ರ Section 24 ರಲ್ಲಿ ತಿಳಿಸಿರುವಂತೆ ಕ್ರಮ ಜರುಗಿಸಬಹುದಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 27 ದಿನಾಂಕ: 30-09-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಸಮಂಜಸವಾದ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುರೆಸಿದೆ.

**19. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನ ಸಾಗರ ಆವರಣದಲ್ಲಿ ಡಾ.ಬಾಬು ಜಗಜೀವನರಾಮ ಮತ್ತು ಡಾ. ಬಿ.ಆರ್.ಅಂಬೇಡ್ಕರ ಇವರುಗಳ ಪ್ರತಿಮೆಗಳನ್ನು ಒದಗಿಸಿ ಪ್ರತಿಷ್ಠಾಪಿಸಲು ಪ್ಲಾಟ್ ಫಾರಂಗಳನ್ನು ನಿರ್ಮಿಸುವ ಕಾಮಗಾರಿ ಕುರಿತು.**

| | | | |
|---|---|---|---|
| 1 | ಅಂದಾಜು ಮೊತ್ತ ರೂ. | : | 19,20,000/- |
| 2 | ಕರಾರು ಒಪ್ಪಂದದ ಮೊತ್ತ ರೂ. | : | 16,59,145.80/- |
| 3 | ಗುತ್ತಿಗೆದಾರರು ಹೆಸರು | : | ಶ್ರೀ. ಆರ್. ಈ. ವೆಂಕಟೇಶ |
| 4 | Ist RA ಬಿಲ್ಲ್ | : | 9,44,842/–<br>ವೋಚರ್ ಸಂಖ್ಯೆ: 05 ಚೆಕ್ ಸಂಖ್ಯೆ: 870596 ದಿನಾಂಕ:14.06.2018 |
| 5 | IInd & Final ಬಿಲ್ಲ್ | : | 6,53,485/– |
| | **ಪಾವತಿಯ ಮೊತ್ತ** | **:** | **15,98,327/–** |
| 6 | ಕರಾರಿನನ್ವಯ ಕಾಮಗಾರಿ ಮುಕ್ತಾಯ ದಿನಾಂಕ: | : | 28.11.2017. |
| 7 | ವಾಸ್ತವವಾಗಿ ಕಾಮಗಾರಿ ಮುಕ್ತಾಯಗೊಳಸಿದ ದಿನಾಂಕ: | : | 14.02.2018 |
| 8 | ವಿಳಂಬದ ಅವಧಿ | : | 78 ದಿನಗಳು. |

ಸದರಿ ಕಾಮಗಾರಿಯು ದಿನಾಂಕ: 28.11.2017 ಮುಗಿಯಬೇಕಾಗಿತ್ತು. ಆದರೆ ಸುಮಾರು 78 ದಿನಗಳ ವಿಳಂಬದ ನಂತರ ದಿನಾಂಕ: 14.02.2018 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಕಾಮಗಾರಿಯ ಅವಧಿ ವಿಸ್ತರಣೆ ನೀಡುತ್ತಾ,

1. ಪ್ಲಾಟ ಫಾರಂಗಳ ಗೋಡೆಗಳು (Walls) ಕಾಂಕ್ರೀಟಗಳಾಗಿದ್ದು ಕ್ಯೂರಿಂಗ್ ಮಾಡಲು ಮತ್ತು
2. ಪ್ಲಾಟ ಫಾರಂಗಳ ಮಧ್ಯಭಾಗದಲ್ಲಿ ಹಂತ ಹಂತವಾಗಿ ಮಣ್ಣು ತುಂಬಿ ಕಾಂಪ್ಯಾಕ್ಟ ಮಾಡಲು ಒಟ್ಟು 78 ದಿನಗಳು ವಿಳಂಬವಾಗಿರುತ್ತದೆ. ಎಂದು ಗುತ್ತಿಗೆದಾರನು ದಂಡರಹಿತವಾಗಿ ಕೆಲಸದ ಅವಧಿಯನ್ನು ವಿಸ್ತರಿಸಲು ಕೋರಿದ ಪ್ರಯುಕ್ತ, ಅವಧಿ ವಿಸ್ತರಣೆ ಮಾಡಲಾಗಿದೆ.

ಆದರೆ ಕ್ಯೂರಿಂಗ್ ಮಾಡಲು ಮತ್ತು ಮಧ್ಯ ಭಾಗದಲ್ಲಿ ಹಂತ ಹಂತವಾಗಿ ಮಣ್ಣು ತುಂಬಿ ಕಾಂಪ್ಯಾಕ್ಟ ಮಾಡಲು 78 ಹೆಚ್ಚುವರಿ ದಿನಗಳ ಅವಶ್ಯಕತೆ ಇರುತ್ತದೆ ಎಂಬುದನ್ನು ಮಾನ್ಯ ಮಾಡಲು ಬರುವುದಿಲ್ಲ. ಅಲ್ಲದೆ ಈ ಸಂಬಂದ ಕೆ.ಪಿ.ಡಬ್ಲ್ಯೂ.ಡಿ. 195 (2), (3), (5), (6), (7), (8) ಗಳಲ್ಲಿ ತಿಳಿಸುವಂತೆ ಕೈಗೊಂಡ ಕ್ರಮಗಳ ಬಗ್ಗೆ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಸದರಿ ಕಾಮಗಾರಿಯಲ್ಲಿ ಅನುಬಂಧ-6 ರಲ್ಲಿ ವಿವರಿಸಿದಂತೆ, ಒಟ್ಟು 10 ಐಟಂಗಳಲ್ಲಿ ಪರಿಮಾಣುಗಳು ಅಂದಾಜು ಪರಿಮಾಣಗಳಿಗಿಂತ 125% ಗಿಂತ ಹೆಚ್ಚಾಗಿದ್ದು ಕೆ.ಪಿ.ಡಬ್ಲ್ಯೂ.ಡಿ. 133 (1) ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಂಡಿರುವುದಿಲ್ಲ. ಅದೇ ರೀತಿ ಸದರಿ ಹೆಚ್ಚುವರಿ

ಪರಿಮಾಣುಗಳನ್ನು ಕೈಗೊಳಲು ಕೆ.ಪಿ.ಡಬ್ಲ್ಯೂ.ಡಿ. ಕೋಡಿನ 184 (9) ರಲ್ಲಿ ತಿಳಿಸಿರುವಂತೆ ಸಕ್ಷಮ ಪ್ರಾಧಿಕಾರದಿಂದ ಮೊದಲೇ ಅನುಮತಿ ಪಡೆಯದೇ ಕಾಮಗಾರಿ ಮುಕ್ತಾಯದ ನಂತರ ನೇರವಾಗಿ ಅಂತಿಮ ಬಿಲ್ಲು ಪಾವತಿಸಲು ಅನುಮತಿ ಪಡೆದಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

**ಅನುಬಂಧ-6ರಲ್ಲಿ** ವಿವರಿಸಿದಂತೆ 125% ಕ್ಕಿಂತ ಹೆಚ್ಚುವರಿ ಪರಿಮಾಣಗಳಿಗೆ KW 1 ರ Condition of contract ನ 31.2 ರಲ್ಲಿ ವಿವರಿಸಿದಂತೆ ದರ ನೀಡದೆ ಕರಾರು ಒಪ್ಪಂದದ ದರಗಳಂತೆ ಪಾವತಿ ಮಾಡಿರುವುದು ಆಕ್ಷೇಪಿಸಲಾಗಿದೆ.

ಮುಂದುವರೆದು ಕೆ.ಪಿ.ಡಬ್ಲ್ಯೂ.ಡಿ. ನಿಯಮ 193 (1) ರಲ್ಲಿ ತಿಳಿಸಿರುವಂತೆ ಕಾಮಗಾರಿ ಮುಕ್ತಾಯ ಪತ್ರವನ್ನು ನೀಡದೇ ಅಂತಿಮ ಬಿಲ್ಲು ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 28 ದಿನಾಂಕ: 26-10-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ, ಕಂಡಿಕೆಯಲ್ಲಿ ತಿಳಿಸಿರುವ ಅಂಶಗಳನ್ನು ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ಪಾವತಿಯಾದ ಒಟ್ಟು **ಮೊತ್ತ ರೂ.15,98,327/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**20. 2018-19ನೇ ಸಾಲಿನಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯುವ ಸಂಬಂಧ ಕರೆದ ಟೆಂಡರ್‌ನಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು**.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿ ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ 2018-19ನೇ ಸಾಲಿಗೆ ಅಗತ್ಯವಾದ ಹುದ್ದೆಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ನೇಮಿಸಲು ಟೆಂಡರನ್ನು ಕರೆಯಲಾಯಿತು. ಸದರಿ ಟೆಂಡರ್‌ನ ವಿವರಗಳು ಈ ಕೆಳಗಿನಂತಿರುತ್ತವೆ.

| | |
|---|---|
| Tender start Date | 10.12.2018 |
| Last date for uploading tender | 09.01.2019 |
| Technical bid date | 11.01.2019 |
| Financial bid date | 14.01.2019 |
| Approx value of work | 1,97,71,150 |
| EMD | Rs.2,96,600 |
| Period of completion | One year |
| | 01.02.2019 to 31.01.2020 |
| F.S.D | Rs.27,02,060 |
| (02 months salary) | |
| Agreement amount | Rs.1,97,71,150 |
| Certificate No. | IN-KA40244779564431R |
| Stamp duty amount | Rs.200 |

ಸದರಿ ಟೆಂಡರನ್ನು ದಿನಾಂಕ:10.12.2018 ರಂದು ಕರೆಯಲಾಗಿ, ಬಿಡ್‌ದಾರರು ತಮ್ಮ ಬಿಡ್‌ಗಳನ್ನು ಅಪಲೋಡ್ ಮಾಡಲು 30 ದಿನಗಳ ಕಾಲಾವಕಾಶ ನೀಡಲಾಯಿತು. ದಿನಾಂಕ: 11.01.2019 ರಂದು ತೆರೆದ Technical bid ನಲ್ಲಿ 07 ಜನ ಯಶಸ್ವಿ ಬಿಡ್‌ದಾರರು ಭಾಗವಹಿಸಿ ದಿನಾಂಕ:14.01.2019 ರಂದು ತೆರೆದ Financial bid ನಲ್ಲಿ ಅತ್ಯಂತ ಕಡಿಮೆ ಬೆಲೆ ನಮೂದಿಸಿದ M/s Elite Detectives private Ltd ರವರಿಗೆ ಟೆಂಡರನ್ನು ನೀಡಲಾಯಿತು. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

1) ಕೆ.ಟಿ.ಪಿ.ಪಿ. ನಿಯಮಗಳು 2000 ರ ನಿಯಮ 20 (1) ರಲ್ಲಿ ತಿಳಿಸಿರುವಂತೆ, "Tender accepting authority has to constitute a Tender Scrutiny Committee consisting of such officers as it deems fit to scrutinize the tender documents, supervise opening of tenders, carryout preliminary examination and detailed evaluation of the tenders received and to prepare an evaluation report for consideration of the tender accepting

authority" ಎಂದು ಮತ್ತು ನಿಯಮ 20 (2) ರಲ್ಲಿ ಲೊಕೋಪಯೋಗಿ ಇಲಾಖೆ, ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಇಲಾಖೆ/ವಿಭಾಗಗಳಲ್ಲಿ ರೂ. 1.00 ಕೋಟಿಗಿಂತ ಹೆಚ್ಚಿನ ಮೌಲ್ಯದ ಕೆಲಸಗಳ ಟೆಂಡರ್ ಪ್ರಕ್ರಿಯೆಯಲ್ಲಿ ಟೆಂಡರ್ ಸ್ಕ್ರೂಟಿನಿ ಕಮಿಟಿ ರಚಿಸುವುದು ಅವಶ್ಯಕವಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದವರು/ಟೆಂಡರ್ ಕರೆಯುವ ಅಧಿಕಾರಿಯು ಟೆಂಡರ್ ಇವ್ಯಾಲುವೇಶನ ರಿಪೋರ್ಟ್ ತಯಾರಿಸದೇ ನೇರವಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಎಲ್ಲಾ ಬಿಡ್‌ದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಿ ಹಣಕಾಸು ಬಿಡ್ ತೆರೆದು ಈ ಮೇಲೆ ತಿಳಿಸಿರುವ ಕೆ.ಟಿ.ಪಿ.ಪಿ. ನಿಯಮದ ಉಲ್ಲಂಘನೆಯನ್ನು ಮಾಡಿರುತ್ತಾರೆ. ಇದಕ್ಕೆ ಸ್ಪಷ್ಟೀಕರಣ ಕೋರಿದೆ.

2) ಕರಾರು ಒಪ್ಪಂದದ ಕ್ರಮ ಸಂಖ್ಯೆ (4) ರನ್ವಯ ಟಿ.ಡಿ.ಎಸ್.ನ್ನು ಕಡ್ಡಾಯವಾಗಿ ಕಡಿತಗೊಳಸಬೇಕಾಗಿರುತ್ತದೆ. ಸದರಿ ಏಜೆನ್ಸಿಗೆ ಪಾವತಿಯಾದ ಬಿಲ್ಲನ್ನು ಪರಿಶೀಲಿಸಲಾಗಿ TDS on GST 2% ನ್ನು ಕಡಿತಗೊಳಿಸಿರುವುದಿಲ್ಲ ಪ್ರಯುಕ್ತ 2018-19ನೇ ಸಾಲಿಗೆ ಪಾವತಿಯಾದ ಒಟ್ಟು ಮೊತ್ತ ರೂ.1,97,71,150/-ಗಳಿಗೆ 2% ಅಂದರೆ ರೂ.3,95,423/-ಗಳನ್ನು ಸದರಿ ಏಜೆನ್ಸಿಯಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಭರಿಸಲು ತಿಳಿಸಿದೆ.

3) Karnataka stamp duty Act of 1957 amended in 2012 ರ ಪ್ರಕಾರ ರೂ.10.00 ಲಕ್ಷದವರೆಗೆ ರೂ.100 ರ stamp duty ಯನ್ನು ನಂತರದ ಪ್ರತಿ 10.00 ಲಕ್ಷಕ್ಕೆ ರೂ.100 ರಂತೆ ಹೆಚ್ಚಿಗೆ stamp duty ಯನ್ನು ಪಡೆದು ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ 2018-19ನೇ ಸಾಲಿನಲ್ಲಿ ಅಂದಾಜಿಸಿದ ಮೊತ್ತ ರೂ. 1,97,71,150/- ಗಳಿಗೆ ರೂ. 2000 ರ stamp duty ಯನ್ನು ಸದರಿ ಏಜೆನ್ಸಿಯಿಂದ ಪಡೆಯಬೇಕಾಗುತ್ತದೆ. ಆದರೆ ವಿಶ್ವವಿದ್ಯಾಲಯದವರು ರೂ.200/-ಗಳ stamp duty ಯನ್ನು ಮಾತ್ರ ಪಡೆದಿದ್ದು, ವ್ಯತ್ಯಾಸದ ಮೊತ್ತ ರೂ. 1800/- ಗಳನ್ನು ಸದರಿ ಏಜೆನ್ಸಿಯಿಂದ ವಸೂಲಿಸಿ ಸಬಂಧಪಟ್ಟ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆಗೊಳಿಸಲು ತಿಳಿಸಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 29 ದಿನಾಂಕ:26-10-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಯಲ್ಲಿ ತಿಳಿಸಿರುವ ಅಂಶಗಳನ್ನು ಮುಂದಿನ ದಿನಗಳಲ್ಲಿ ಪಾಲಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆ ಮುಂದುರೆಸುತ್ತಾ ಒಟ್ಟು ಮೊತ್ತ **ರೂ.3,95,423/- ಗಳನ್ನು ವಸೂಲಾತಿಯಲ್ಲಿಡಲಾಗಿದೆ**.

**21. 2018-19 ಮತ್ತು 2019-20ನೇ ಸಾಲಿನಲ್ಲಿ ಸರ್ಕಾರದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ಹೊರಗುತ್ತಿಗೆಯ ಆಧಾರದ ಮೇಲೆ ಸೇವೆಯನ್ನು ಪಡೆದಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರಗಳಿಗೆ ಅಗತ್ಯವಾಗಿ ಬೇಕಾಗುವ ಸಿಬ್ಬಂದಿಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಹೊರಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿಗಳನ್ನು ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಆಇ 6 ಟಿಎಫ್‌ಪಿ 2018 ದಿನಾಂಕ:22.03.2019 ರನ್ನು ಪಾಲಿಸಬೇಕಾಗಿರುತ್ತದೆ. ಸದರಿ ಆದೇಶದಲ್ಲಿ

01. ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿದ್ದ ಗ್ರೂಪ್-'ಡಿ' ಬೆರಳಚ್ಚುಗಾರರು/ಡಿಇಓ, ವಾಹನ ಚಾಲಕರನ್ನು ಮಾತ್ರ ಹೊರಗುತ್ತಿಗೆಯ ಮೇಲೆ ಮುಂದುವರಿಸಬೇಕು ಅಥವಾ ಹೊರಗುತ್ತಿಗೆ ಪೂರ್ಣಗೊಂಡಿದ್ದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕಾರ ಹೊರಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬಹುದೆಂಬ ಆದೇಶವಿರುತ್ತದೆ. ಆದರೆ ವಿಶ್ವವಿದ್ಯಾಲಯದಲ್ಲಿ ಖಾಲಿ ಹುದ್ದೆಗಳಿಗೆದುರಾಗಿ ಹೆಚ್ಚಿನ ಹುದ್ದೆಗಳನ್ನು ಹೊರಗುತ್ತಿಗೆಯ ಮೇಲೆ ನೇಮಕಾತಿಗೊಳಿಸಿ ಸದರಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿರುತ್ತಾರೆ. ಹೆಚ್ಚಿನ ಹುದ್ದೆಗಳನ್ನು ಪಡೆದ ವಿವರ ಈ ಕೆಳಗಿನಂತಿದೆ.

2018-19

| Post | Sanction | Working | Vacant | Outsource | Diffrence | Monthly pay | Total Amount |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಲ್ಯಾಬ್ ಅಸಿಸ್ಟಂಟ್ | 02 | - | 02 | 08 | 06 | 16,200 | 97,200 |
| ಬೆರಳಚ್ಚುಗಾರರು | 05 | - | 05 | 44 | 39 | 15,982 | 6,23,298 |
| ಅನುಚರ | 10 | 07 | 03 | 18 | 15 | 13,635 | 2,04,525 |
| ವಾಹನ ಚಾಲಕರು | 04 | 03 | 01 | 02 | 01 | 14,755 | 14,755 |
| **ವಾರ್ಷಿಕ=9,39,778 X 12=1,12,77,336** | | | | | **ಒಟ್ಟು ಮಾಸಿಕ** | | **9,39,778** |

2019-20

| Sl. No. | Post | Sanction | Working | Vacant | Out Source | Diffrence | Monthly Pay | P.A |
|---|---|---|---|---|---|---|---|---|
| 01 | DEO | 05 | - | 05 | 50 | 45 | 16,080 | 86,83,200 |
| 02 | Driver | 04 | 03 | 01 | 02 | 01 | 14612 | 1,75,344 |
| | | | | | | | **Total** | **88,58,544** |

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಹುದ್ದೆಗಳನ್ನು ಭರ್ತಿ ಮಾಡಿ 2018-19ನೇ ಸಾಲಿನಲ್ಲಿ ರೂ. 1,12,77,336/-ಗಳನ್ನು ಮತ್ತು 2019-20ನೇ ಸಾಲಿನಲ್ಲಿ ರೂ. 88,58,544/- ಗಳನ್ನು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯನ್ನುಂಟು ಮಾಡಲಾಗಿದೆ

02. ಮಂಜೂರಾದ ಹುದ್ದೆಗಳಿಲ್ಲದೇ ಹೊರಗುತ್ತಿಗೆ ಮೇಲೆ ನೇಮಿಸಿಕೊಂಡ ಎಲ್ಲಾ ನೇಮಕಾತಿಗಳನ್ನು ಕೂಡಲೇ ರದ್ದುಪಡಿಸಬೇಕೆಂದು ಸರ್ಕಾರದ ಆದೇಶವಿದ್ದರೂ ವಿಶ್ವವಿದ್ಯಾಲಯದವರು ಮಂಜೂರಾದ ಹುದ್ದೆಗಳನ್ನು ನೇಮಿಸಿ ಸದರಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿರುತ್ತಾರೆ. ಮಂಜೂರಾಗದ ಹುದ್ದೆಗಳ ವಿವರ ಈ ಕೆಳಗಿನಂತಿದೆ.

2018-19.

| Sl.No. | Post | Outsource | Monthly Pay | Total |
|---|---|---|---|---|
| 1 | 2 | 3 | 4 | 5 |
| 01. | ಜೂನಿಯರ್ ಅಸಿಸ್ಟೆಂಟ್ | 14 | 15,982 | 2,23,748 |
| 02. | ವಾಟರ್ ಮ್ಯಾನ್ | 02 | 14,332 | 28,664 |
| | | **16** | ಒಟ್ಟು ಮಾಸಿಕ | **2,52,412** |
| ಒಟ್ಟು ವಾರ್ಷಿಕ 2,52,412 X 12 **=30,28,944** | | | | |

2019-20

| Sl.No. | Post | Outsource | Monthly | Per Annual |
|---|---|---|---|---|
| 1 | Waterman | 02 | 14,183 | 3,40,392 |
| | | **02** | **Total** | **3,40,392** |

ಗ್ರೂಪ್-ಡಿ, ಬೆರಳಚ್ಚುಗಾರರು/ಡಿ.ಇ.ಓ, ವಾಹನ ಚಾಲಕರ ಹುದ್ದೆಗಳನ್ನು ಹೊರತುಪಡಿಸಿ ಇತರೆ ಹುದ್ದೆಗಳಿಗೆ ಹೊರಗುತ್ತಿಗೆ ಮೇಲೆ ನೇಮಿಸಿಕೊಳ್ಳಲು ಆರ್ಥಿಕ ಇಲಾಖೆಯ ಪೂರ್ವಸಹಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದವರು ಈ ಮೇಲಿನ ತಃಖ್ತೆಯಲ್ಲಿ ವಿವರಿಸಿದಂತೆ 2018-19ನೇ ಸಾಲಿನಲ್ಲಿ ಎರಡು ಹುದ್ದೆಗಳಲ್ಲಿ 16 ಜನ ಮತ್ತು 2019-20ನೇ ಸಾಲಿನಲ್ಲಿ ಒಂದೇ ಹುದ್ದೆಯಲ್ಲಿ ಎರಡು ಸಿಬ್ಬಂದಿಗಳನ್ನು ನೇಮಕ ಮಾಡಿ ಸದರಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿರುತ್ತಾರೆ.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ**: **30 ದಿನಾಂಕ**: **26-10-2021 ಹಾಗೂ 34 ದಿನಾಂಕ**: **27-10-2021 ರಂದು ನೀಡಲಾಗಿದೆ**. ಸದರಿ ಹೆಚ್ಚುವರಿ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲಾಗಿದೆಯೆಂದು, ಸರ್ಕಾರದಿಂದ ಯಾವುದೇ ಅನುದಾನ ಪಡೆದಿರುವುದಿಲ್ಲ ಎಂದು ಮತ್ತು ಮಂಬರುವ ದಿನಗಳಲ್ಲಿ ಕಂಡಿಕೆಯಲ್ಲಿ ತಿಳಿಸಿರುವ ಅಂಶಗಳನ್ನು ಪಾಲಿಸಲಾಗುವುದೆಂದು ತಿಳಿಸರುತ್ತಾರೆ. ಆಂತರಿಕ ಸಂಪನ್ಮೂಲ ಸೃಜನೆಯಾಗಬೇಕಾದರೆ ಮೊದಲು ಸರ್ಕಾರದಿಂದ ಅನುದಾನ ಪಡೆಯಬೇಕಾಗುತ್ತದೆ. ಸರ್ಕಾರದ ಅನುದಾನದದಿಂದಲೇ ಆಂತರಿಕ ಸಂಪನ್ಮೂಲ ಸೃಜನೆಯಾಗಿರುತ್ತದೆ ಪ್ರಯುಕ್ತ ಸದರಿ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಸದರಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪಾವತಿಯಾದ ಮೊತ್ತ **ರೂ.2,35,05,216/- (1,12,77,336+88,58,544+30,28,944+3,40,392) ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

22. **ಮುಂಗಡ ಹಣದ ಹೊಂದಾಣಿಕೆಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳು.**

ಶ್ರಿ ಗುರುಬಸವರಾಜ (ದೈಹಿಕ ಶಿಕ್ಷಣ ಭೋದಕರು) ಪ್ರಥಮ ದರ್ಜೆ ಸರ್ಕಾರಿ ಮಹಾವಿದ್ಯಾಲಯ ಕೂಡ್ಲಿಗಿ ಇವರಿಗೆ 14ನೇ ಮಾರ್ಚ 2018 ರಿಂದ 25ನೇ ಮಾರ್ಚ-2018 ರವರೆಗೆ ಗುರುನಾನಕದೇವ ವಿಶ್ವವಿದ್ಯಾಲಯ, ಅಮೃತಸರದಲ್ಲಿ ಅಯೋಜಿಸಲಾದ 2018-19 ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪೆಂಕಾಕ್ ಶಿಲತ್ (ಮಹಿಳೆ ಮತ್ತು ಪುರುಷ) ಪಂದ್ಯಾವಳಿಯಲ್ಲಿ ಶ್ರೀ ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಕ್ರೀಡಾಪಟುಗಳು ಭಾಗವಹಿಸುತ್ತಿರುವುದರಿಂದ ಅವರ ಅಲ್ಲಿನ ವ್ಯವಸ್ಥೆಯ ಸಲುವಾಗಿ ರೂ. 1,38,910/-ಗಳ ಮುಂಗಡ ಹಣವಾಗಿ ದಿನಾಂಕ:12.03.2019 ರಂದು ವೋಚರ ಸಂಖ್ಯೆ: 1176 ಚೆಕ್ ಸಂಖ್ಯೆ:360822 ಪ್ರಕಾರ ನೀಡಲಾಗಿರುತ್ತದೆ. ಸದರಿ ಪಂದ್ಯಾವಳಿಯ ನಂತರ ಹೊಂದಾಣಿಕೆಗಾಗಿ ರೂ.1,52,759/- ಬಿಲ್ಲುಗಳನ್ನು ಸಲ್ಲಿಸಿ ಹೆಚ್ಚಾಗಿ ಖರ್ಚಾದ ಮೊತ್ತ ರೂ. 13,849/- ವೋಚರ ಸಂಖ್ಯೆ-408 ಚೆಕ್ ಸಂಖ್ಯೆ-361355 ದಿನಾಂಕ:16.07.2019 ರಂದು ಮಂಜೂರು ಮಾಡಿಕೊಂಡಿರುತ್ತಾರೆ.

ಹೊಂದಾಣಿಕೆಯಾದ ಮೊತ್ತ ರೂ.1,52,759=00 ಗಳ ಬಿಲ್ಲುಗಳನ್ನು ಪರಿಶೀಲಿಸಲಾಗಿ ಅದರಲ್ಲಿ ರೂ.1,47,799=00 ಗಳಗಷ್ಟೆ ಸಂಬಂಧಿಸಿದ ಬಿಲ್ಲುಗಳರುತ್ತವೆ. ಬಾಕಿ ರೂ. 4960=00 ಗಳಗೆ ಬಿಲ್ಲುಗಳನ್ನು ಸಲ್ಲಿಸುವವರೆಗೂ ರೂ. 4960=00 ಗಳನ್ನು ವಸೂಲಾತಿಯಲ್ಲಿಡಲಾಗಿದೆ.

ಪಂದ್ಯಾವಳಿಯ ಸಮಯದಲ್ಲಿ ದೆಹಲಿಯಲ್ಲಿ ಸ್ಥಳವೀಕ್ಷಣೆಯ ಸಲುವಾಗಿ ಶ್ರೀರಾಮ ಟೂರ್ಸ್ & ಟ್ರಾವೆಲ್ಸ್‌ನಲ್ಲಿ ವಾಹನವನ್ನು ಬಾಡಿಗೆಗೆ ಪಡೆದು ರೂ.5670/- ಗಳನ್ನು ಪಾವತಿಸಿರುತ್ತಾರೆ. ಸದರಿ ಸ್ಥಳ ವೀಕ್ಷಣೆಗೆ ಅಂದರೆ ಪಂದ್ಯಾವಳಿಯ ಸಮಯದಲ್ಲಿ ಹೀಗೆ ಸ್ಥಳವೀಕ್ಷಣೆಗೆ ತೆರಳಲು ವಿಶ್ವವಿದ್ಯಾಲಯದ ನಿಯಮಗಳಲ್ಲಿ ಅವಕಾಶವಿದೆಯೇ? ಸದರಿ ಟೂರ್ಸ್ & ಟ್ರಾವೆಲ್ಸ್‌ನ ಪಾವತಿ ರಸೀದಿಯಲ್ಲಿ ಪ್ರಯಾಣದ ದಿನಾಂಕ ಹಾಗೂ ವಾಹನದ ರಿಜಿಸ್ಟ್ರೇಷನ ನಂಬರ ಯಾವುದನ್ನು ನಮೂದಿಸಿರುವುದಿಲ್ಲ. ಆದ್ದರಿಂದ ಪಾವತಿಯಾದ ಮೊತ್ತ ರೂ. 5,670=00 ಗಳನ್ನು ಸೂಕ್ತ ವಿವರಣೆ ನೀಡುವವರೆಗೂ ವಸೂಲಾತಿಯಲ್ಲಿಡಲಾಗಿದೆ.

ಮುಂದುವರೆದು ಜಿ. ಗುರುಬಸವರಾಜ ದೈ.ಶಿ.ನಿ. ಹಾಗೂ ಮಂಜುನಾಥ ಎ. ದೈ.ಶಿ.ನಿ. ಇವರ ಪ್ರವಾಸ ಭತ್ಯೆಯ ಬಿಲ್ಲಿನಲ್ಲಿ ಪ್ರಮಾಣ ದರವನ್ನು Whitenar ಮುಖಾಂತರ ತಿದ್ದಿ ನಿಖರ ದರವನ್ನು ಮರೆಮಾಚಲಾಗಿರುತ್ತದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 31 ದಿನಾಂಕ: 27-10-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಯಲ್ಲಿ ನಮೂದಿಸಿರುವ ಅಂಶಗಳಿಗೆ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸುತ್ತಾ ಸದರಿ ಪ್ರವಾಸ ಭತ್ಯೆಗಳಿಗೆ ಪಾವತಿಯಾದ **ಮೊತ್ತ 3729 X 4 =14,916/-ಗಳನ್ನು ಆಕ್ಷೇಪಣೆಯಲ್ಲಿ ಮತ್ತು ರೂ.10,630/-(4,960+ 5,670) ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

**23. ದರಪಟ್ಟಿ ಕರೆಯದೇ ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಲ್ಲಿ 6ನೇ ಅಂತರ ಮಹಾವಿದ್ಯಾಲಯ ಕ್ರೀಡಾಕೂಟ 1, 2 ಮತ್ತು 3ನೇ ಮಾರ್ಚ್‌ನಲ್ಲಿ ಅಯೋಜಿಸುವ ಸಂಬಂಧ ಕೋ-ಆರ್ಡಿನೇಟರ್ ಡಿಪಾರ್ಟಮೆಂಟ್ ಆಫ್ ಸ್ಟೋರ್ಟ್ಸ ಅವರಿಗೆ ದಿನಾಂಕ:20.02.2017 ರಂದು 3 ಲಕ್ಷ ದಿನಾಂಕ 03.03.2017 ರಂದು ರೂ.2 ಲಕ್ಷ ಹೀಗೆ ಒಟ್ಟು 5 ಲಕ್ಷಗಳ ಮುಂಗಡವನ್ನು ನೀಡಿದ್ದು, ಸದರಿ ಮುಂಗಡ ಮರುಹೊಂದಾಣಿಕೆ ಮಾಡಲು ದಿನಾಂಕ 18.04.2017 ರಂದು ರೂ. 4,01,000/-ಗಳಗೆ ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಉಳಿದ ಮೊತ್ತ ರೂ.99,000/-ಗಳಗೆ ಏಪ್ರೀಲ್ 2017 ರಲ್ಲಿ ಮರು ಹೊಂದಾಣಿಕೆ ಮಾಡಬಹುದಿತ್ತು. ಆದರೆ 2 ವರ್ಷ ವಿಳಂಬದಿಂದ ಈಗ 2019-20 ನೇ ಸಾಲಿನಲ್ಲಿ ವೋಚರ್ ಸಂಖ್ಯೆ-02 ದಿನಾಂಕ:19.04.2019 ರನ್ವಯ ಮರುಹೊಂದಾಣಿಕೆ ಮಾಡಿರುತ್ತಾರೆ.

ಸದರಿ ಮುಂಗಡ ಮರುಹೊಂದಾಣಿಕೆ ಬಿಲ್ಲುಗಳನ್ನು ಪರಿಶೀಲಿಸಲಾಗಿ ಸಾಯಿಕೃಷ್ಣ ಜಮ್ ಜಮ್ ಆಯಿಲ್ ಅವರಿಗೆ 22 ಟ್ರಿಪ್ ಗ್ರಾವೆಲ್ ಸರಬರಾಜು ಮಾಡಲು ರೂ. 99,000/- ಪಾವತಿಸಿರುವುದಾಗಿ ವೋಚರ್ ಲಗತ್ತಿಸಿರುತ್ತಾರೆ. ಆದರೆ ಸದರಿ ವೋಚರನೊಂದಿಗೆ ಶ್ರೀಕೃಷ್ಣ ಜಮ್ ಜಮ್ ಆಯಿಲ್ ಲಿಮಿಟೆಡ್ ಅವರು ನೀಡಿದ ಬಿಲ್ ಇರುವುದಿಲ್ಲ. ಸೂಕ್ತ ಬಿಲ್ ಇಲ್ಲದೆ ಪಾವತಿ ಮಾಡಿರುವುದು ತಪ್ಪಾಗಿರುತ್ತದೆ. ಅಲ್ಲದೆ ಸದರಿ ಖರೀದಿಯು ರೂ. 5,000/- ಕ್ಕಿಂತ ಮೇಲ್ಪಟ್ಟು ಇರುವುದರಿಂದ ದರಪಟ್ಟಿ ಕರೆದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 32 ದಿನಾಂಕ:27-10-2021 ರಂದು ನೀಡಲಾಗಿದೆ**. ಕ್ರೀಡಾಕೂಟ ತುರ್ತಾಗಿ ನಡೆಸಿರುವುದರಿಂದ ಈ ರೀತಿಯ ವ್ಯತ್ಯಾಸಗಳು ಬಂದಿರುತ್ತವೆಂದು ತಿಳಿಸಿರುತ್ತಾರೆ ಮತ್ತು ಕಂಡಿಕೆಯಲ್ಲಿ ನಮೂದಿಸಿರುವ ಇತರೆ ಅಂಶಗಳಿಗೆ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸುತ್ತಾ ಪಾವತಿಯು ನಿಯಮ ಬಾಹಿರವಾಗಿರುವುದರಿಂದ ಪಾವತಿ **ಮೊತ್ತ ರೂ.99,000/-ಗಳನ್ನು ಸಂಬಂಧಿಸಿದವರಿಂದ ವಸೂಲಾತಿಯಲ್ಲಿಡಲಾಗಿದೆ**.

**24. ಕಾಲೇಜುವಾರು ಪ್ರವೇಶ ಶುಲ್ಕದ ಡಿ.ಸಿ.ಬಿ. ರೆಜಿಸ್ಟರ್ ನಿರ್ವಹಿಸದೇ ಇರುವ ಕುರಿತು**.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಮಹಾವಿದ್ಯಾಲಯಗಳು ತಮ್ಮ ಕಾಲೇಜುಗಳಲ್ಲಿ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳಿಂದ ಪ್ರವೇಶ ಶುಲ್ಕ ಪಡೆದು ನಿಗದಿತ ದಿನಾಂಕದೊಳಗೆ ಸದರಿ ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಜಮಾ ಮಾಡಬೇಕಾಗುತ್ತದೆ. ಸದರಿ ಜಮೆಯಾದ ಶುಲ್ಕಗಳ ವಿವರಗಳನ್ನು ವಿಶ್ವ ವಿದ್ಯಾಲಯದ ವಿದ್ಯಾ ಮಂಡಳ ವಿಭಾಗದವರು ಡಿ.ಸಿ.ಬಿ. ರೆಜಿಸ್ಟ್ರರ್‌ನಲ್ಲಿ ನಿರ್ವಹಿಸಬೇಕಾಗುತ್ತದೆ. ಆದರೆ ವಿ.ಎಸ್.ಕೆ.ಯು.ಬಿ. ಯ ವಿದ್ಯಾಮಂಡಳ ವಿಭಾಗದಲ್ಲಿ ಸದರಿ Demand, collection ಮತ್ತು Balance (DCB) ಗಳ ರೆಜಿಸ್ಟರ್ ನಿರ್ವಹಿಸದೆ ಇರುವುದರಿಂದ ಕಾಲೇಜಿನವರು ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದರು, ಎಷ್ಟು ಶುಲ್ಕ ಪಡೆದರು ಮತ್ತು ಎಷ್ಟು ಶುಲ್ಕ ವಿಶ್ವ ವಿದ್ಯಾಲಯದವರು ಜಮೆ ಮಾಡಿದರು, ಎಷ್ಟು ಶುಲ್ಕ ಜಮೆ ಮಾಡಬೇಕಾಗಿತ್ತು, ನಿಗದಿತ ದಿನಾಂಕದೊಳಗೆ ಎಷ್ಟು ವಿದ್ಯಾರ್ಥಿಗಳ ಶುಲ್ಕ ಜಮೆಯಾಯಿತು, ದಂಡಸಹಿತವಾಗಿ ಎಷ್ಟು ವಿದ್ಯಾರ್ಥಿಗಳ ಶುಲ್ಕ ಜಮೆಯಾಯಿತು, ಎಷ್ಟು ಶುಲ್ಕ ಇನ್ನು ಬರಬೇಕಾಗಿದೆ. ಎಂಬ ಮಾಹಿತಿ ಇರುವುದಿಲ್ಲ. ಈ ರೀತಿ ವಿಶ್ವ ವಿದ್ಯಾಲಯಕ್ಕೆ ಬರಬೇಕಾದ ಆದಾಯದ ನಿಖರ ದಾಖಲೆ/ ವಿವರಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ವಿಶ್ವ ವಿದ್ಯಾಲಯದವರಿಗೆ ಬರಬೇಕಾದ ಆದಾಯ ತಪ್ಪಿಸಿದಂತಾಗಿದೆ. ಈ ಕುರಿತು ಸ್ಪಷ್ಟ ವಿವರಣೆ ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 33 ದಿನಾಂಕ: 27-10-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

**೨೮. ವಿದ್ಯಾರ್ಥಿ ವಿಕಾಸ ನಿಧಿ ಟ್ರಸ್ಟ್‌ನಿಂದ ಮುದ್ರಣವಾಗುವ YUGDRSHATA ನಿಯತಕಾಲಿಕೆಗೆ ವಿಶ್ವವಿದ್ಯಾಲಯದ ವತಿಯಿಂದ ರೂ. 1.00 ಲಕ್ಷ ದೇಣಿಕೆ ನೀಡಿರುವ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ವತಿಯಿಂದ ವಿದ್ಯಾರ್ಥಿಗಳ ವಿಕಾಸ ನಿಧಿ ಟ್ರಸ್ಟ್‌ನಿಂದ ಮುದ್ರಣವಾಗುವ YUGDRSHATA ನಿಯತಕಾಲಿಕೆ 2018 ರ "ಮಲ್ಟಿಕಲರ್‌ಫುಲ್ ಪೇಜ್ ಆನ್ ಆರ್ಟ್ ಪೇಪರ್" ಜಾಹೀರಾತಿಗಾಗಿ ತಗಲುವ ಮುದ್ರಣ ವೆಚ್ಚವಾಗಿ ರೂ. 1.00 ಲಕ್ಷಗಳನ್ನು ವೋಚರ ಸಂಖ್ಯೆ-827 ಚೆಕ್ ನಂ-36047 ದಿನಾಂಕ:05.12.2018 ರಂದು ಪಾವತಿ (ದೇಣಿಗೆ) ಮಾಡಿರುತ್ತಾರೆ.

ಸದರಿ ವಿದ್ಯಾರ್ಥಿ ವಿಕಾಸ ನಿಧಿ ಟ್ರಸ್ಟ್ ಗುಜರಾತಿನ ಅಹಮದಬಾದ್‌ನಲ್ಲಿರುವ ಸಂಘ ಸಂಸ್ಥೆಯಾಗಿದ್ದೂ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಉನ್ನತ ಶಿಕ್ಷಣ ನೀಡಲು ರೂಪುಗೊಂಡ ಸಂಸ್ಥೆಯಾಗಿದ್ದೂ ಇದಕ್ಕಾಗಿ ಉಚಿತವಾಗಿ ಗ್ರಂಥಾಲಯ ವ್ಯವಸ್ಥೆ ವಿಚಾರ ಸಂಕೀರಣ ಹಾಗೂ ಶೈಕ್ಷಣಿಕ ಸಮ್ಮೇಳನದಂತಹ ಯೋಜನೆಗಳ ಮುಖಾಂತರ ಕಾರ್ಯನಿರ್ವಹಿಸುತ್ತಿದೆ.

ಇದರ ಹಲವಾರು ಯೋಜನೆಗಳ ಪೈಕಿ YUGDRSHATA ನಿಯತಕಾಲಿಕೆಯು ಸೇರಿದೆ. ಇದೊಂದು ಶೈಕ್ಷಣಿಕ ಯೋಜನೆಗೆ ಸಂಬಂಧಿಸಿದ ನಿಯತಕಾಲಿಕೆಯಾಗಿದೆಯೆಂದು ಸಂಸ್ಥೆಯವರು ನೀಡಿರುವ ಮನವಿ ಪತ್ರದಿಂದ ತಿಳಿದುಬಂದಿದೆ.

ಈ ಸಂಬಂಧ ವಿ.ಎಸ್.ಕೆ. ವಿಶ್ವವಿದ್ಯಾಲಯದವರು ಈ ನಿಯತಕಾಲಿಕೆಯ ಜಾಹೀರಾತಿಗಾಗಿ ಒಂದು ಲಕ್ಷ ರೂಪಾಯಿಗಳ ದೇಣಿಗೆ ನೀಡಿರುತ್ತಾರೆ. ಸದರಿ ವಿಶ್ವವಿದ್ಯಾಲಯವು ಉನ್ನತ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ಈ ತರಹ ದೇಣಿಗೆ ನೀಡಲು ಅವಕಾಶವಿರುವುದರ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ಇರುವುದಿಲ್ಲ. ಅವಕಾಶವಿದ್ದರೆ ಸೂಕ್ತ ದಾಖಲೆ ಒದಗಿಸುವುದು.

ಈ ತರಹ ದೇಣಿಗೆಗಳಿಗೆ ವಿಶ್ವವಿದ್ಯಾಲಯದಲ್ಲಿ ಅನುಮತಿಸಲಾಗಿದೆಯೆಂಬುದನ್ನು ಖಚಿತಪಡಿಸಿರುವುದಿಲ್ಲ. ಸದರಿ ಪಾವತಿ ಮಾಡಲು ವಿಶ್ವವಿದ್ಯಾಲಯವು ಯಾವುದೇ ಸಂಘ ಸಂಸ್ಥೆಯಾಗಿರದೇ ಒಂದು ಉನ್ನತ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುವ ಶೈಕ್ಷಣಿಕ ಸಂಸ್ಥೆಯಾಗಿರುತ್ತದೆ. ಟ್ರಸ್ಟ್‌ನವರು ಜಾಹೀರಾತು ಮನವಿ ಪತ್ರ ನೀಡಿದ ದಿನಾಂಕ ಹಾಗೂ ಪಾವತಿಯಾದ ದಿನಾಂಕ ಒಂದೇ ಆಗಿದ್ದು, ಅಷ್ಟು ತ್ವರಿತವಾಗಿ ದೇಣಿಗೆ ನೀಡಿರುವ ಅವಶ್ಯಕತೆಯ ಬಗ್ಗೆ ವಿವರ ನೀಡುವುದು.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೀಡಿದ್ದಾರೆಂದು ಬಾವಿಸಿದ್ದರೂ ಸಹ ಸದರಿ ಮೊತ್ತದಲ್ಲಿ ಸ್ಥಳೀಯವಾಗಿ ಬಹಳಷ್ಟು ಕೆಲಸಗಳನ್ನು ಮಾಡಬಹುದಿತ್ತು.

ಇದೊಂದು ಅವಶ್ಯಕತೆಯಿಲ್ಲದ ದುಂದುವೆಚ್ಚದ ಪಾವತಿಯೆಂದು ಕಂಡುಬರುತ್ತದೆ. ಸದರಿ ವಿಶ್ವವಿದ್ಯಾಲಯದಲ್ಲಿ ಕೆಲವು ವರ್ಷಗಳಿಂದ ಕೊರತೆ ಬಜೆಟ್ ಮಂಡಿಸಲಾಗುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪ್ರಸ್ತಾಪಿಸಿದ್ದರೂ ಸಹ ಅನಗತ್ಯ ವೆಚ್ಚ (ದೇಣಿಗೆ) ಗಳಿಂದ ಖರ್ಚನ್ನು ಹೆಚ್ಚಿಸಿಕೊಳ್ಳಲಾಗುತ್ತಿದೆ.

ಸದರಿ ದೇಣಿಗೆ ನೀಡಲು ವಿಶ್ವ ವಿದ್ಯಾಲಯ ಸ್ಟ್ಯಾಟ್ಯೂಟ್ಸಗಳಲ್ಲಿ ಅವಕಾಶವಿದೆಯೇ? ಸಿಂಡಿಕೇಟ್ ಅನುಮೋದನೆ ಪಡೆದಿದೆಯೇ ವಿವರಿಸುವುದು.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 38 ದಿನಾಂಕ: 11-11-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮುಂದಿನ ದಿನಗಳಲ್ಲಿ ಈ ತರಹದ ತಪ್ಪುಗಳ ಜರುಗದಂತೆ ಎಚ್ಚರ ವಹಿಸಲಾಗುವುದೆಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಸದರಿ ಪಾವತಿಯು ವಿಶ್ವವಿದ್ಯಾಲಯಕ್ಕೆ ಮಾಡಿದ ಅನಾವಶ್ಯಕ/ಅನಗತ್ಯ/ನಿಷ್ಫಲ/ನಿರರ್ಥಕ ವೆಚ್ಚವಾಗಿದ್ದೂ ಪಾವತಿಗೆ ಕಾರಣೀಕರ್ತರಾದವರಿಂದ ಸದರಿ ಮೊತ್ತ **ರೂ.1,00,000/-ಗಳನ್ನು ವಸೂಲಾತಿಯಲ್ಲಿಡಲಾಗಿದೆ**.

**26. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ರವರಿಗೆ ದೇಣಿಗೆ ರೂಪದಲ್ಲಿ ರೂ.10,000/- ಗಳನ್ನು ನೀಡಿರುವ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2019-20ನೇ ಸಾಲಿನ ವೋಚರಗಳನ್ನು ಪರಿಶೀಲಿಸಲಾಗಿ ವೋಚರ್ ಸಂಖ್ಯೆ 1082, ಚೆಕ್ ಸಂಖ್ಯೆ 360727 ರನ್ವಯ ಮತ್ತು ದಿನಾಂಕ 14.02.2019 ರಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ABVP) ನ ವಾರ್ಷಿಕ 'ಸ್ಮೃತಿ ಸಂಚಿಕೆ' ಪ್ರಕಟಣೆಯ ಸಾಮಾನ್ಯ ಪುಟ ಮುದ್ರಣಕ್ಕಾಗಿ ವಿಶ್ವವಿದ್ಯಾಲಯದ ವತಿಯಿಂದ ರೂ. 10,000/-ಗಳನ್ನು ದೇಣಿಗೆ ರೂಪದಲ್ಲಿ ಲೆಕ್ಕಶೀರ್ಷಿಕೆ 1AD9.5 ರಡಿಯಲ್ಲಿ ಬಿಡುಗಡೆ ಮಾಡಲು ಕುಲಸಚಿವರು ಆದೇಶಿಸಿರುತ್ತಾರೆ.

The Karnataka state universities Act, 2000 ರ ನಿಯಮ 4, Powers of the universities ಯಲ್ಲಾಗಲಿ, ನಿಯಮ 15 Powers of the vice Chancellor ರಲ್ಲಾಗಲಿ, ನಿಯಮ 29, Powers of the Syndicate ಯಲ್ಲಾಗಲಿ, ನಿಯಮ 31, Powers of the Academic Counicl ಯಲ್ಲಾಗಲಿ ಮತ್ತು ನಿಯಮ 40, Statutes ಯಲ್ಲಾಗಲಿ ಯಾವುದೋ ಒಂದು ಖಾಸಗಿ ಸಂಸ್ಥೆಗೆ ದೇಣಿಗೆ ರೂಪದಲ್ಲಿ ಹಣವನ್ನು ನೀಡುವ ಕುರಿತು ಯಾವುದೇ ಅವಕಾಶವಿರುವುದಿಲ್ಲ ಮತ್ತು ಯಾವುದೇ ಸರ್ಕಾರದ ಆದೇಶಗಳು ಕೂಡ ಇರುವುದಿಲ್ಲ.

ಈ ರೀತಿ ವಿಶ್ವ ವಿದ್ಯಾಲಯದ ಕಾಯ್ದೆಯಲ್ಲಿ ಮತ್ತು ಸರ್ಕಾರದ ಆದೇಶಗಳಲ್ಲಿ ದೇಣಿಗೆ ರೂಪದ ಹಣವನ್ನು ಮಂಜೂರು ಮಾಡಲು ಅವಕಾಶವಿರದಿದ್ದರೂ ಕುಲಸಚಿವರು ತಮ್ಮ ವಿವೇಚನಾಧಿಕಾರಿಯನ್ನು ಉಪಯೋಗಿಸಿ ರೂ.10,000/-ಗಳನ್ನು ನೀಡಿರುವುದು ವಿಶ್ವವಿದ್ಯಾಲಯಕ್ಕೆ ಮಾಡಿರುವ ನಷ್ಟವಾಗಿರುತ್ತದೆ ಮತ್ತು ಕುಲಸಚಿವರು ತಮ್ಮ ಅಧಿಕಾರವನ್ನು ದುರುಪಯೋಗಗೊಳಿಸಿರುತ್ತಾರೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 39 ದಿನಾಂಕ: 11-11-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮುಂದಿನ ದಿನಗಳಲ್ಲಿ ಈ ತರಹದ ತಪ್ಪುಗಳ ಜರುಗದಂತೆ ಎಚ್ಚರ ವಹಿಸಲಾಗುವುದೆಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ದೇಣಿಗೆ ರೂಪದಲ್ಲಿ ನೀಡಿದ ಮೊತ್ತ **ರೂ. 10,000/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ತಿಳಿಸಿದೆ.**

**27. ಪ್ರಶ್ನೆ ಪತ್ರಿಕೆ ಮುದ್ರಣ ಬಿಲ್ಲಿನಲ್ಲಿ ಗಮನಿಸಿದ ನ್ಯೂನ್ಯತೆಗಳು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳಲ್ಲಿ ಬೇಕಾಗುವ ಪ್ರಶ್ನೆ ಪತ್ರಿಕೆ ಮುದ್ರಿಸಲು ಎರಡು ಏಜೆನ್ಸಿಗಳಿಗೆ ಈ ಕೆಳಗೆ ವಿವರಿಸಿರುವಂತೆ ಪಾವತಿಸಿರುವುದು ಗಮನಿಸಿದೆ.

| ಕ್ರ ಸಂ. | ಪರೀಕ್ಷೆ | | ಏಜೆನ್ಸಿಯ ಹೆಸರು | ಬಿಲ್ ಸಂಖ್ಯೆ & ದಿನಾಂಕ | ಪಾವತಿಯ ಆದೇಶ ಸಂಖ್ಯೆ & ದಿನಾಂಕ | ಮೊತ್ತ |
|---|---|---|---|---|---|---|
| 1. | Jan-2019 (2018-19) | UG<br>PG<br>BEd | V.S.Hitech (Hyderabad)<br>V.S.Hitech<br>V.S.Hitech | 36/17-12-18<br>37/17-12-18<br>42/19-1-19 | 11.03.2019 | 16,38,978<br>3,57,441<br>61,202 |
| | | | | | ಒಟ್ಟು | **20,57,621** |
| 2. | May-June-19 (2019-20) | UG<br>UG<br>B.Ed | V.S.Hitech<br>V.S.Hitech<br>Mehra | 10/28-5-19<br>9/28-5-19<br>32/23-7-19 | 940/11-7-19<br>833/1-7-19<br>385/12-9-19 | 2,71,031<br>18,49,186<br>1,19,205 |
| | (22572 transportation charges) | | | | ಒಟ್ಟು | **22,39,422** |
| 3. | Nov-Dec-19 (2019-20) | UG /PG | Mehra Chennai | 2049/12.12.19 | 2798/21.1.20 | 22,82,492 |
| | | Transportation Chennai | | 909/18.11.19 | 2798/21.1.20 | 30,000 |
| | | "------." | | 922/26.11.19 | 2798/21.1.20 | 24,000 |
| | | "------." | | 380/1.12.19 | 2798/21.1.20 | 25,150 |
| | | | | | ಒಟ್ಟು | **23,61,642** |

**ABSTRACT**

| | | |
|---|---|---|
| 2018-19 | 20,57,621 | V.S.Hitech |
| 2019-20 | 22,39,422 | V.S.Hitech |
| 2019-20 | 23,61,642 | Mehra |
| | **66,58,685** | |

ಸದರಿ ಪಾವತಿಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಲಾಗಿ, ವಿ.ಎಸ್. ಹೈಟೆಕ್ ರವರಿಂದ ಪರೀಕ್ಷೆ ಪ್ರಶ್ನೆ ಪತ್ರಿಕೆ ಮುದ್ರಿಸಿ ಸರಬರಾಜು ಮಾಡುವ ಸಂಬಂಧ ದಿನಾಂಕ 10.04.2018 ರಂದು ಕರಾರು ಒಪ್ಪಂದ ಮಾಡಿಕೊಂಡಿದ್ದು, ಸದರಿ ಒಪ್ಪಂದವು ದಿನಾಂಕ: 09.04.2019 ರಂದು ಕೊನೆಗೊಳ್ಳುತ್ತದೆ. ಸದರಿ ದಿನಾಂಕಕ್ಕಿಂತ ಸಾಕಷ್ಟು ಮುಂಚಿತವಾಗಿಯೇ ಏಜೆನ್ಸಿ ಮತ್ತು ದರಗಳು ನಿರ್ಧರಿಸುವುದಕ್ಕಾಗಿ ಸ್ಪರ್ಧಾತ್ಮಕ ಬಿಡ್ಡಿಂಗ್ ಕೈಗೊಳ್ಳಬೇಕು. ಆದರೆ 2018-19ನೇ ಸಾಲಿನಲ್ಲಿ ಹಾಗೆ ಮಾಡದೇ ಕರಾರು ಒಪ್ಪಂದದ ಅವಧಿ ಮುಗಿಯುವುದಕ್ಕಿಂತ ಕೇವಲ 15 ದಿನಗಳ ಮುಂಚೆ ಕಡತ ಮಂಡಿಸಿ ಮೇ/ಜೂನ್-2019 ರ ಮಾಹೆಯಲ್ಲಿ

ಜರುಗಲಿರುವ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಫರ್ಮನವರಿಗೆ ಸದರಿ ಪರೀಕ್ಷೆಗಳಿಗೆ ಮಾತ್ರ ಅನ್ವಯಿಸುವಂತೆ ಮುದ್ರಣ ಕಾರ್ಯ ಕೈಗೊಳ್ಳಲು ತುರ್ತಾಗಿ ಆದೇಶ ನೀಡಬೇಕಾಗಿದ್ದು, ಈ ಸಂಬಂಧ ಸದರಿ ಫರ್ಮನವರಿಗೆ ಸೂಚಿಸಲಾಗಿ ಸದರಿಯವರು ಪ್ರಸ್ತುತ ದರಗಳಿಗಿಂತ ಶೇ 15% ರಷ್ಟು ಹೆಚ್ಚುವರಿ ದರ ನೀಡುವಂತೆ ಮನವಿ ಸಲ್ಲಿಸಿರುತ್ತಾರೆಂದು ತಿಳಿಸುತ್ತಾ, ಸದರಿ ಫರ್ಮನವರಿಂದ ಶೇ 15% ರ ಹೆಚ್ಚಳದೊಂದಿಗೆ ದಿನಾಂಕ:10.04.2019 ರಂದು ಹೊಸ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. ಇಲ್ಲಿ ಕರಾರು ಒಪ್ಪಂದದ ಕೊನೆಯ ದಿನಾಂಕಕ್ಕಿಂತ ಸಾಕಷ್ಟು ಮೊದಲೇ ಸ್ಪರ್ಧಾತ್ಮಕ ಬಿಡ್ಡಿಂಗ್ ಕೈಗೊಂಡು ಏಜೆನ್ಸಿ/ದರ ನಿಗದಿಗೊಳಿಸಿದ್ದರೆ, ಈ ರೀತಿಯಾಗಿ ಶೇ 15% ರಷ್ಟು ಹೆಚ್ಚುವರಿ ದರ ನೀಡುವ ಪ್ರಮೇಯ ಉದ್ಭವಿಸುತ್ತಿರಲಿಲ್ಲ. ಅಲ್ಲದೇ ಮೇ-ಜೂನ್/2019 ರಲ್ಲೇ ಪರೀಕ್ಷೆ ಜರುಗುತ್ತಲಿರುವುದರಿಂದ ಹಾಗೂ ಲೋಕಸಭಾ ಚುನಾವಣೆ ನೀತಿ ಸಂಹಿತೆ ಇದ್ದುದನ್ನು ಮನಗಂಡು ಸದರಿ ಫರ್ಮನವರು ಹಿಂದಿನ ಹಳೆಯ ದರಗಳನ್ನು ಮುಂದುವರೆಸುವ ಬದಲಾಗಿ ಶೇ 15% ದರ ಹೆಚ್ಚಿಸಿ ಸಮಯ ಸಾಧಕತೆ ತೋರಿಸಿದ್ದಲ್ಲದೇ ವಿಶ್ವವಿದ್ಯಾಲಯಕ್ಕೆ **ಅನುಬಂಧ-07 ರಲ್ಲಿ** ವಿವರಿಸಿರುವಂತೆ ರೂ.1,28,481/- ಗಳ ಆರ್ಥಿಕ ನಷ್ಟಉಂಟು ಮಾಡಿರುತ್ತಾರೆ. ಸದರಿ ನಷ್ಟವನ್ನು ಸಂಬಂಧಪಟ್ಟವರಿಂದ ವಸೂಲಿಸಬಹುದಾಗಿದೆ.

ವಿ.ಎಸ್. ಹೈಟೆಕ್‌ರವರ ಕರಾರು ಒಪ್ಪಂದದ ಅವಧಿ ಇನ್ನು ಬಾಕಿ ಇರುವಾಗಲೇ (ಕರಾರು ಒಪ್ಪಂದದ ಅವಧಿ 10.04.2019 ರಿಂದ 09.04.2020) ದಿನಾಂಕ: 05.07.2019 ರಂದು ಮೆಹ್ರಾ ಕಂಪ್ಯೂಟರ್ ಸಿಸ್ಟಮ್ ಲಿಮಿಟೆಡ್ ರವರಿಂದ ಹೊಸ ಕರಾರು ಒಪ್ಪಂದ ಮಾಡಿಕೊಂಡು, ಮತ್ತೆ 15% ರಷ್ಟು ಹೆಚ್ಚುವರಿ ದರ ನೀಡಿದ್ದು, ಇಲ್ಲಿಯೂ ಸಹಾ ಹಿಂದಿನ ಹಳೆಯ ದರ ಮುಂದುವರೆಸುವ ಬದಲಿಗೆ 15% ಹೆಚ್ಚಿನ ದರ ನೀಡಿ **ಅನುಬಂಧ-07ರಲ್ಲಿ** ವಿವರಿಸಿರುವಂತೆ ರೂ. 1,30,031/-ಗಳ ನಷ್ಟ ಉಂಟು ಮಾಡಿದ್ದು, ಸಂಬಂಧಿಸಿದವರಿಂದ ಆಗಿರುವ ನಷ್ಟವನ್ನು ವಸೂಲಿಸಬಹುದಾಗಿದೆ.

ಅಲ್ಲದೇ ವಿ.ಎಸ್. ಹೈಟೆಕ್‌ರವರ ಕರಾರು ಒಪ್ಪಂದ ಮುಕ್ತಾಯಗೊಳ್ಳುವ ಮುಂಚೆಯೇ ಅದನ್ನು ಮುಕ್ತಾಯಗೊಳಿಸದೇ, ಹೊಸ ಏಜೆನ್ಸಿಯೊಂದಿಗೆ ಹೊಸ ಕರಾರು ಒಪ್ಪಂದ ಮಾಡಿಕೊಂಡಿದ್ದು ತಪ್ಪಾಗಿರುತ್ತದೆ.

2018-19ನೇ ಸಾಲಿನಲ್ಲಿ ವಿ.ಎಸ್. ಹೈಟೆಕ್ ಏಜೆನ್ಸಿಯನ್ನು ಮತ್ತು ದರಗಳನ್ನು ಅಂತಿಮಗೊಳಿಸಲು ಮಾಡಿರುವ ಸ್ಪರ್ಧಾತ್ಮಕ ಬಿಡ್ಡಿಂಗ್‌ನ ಯಾವುದೇ ದಾಖಲೆಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ಅದೇ ರೀತಿ 2019-20 ನೇ ಸಾಲಿನಲ್ಲಿ ಮೆಹ್ರಾ ಕಂಪ್ಯೂಟರ ಏಜೆನ್ಸಿಯನ್ನು ಅಂತಿಮಗೊಳಿಸಲು ಕರೆದ ದರಪಟ್ಟಿಯ ಯಾವುದೇ ವಿವರಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ಆದ ಕಾರಣ ಸದರಿ ಏಜೆನ್ಸಿಗಳನ್ನು ನೇರವಾಗಿ ಆಯ್ಕೆ ಮಾಡಿ ಸರಬರಾಜು ಆದೇಶ ನೀಡಲಾಗಿದೆ ಎಂದು ಭಾವಿಸಬಹುದಾಗಿದೆ.

ಸದರಿ ಏಜೆನ್ಸಿಗಳು Security Printer ಗಳಾಗಿರುವ ಬಗ್ಗೆ ಸೂಕ್ತ ದಾಖಲೆ/ಪ್ರಮಾಣ ಪತ್ರಗಳು ಲಭ್ಯವಿರುವುದಿಲ್ಲ. ಸದರಿ ಏಜೆನ್ಸಿಗಳಿಂದ ಪ್ರತ್ಯೇಕವಾಗಿ Non Disclosure Agreement (NDA) ಮಾಡದೇ ಕೇವಲ ಸಾಮಾನ್ಯ ಕರಾರು ಒಪ್ಪಂದ ಮಾಡಿಕೊಂಡಿರುವುದು ತಪ್ಪಾಗಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 41 ದಿನಾಂಕ: 16-11-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಯಲ್ಲಿ ನಮೂದಿಸಿರುವ ಅಂಶಗಳಿಗೆ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ 2018-19 ಮತ್ತು 2019-20 ರಲ್ಲಿ ಪ್ರಶ್ನೆ ಪತ್ರಿಕೆ ಮುದ್ರಣಕ್ಕಾಗಿ ಆಗಿರುವ ಒಟ್ಟು ವೆಚ್ಚ **ರೂ. 66,58,685/-ಗಳನ್ನು ಆಕ್ಷೇಪಣೆಯಲ್ಲಿ** ಮತ್ತು ಶೇ.15% ರಷ್ಟು ಹೆಚ್ಚಿನ ದರದ ಮೊತ್ತ **ರೂ.2,58,512/- ಗಳನ್ನು ವಸೂಲಾತಿಯಲ್ಲಿಡಲಾಗಿದೆ**.

**28. ಡಾ॥ ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕಾಗಿ ಬಿಡುಗಡೆಯಾದ ಅನುದಾನವನ್ನು ನಿರ್ವಹಿಸುವಲ್ಲಿ ಕಂಡುಬಂದಿರುವ ನ್ಯೂನತೆಗಳ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2018-19 ಮತ್ತು 2019-20ನೇ ಸಾಲಿನ ಡಾ॥ ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಕಡತವನ್ನು ಪರಿಶೀಲಿಸಲಾಗಿ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ 129 ದಿ.17.09.2016 ರಂದು ಸದರಿ ವಿಶ್ವವಿದ್ಯಾಲಯದಲ್ಲಿ ಡಾ॥ ಬಾಬು ಜಗಜೀವನ್‌ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ರೂ. 2.00 ಕೋಟಿಗಳನ್ನು ಒಂದು ಬಾರಿಗೆ ಕಾರ್ಪಸ್ ನಿಧಿಯಾಗಿ ಮಂಜೂರು ಮಾಡಿ, ಸದರಿ ಮೊತ್ತದ ಜೊತೆಗೆ ವಿಶ್ವವಿದ್ಯಾಲಯದ ಅನುದಾನವನ್ನು ಸೇರಿಸಿ ಕಾರ್ಪಸ್ ನಿಧಿ ಸ್ಥಾಪಿಸಿ, ಸದರಿ ಕಾರ್ಪಸ್ ನಿಧಿಯ ಬಡ್ಡಿಯಿಂದ ಅಧ್ಯಯನ ಕೇಂದ್ರವನ್ನು ನಿರ್ವಹಿಸಲು ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ಸೂಚಿಸಿದರು.

ಸದರಿ ಪತ್ರದನ್ವಯ ಕುಲಸಚಿವರು ದಿನಾಂಕ:30.12.2016 ರಂದು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ರೂ.2.00 ಕೋಟಿಯ ಕಾರ್ಪಸ್ ನಿಧಿ ಸ್ಥಾಪಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ: 17.07.2017 ಚೆಕ್ ಸಂಖ್ಯೆ:793397 ರನ್ವಯ ರೂ.2.00 ಕೋಟಿಯನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ವಿಶ್ವವಿದ್ಯಾಲಯಕ್ಕೆ ಬಿಡುಗಡೆಗೊಳಿಸಿರುತ್ತಾರೆ. ಬಿಡುಗಡೆಗೊಳಿಸಿರುವ ಅನುದಾನವನ್ನು ಪ್ರಸ್ತಾವನೆಯಲ್ಲಿ ನಮೂದಿಸಿರುವ ಅಂಶಗಳಿಗೆ ಉಪಯೋಗಿಸದೇ ಈ ಕೆಳಗೆ ನಮೂದಿಸಿದ ಇನ್ನಿತರೆ ಚಟುವಟಿಕೆಗಳಿಗೆ 2018-19 ಮತ್ತು 2019-20ನೇ ಸಾಲಿನಲ್ಲಿ ಉಪಯೋಗಿಸಲಾಗಿದೆ.

| **ಕ್ರ. ಸಂ** | **ವೋಚರ್ ಸಂ.ದಿನಾಂಕ** | **ಚೆಕ್. ಸಂ.** | **ಏಜೆನ್ಸಿಯ ಹೆಸರು** | **ಪಾವತಿಸಿದ ಉದ್ದೇಶ** | **ಮೊತ್ತ** |
|---|---|---|---|---|---|
| 01. | 01/08.03.18 | 392691 | ಮಾರ್ಕೆಟಿಂಗ್ ಕನ್ಸಲ್ಟೆಂಟ್ | 600 ಕೆ.ಜಿ. ತೂಕದ ಪ್ರತಿಮೆ ಪ್ರತಿಷ್ಠಾಪಿಸಿದ ಪತ್ರಿಕಾ ಜಾಹಿರಾತು ಬಿಲ್ | 23,714 |
| 02. | 02/18.05.18 | 352692 | - | ಜಯಂತೋತ್ಸವ ಕಾರ್ಯಕ್ರಮ | 10,000 |
| 03. | 04/03.08.18 | 392694 | ಗೋತಮಿ ಕ್ರಿಯೇಷನ್ಸ್ | 50 ಸಾಮಾಜಿಕ ಸುಧಾರಕರ ಭಾವಚಿತ್ರಗಳನ್ನು ಖರೀದಿಸಿದ್ದು | 2,11,670 |
| 04. | 03/21.05.19 | 141663 | ಮಾರ್ಕೆಟಿಂಗ್ ಕನ್ಸಲ್ಟೆಂಟ್ | ಭಾವಚಿತ್ರಗಳ ಖರೀದಿಗೆ ಟೆಂಡರ್ ಕರೆದ ಮೊತ್ತ | 21,706 |
| | | | | **ಒಟ್ಟು** | **2,67,090** |

ಸದರಿ ಪಾವತಿಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ. STAR 2017 Dated. 30.01.2017 ರಲ್ಲಿ Diversion of scheme funds is strictly prohibited and the administration should deal with such action stringenthy ಎಂದಿರುತ್ತದೆ. ಅಂದರೆ ಯಾವುದೇ ಯೋಜನೆಗೆ ಸರ್ಕಾರವು ಅನುದಾನವನ್ನು ಬಿಡುಗಡೆಗೊಳಿಸಿದಾಗ ಪ್ರಸ್ತಾವನೆಯಲ್ಲಿ ಅಥವಾ ಕ್ರಿಯಾ ಯೋಜನೆಯಲ್ಲಿ ಅಥವಾ ಷರತ್ತಿನಲ್ಲಿ ತಿಳಿಸಿರುವ ಅಂಶಗಳಿಗೆ ಮಾತ್ರ ಅನುದಾನವನ್ನು ಉಪಯೋಗಿಸಿಕೊಂಡು ಯೋಜನೆಯನ್ನು ಯಶಸ್ವಿಗೊಳಿಸಬೇಕೆಂಬ ಸರ್ಕಾರದ ಅದೇಶವಿದ್ದರೂ ವಿಶ್ವವಿದ್ಯಾಲಯದವರು 2018-19 ಮತ್ತು 2019-20ನೇ ಸಾಲಿನಲ್ಲಿ ಪ್ರಸ್ತಾವನೆಯಲ್ಲಿಲ್ಲದ ಅಂಶಗಳಿಗೆ ರೂ. 2,67,090/-ಗಳನ್ನು ಖರ್ಚು ಮಾಡಿ, ಸದರಿ ಸರ್ಕಾರದ ಅದೇಶವನ್ನು ಉಲ್ಲಂಘಿಸಿರುತ್ತಾರೆ. ಪ್ರಯುಕ್ತ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ರೂ. 2,67,090/-ಗಳನ್ನು ಬೇರೆಡೆಗೆ ಖರ್ಚು ಮಾಡಿರುವುದನ್ನು ಸಂಬಂಧಿಸಿದವರಿಂದ ವಸೂಲಿಸಲು ತಿಳಿಸಿದೆ.
2. ಸದರಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕಾಗಿ ರೂ. 2.00 ಕೋಟಿಗಳನ್ನು ಬಿಡುಗಡೆಗೊಳಿಸುವುದಕ್ಕಿಂತ ಮುಂಚೆ ದಿನಾಂಕ 17.09.2016 ರಂದು ಹೊರಡಿಸಿದ ಅದೇಶದಲ್ಲಿ ಕಾರ್ಪಸ್ ನಿಧಿಯನ್ನು ಸ್ಥಾಪಿಸಲು ರೂ. 2.00 ಕೋಟಿ ಸರ್ಕಾರದ ಅನುದಾನದ ಜೊತೆಗೆ ವಿಶ್ವವಿದ್ಯಾಲಯದ ಅನುದಾನವನ್ನು ಸೇರಿಸಿ ಸದರಿ ಕಾರ್ಪಸ್ ನಿಧಿಯ ಬಡ್ಡಿಯಿಂದ ಅಧ್ಯಯನ ಕೇಂದ್ರವನ್ನು ನಿರ್ವಹಿಸಲು ತಿಳಿಸಿದರೂ ವಿಶ್ವವಿದ್ಯಾಲಯದವರು ಇಲ್ಲಿಯವರೆಗೆ ಯಾವುದೇ ಅನುದಾನವನ್ನು ಸೇರಿಸದೆ ಸದರಿ ಸರ್ಕಾರದ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಈ ಕುರಿತು ಸ್ಪಷ್ಟೀಕರಣ ಕೋರಿದೆ.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 42 ದಿನಾಂಕ: 19-11-2021 ರಂದು ನೀಡಲಾಗಿದೆ.**

ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ರೂ.2.67 ಲಕ್ಷಗಳಿಗೆ ಸಂಬಂಧಿಸಿದಂತೆ ಪ್ರಸ್ತುತ 2022-23ನೇ ಸಾಲಿನ ಹಣಕಾಸು ವರ್ಷದ ಕ್ರೀಯಾ ಯೋಜನೆಯಲ್ಲಿ ಸದರಿ ವಿಷಯವನ್ನು ಸೇರ್ಪಡೆಗೊಳಿಸಿ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿ ಘಟನೋತ್ತರ ಅನುಮೋದನೆ ಪಡೆದು ಖರ್ಚಗಿರುವ ಮೊತ್ತವನ್ನು ಮರು ಹೊಂದಿಸಲಾಗುವುದು. ಮುಂದಿನ ದಿನಗಳಲ್ಲಿ ಕ್ರೀಯಾ ಯೋಜನೆಯ ಪ್ರಕಾರವೇ ಕಾರ್ಯ ನಿರ್ವಹಿಸಲಾಗುವುದು ಮತ್ತು ಕಾರ್ಪಸ್ ನಿಧಿಯ ಬಡ್ಡಿ ಮೊತ್ತ ಜೊತೆಗೆ ವಿಶ್ವವಿದ್ಯಾಲಯದ

ಮೊತ್ತವನ್ನು ಸೇರಿಸಿ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಸರ್ಕಾರದ ಆದೇಶವನ್ನು ಉಲ್ಲಂಘಿಸಿ 2018-19 ಮತ್ತು 2019-20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ **ರೂ.2,67,090/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**29. 2019-20ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಹಾಗೂ ವಿಸ್ತರಣೆ ಶುಲ್ಕ ವಸೂಲಿಸುವ ಕುರಿತು.**

ವಿಶ್ವವಿದ್ಯಾಲಯದ ಅಧಿಸೂಚನೆ ಪತ್ರ ಸಂಖ್ಯೆ:ವಿ.ಶ್ರೀ.ಕೃ.ವಿ.ಬ./ಕಾ.ಅ.ಮಂ/2018-19/ 2017 ದಿನಾಂಕ:13.11.2018 ರನ್ವಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳು 2019-20ನೇ ಶೈಕ್ಷಣಿಕ ವರ್ಷಕ್ಕಾಗಿ ಕೋರ್ಸುಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಲಗ್ನತೆ ನವೀಕರಣಗಳಿಗಾಗಿ ಅಧಿಸೂಚನೆಯನ್ವಯ ಶುಲ್ಕ ನಿಗದಿ ಪಡಿಸಿದ್ದು, ನಿಗದಿತ ಸಮಯದಲ್ಲಿ ಪಾವತಿಸಬೇಕಾಗಿರುತ್ತದೆ. (ದಂಡ ರಹಿತ). ಆದರೆ ಕೆಲವೊಂದು ಮಹಾವಿದ್ಯಾಲಯಗಳು ಸದರಿ ಅಧಿಸೂಚನೆಯನ್ನು ಪಾಲಿಸದೆ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟು ಮಾಡಿರುವ ವಿವರ ಅನುಬಂಧ-08 ರಲ್ಲಿ ನೀಡಲಾಗಿದೆ.

ಮುಂದುವರೆದು ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ದಂಡವನ್ನು ಲೆಕ್ಕಾಚಾರ ಮಾಡಿ ಅನುಬಂಧ-08 ರಲ್ಲಿ ನೀಡಲಾಗಿದ್ದು, ಸದರಿ ಬಾಕಿ ಮೊತ್ತ **12,41,208/- ಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಿಂದ ಶೀಘ್ರದಲ್ಲಿ ವಸೂಲಿಸಿ** ವಿಶ್ವವಿದ್ಯಾಲಯದ ಸಂಲಗ್ನತೆ ಬ್ಯಾಂಕ್ ಖಾತೆಗೆ ಜಮೆ ತೆಗೆದುಕೊಂಡು ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ತಿಳಿಸಿದೆ.

ವಿಶ್ವವಿದ್ಯಾಲಯದ ಸಂಲಗ್ನತೆ (Affiliation) ಬ್ಯಾಂಕ್ ಖಾತೆ ಸಂಖ್ಯೆ 38661010001427 ಗೆ ಜಮೆ ಆಗಬೇಕಾಗಿದ್ದ ಸಂಲಗ್ನತೆ ಶುಲ್ಕ ರೂ. 13,44,310/- ಗಳು ತಪ್ಪಾಗಿ ವಿಶ್ವವಿದ್ಯಾಲಯದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಯಾದ ಜನರಲ್ ಅಕೌಂಟ್ ಸಂಖ್ಯೆ 38661010000001 ರಲ್ಲಿ ತಪ್ಪಾಗಿ ಜಮೆ ಮಾಡಲಾಗಿರುತ್ತದೆ. ಸದರಿ ಮೊತ್ತವನ್ನು ಸಂಲಗ್ನತೆ (Affiliation) ಬ್ಯಾಂಕ್ ಖಾತೆಗೆ ವರ್ಗಾಯಿಸಿ ಸರಿಪಡಿಸಲು ಸೂಚಿಸಿ ಅಲ್ಲಿಯವರೆಗೆ ರೂ. 13,44,310/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:43 ದಿನಾಂಕ: 19-11-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಬಾಕಿ ಹಣವನ್ನು ಆಯಾ ಮಹಾವಿದ್ಯಾಲಯಗಳಿಂದ ವಸೂಲಿ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಮೊತ್ತ ವಸೂಲಿಯಾಗುವವರೆಗೂ ಕಂಡಿಕೆ ಮುಂದುವರೆಸುತ್ತಾ ಸದರಿ ಬಾಕಿ ಮೊತ್ತ ರೂ.**12,41,208/- ಗಳನ್ನು ವಸೂಲಾತಿಸಿ ರೂ. 13,44,310/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**೩೦. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ಬಾಕಿ ಇರುವ ಪ್ರವೇಶ ಶುಲ್ಕವನ್ನು ವಸೂಲಾತಿಸುವ ಬಗ್ಗೆ.**

ಉಲ್ಲೇಖ:– 1) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/ಶುಲ್ಕ ಪಟ್ಟ/2019–20.

2) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/ಶುಲ್ಕ ಪಟ್ಟ/2019–20/534

3) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/2019–20/1150.

ಉಲ್ಲೇಖಿತ ಅಧಿಸೂಚನೆಯ ಅನ್ವಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ೨೦೧೯–೨೦ನೇ ಸಾಲಿನ ಅಡಿಯಲ್ಲಿ ಬರುವ ಪದವಿ ಮಹಾವಿದ್ಯಾಲಯಗಳ I II & IIIನೇ ವರ್ಷದ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ದಂಡರಹಿತವಾಗಿ ಪಡೆಯುವ ಕೊನೆಯ ದಿನಾಂಕವು ೦೮.೦೭.೨೦೧೯ ಆಗಿದ್ದು, ರೂ. ೯೦೦/– ಗಳ ದಂಡದೊಂದಿಗೆ ಪಡೆಯುವ ಕೊನೆಯ ದಿನಾಂಕವು ೨೪.೦೭.೨೦೧೯ ಆಗಿರುತ್ತದೆ. ಪ್ರವೇಶಾತಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಿದಾಗ, ಈ ಕೆಳಗಿನ ನ್ಯೂನತೆಗಳು ಕಂಡುಬಂದಿರುತ್ತವೆ.

1. ಕೊಪ್ಪಳ & ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ೨೪ ಮತ್ತು ೪೬ ಪದವಿ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಉಲ್ಲೇಖಿತ ಅಧಿಸೂಚನೆಗಳಲ್ಲಿ ನಿಗದಿಪಡಿಸಿದಂತೆ ವಿದ್ಯಾರ್ಥಿಗಳ ಪ್ರವೇಶ ಶುಲ್ಕ/ಅರ್ಹತಾ ಶುಲ್ಕದ ಕಡತಗಳನ್ನು/ರಜಿಸ್ಟರ್‌ಗಳನ್ನು ವಿಶ್ವವಿದ್ಯಾಲಯ ವಿದ್ಯಾಮಂಡಳ ವಿಭಾಗದಲ್ಲಿ ನಿರ್ವಹಿಸಿರುವುದಿಲ್ಲ.
2. ಆರಂಭಿಕ ಶಿಲ್ಕಿನ ಮೊತ್ತವನ್ನು ಕಾಲೇಜುವಾರು ರಜಿಸ್ಟರ್‌ನಲ್ಲಿ ನಮೂದಿಸಬೇಕು. ಆದರೆ ವಿಶ್ವವಿದ್ಯಾಲಯದವರು ಒದಗಿಸಿದ ಕಡತಗಳನ್ನು ಪರೀಶಿಲಿಸಿದಾಗ ಆರಂಭಿಕ ಶಿಲ್ಕು ನಮೂದಿಸದೇ ಇರುವುದನ್ನು ಆಕ್ಷೇಪಿಸಿದೆ. ಇದರಿಂದ ಹಿಂದಿನ ಸಾಲಿನ ಬಾಕಿ ಮೊತ್ತ ವಸೂಲಾತಿಯ ಬಗ್ಗೆ ನಿಖರವಾಗಿ ಮಾಹಿತಿ ತಿಳಿದು ಬಂದಿರುವುದಿಲ್ಲ.
3. ಕಾಲೇಜುವಾರು ಕಡತಗಳಲ್ಲಿ ನಮೂದಿಸಿರುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಕಡಿಮೆ ಬೇಡಿಕೆ ಕಡಿಮೆ ಬಾಕಿ ನಮೂದಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ವಿವರ ಈ ಕೆಳಗಿನಂತಿವೆ.

| ಕ್ರ. ಸಂ. | ಜಿಲ್ಲೆಯ ಹೆಸರು | ಕಾಲೇಜುಗಳ ಸಂಖ್ಯೆ | ಬೇಡಿಕೆ | ವಸೂಲಿ | ಲೆ.ಪ.ಅನ್ವಯ ವಸೂಲಿಸಬೇಕಾಗುವ ಮೊತ್ತ |
|---|---|---|---|---|---|
| 1. | ಕೊಪ್ಪಳ | 24 | 433,79,076 | 1,38,06,038 | 2,95,73,038 |
| 2. | ಬಳ್ಳಾರಿ | 46 | 6,72,69,794 | 2,83,58,622 | 3,89,11,172 |
| | | | | ಒಟ್ಟು | **6,84,84,210** |

**(ಅನುಬಂಧ–೦೯ ರೂ.೨,೯೫,೭೩,೦೩೮/– ಹಾಗೂ ಅನುಬಂಧ–೧೦ ರೂ.೩,೮೯,೧೧,೧೭೨)**

ಕ್ರಮ ಸಂಖ್ಯೆ 1, 2 ಮತ್ತು 3 ರಲ್ಲಿ ನ್ಯೂನತೆಗಳು ಇರುವುದರಿಂದ ನಿಖರವಾಗಿ ಕಾಲೇಜುವಾರು ವಸೂಲಿಯಾಗಬೇಕಾದ ಮೊತ್ತ ತಿಳಿದು ಬಂದಿರುವುದಿಲ್ಲ.

**ಇನ್ನಿತರೆ ನ್ಯೂನತೆಗಳು**

01. ಕೆಲವೊಂದು ಕಾಲೇಜುಗಳಲ್ಲಿ ಯಾವುದೇ ಚಲನ್ ಅಥವಾ ಚಲನ್ ಪ್ರತಿಗಳನ್ನಾಗಲಿ ಸಲ್ಲಿಸಿರುವುದಿಲ್ಲ ಕೆಲವೊಂದು ಪ್ರಕರಣಗಳಲ್ಲಿ ಕೈಬರಹದಲ್ಲಿ ಡಿ.ಡಿ.ಸಂಖ್ಯೆ ಮತ್ತು ರೂ. ಗಳನ್ನು ನಮೂದಿಸಿರುವುದು ಕಂಡು ಬಂದಿರುತ್ತದೆ.
02. ಪ್ರವೇಶ ಶುಲ್ಕವನ್ನು ವಿದ್ಯಾರ್ಥಿಗಳು ಕಾಲೇಜಿನವರಿಗೆ ಭರಿಸುತಿದ್ದ ಕಾಲೇಜಿನವರು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಚಲನ್ ಮುಖಾಂತರ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ (ಜನರಲ್ ಫಂಡ್) ಜಮಾ ಮಾಡುತಿದ್ದಾರೆ. ಇದರಲ್ಲಿ ಕಾಲೇಜಿನವರು ವಿದ್ಯಾರ್ಥಿಗಳಿಂದ ಪಡೆಯಲಾದ ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ವಿಳಂಬವಾಗಿ ಸಂದಾಯ ಮಾಡುತ್ತಿರುವ ಬಗ್ಗೆ ಹಾಗೂ ಕೆಲವೊಂದು ಕಾಲೇಜಿನವರು ಅಪೂರ್ಣ ಶುಲ್ಕವನ್ನು ಸಂದಾಯ ಮಾಡುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

    ಇದರಿಂದ ಪ್ರತಿ ವರ್ಷವು ಕಾಲೇಜುಗಳಿಂದ ಬರಬೇಕಾದ ಪ್ರವೇಶ ಶುಲ್ಕದ ಕೋಟಿಗಳಷ್ಟು ಮೊತ್ತವು ವಸೂಲಾತಿಯಾಗದೇ ಬಾಕಿ ಉಳಿದುಕೊಂಡಿರುತ್ತದೆ.
03. ಪ್ರತಿಯೊಂದು ಕಾಲೇಜಿಗೆ ಪ್ರವೇಶದ ಶುಲ್ಕದ ವಿವರ ದಂಡರಹಿತ ಮತ್ತು ದಂಡಸಹಿತವಾಗಿ ಕಟ್ಟಬೇಕಾಗಿರುವ ಮೊತ್ತದ ಕುರಿತು ಸುತ್ತೋಲೆ ಹೊರಡಿಸಬೇಕು. ಆ ಸುತ್ತೋಲೆಯ ಅನ್ವಯ ಕಾಲೇಜುವಾರು ವಿದ್ಯಾರ್ಥಿಗಳಿಂದ ವಸೂಲಿಯಾಗಿರುವ ಮೊತ್ತವನ್ನು ಆಯಾ ದಿನಾಂಕದಂದು ಪೂರ್ತಿಯಾಗಿ ಕಟ್ಟಿಸತಕ್ಕದ್ದು.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ 45 ದಿನಾಂಕ:25-11-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮಹಾವಿದ್ಯಾಲಯಗಳಿಂದ ಮಾಹಿತಿಯನ್ನು ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ **ಅನುಬಂಧ-09 ಮತ್ತು 10 ರಲ್ಲಿ** ನಮೂದಿಸಿದ ಮೊತ್ತ ರೂ. **6,84,84,210/-** ಗಳನ್ನು (2,95,73,038 + 3,89,11,172) ಸಂಬಂಧಿಸಿದ ಮಹಾವಿದ್ಯಾಲಯಗಳಿಂದ **ವಸೂಲಿಸಿ ಲೆಕ್ಕಪರಿಶೋಧನೆಗೆ ವರದಿಸಲು ತಿಳಿಸಿದೆ**.

**31. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳ ಬಾಕಿ ಇರುವ ಪ್ರವೇಶ ಶುಲ್ಕವನ್ನು ವಸೂಲಾತಿಸುವ ಬಗ್ಗೆ.**

ಉಲ್ಲೇಖ:- 1) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/ಶುಲ್ಕ ಪಟ್ಟಿ/2018-19/250

2) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/ಶುಲ್ಕ ಪಟ್ಟಿ/2018-19/82

3) ಸಂಖ್ಯೆ: ವಿಶ್ರೀಕೃಷ್ಣವಿಬ/ವಿಮವಿ/2018-19/487.

ಉಲ್ಲೇಖಿತ ಅಧಿಸೂಚನೆಯ ಅನ್ವಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-19ನೇ ಸಾಲಿನ ಅಡಿಯಲ್ಲಿ ಬರುವ ಪದವಿ ಮಹಾವಿದ್ಯಾಲಯಗಳ I II & IIIನೇ ವರ್ಷದ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ದಂಡರಹಿತವಾಗಿ ಪಡೆಯುವ ಕೊನೆಯ ದಿನಾಂಕವು 09.07.2018 ಆಗಿದ್ದು, ರೂ. 825/- ಗಳ ದಂಡದೊಂದಿಗೆ ಪಡೆಯುವ ಕೊನೆಯ ದಿನಾಂಕವು 25.07.2018 ಆಗಿರುತ್ತದೆ. ಪ್ರವೇಶಾತಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಿದಾಗ ಈ ಕೆಳಗಿನ ನ್ಯೂನತೆಗಳು ಕಂಡುಬಂದಿರುತ್ತವೆ.

1. ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ & ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ, 27 ಮತ್ತು 43 ಪದವಿ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ನಿಗದಿಪಡಿಸಿದಂತೆ ವಿದ್ಯಾರ್ಥಿಗಳ ಪ್ರವೇಶ ಶುಲ್ಕ/ಅರ್ಹತಾ ಶುಲ್ಕದ ಕಡತಗಳನ್ನು ರಜಿಸ್ಟರ್‌ಗಳನ್ನು ವಿಶ್ವವಿದ್ಯಾಲಯ ವಿದ್ಯಾಮಂಡಳ ವಿಭಾಗದಲ್ಲಿ ನಿರ್ವಹಿಸಿರುವುದಿಲ್ಲ.
2. ಅರಂಭೀಕ ಶಿಲ್ಕಿನ ಮೊತ್ತವನ್ನು ಕಾಲೇಜುವಾರು ರಜಿಸ್ಟರ್‌ನಲ್ಲಿ ನಮೂದಿಸಬೇಕು. ಆದರೆ ವಿಶ್ವವಿದ್ಯಾಲಯದವರು ಒದಗಿಸಿದ ಕಡತಗಳನ್ನು ಪರಿಶೀಲಿಸಿದಾಗ ಆರಂಭಿಕ ಶಿಲ್ಕು ನಮೂದಿಸದೇ ಇರುವುದನ್ನು ಆಕ್ಷೇಪಿಸಿದೆ. ಇದರಿಂದ ಹಿಂದಿನ ಸಾಲಿನ ಬಾಕಿ ಮೊತ್ತ ವಸೂಲಾತಿಯ ಬಗ್ಗೆ ನಿಖರವಾಗಿ ಮಾಹಿತಿ ತಿಳಿದು ಬಂದಿರುವುದಿಲ್ಲ.
3. ಕಾಲೇಜುವಾರು ಕಡತಗಳಲ್ಲಿ ನಮೂದಿಸಿರುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಕಡಿಮೆ ಬೇಡಿಕೆ, ಹಾಗೂ ಕಡಿಮೆ ಬಾಕಿ, ನಮೂದಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ವಿವರ ಈ ಕೆಳಗಿನಂತಿವೆ.

| ಕ್ರ. ಸಂ | ಜಿಲ್ಲೆಯ ಹೆಸರು | ಕಾಲೇಜುಗಳ ಸಂಖ್ಯೆ | ಬೇಡಿಕೆ | ವಸೂಲಿ | ಲೆ.ಪ. ಅನ್ವಯ ವಸೂಲಿಸುವ ಬೇಕಾಗುವ |
|---|---|---|---|---|---|
| 1. | ಬಳ್ಳಾರಿ | 43 | 6,14,01,250 | 2,73,35,075 | 3,40,66,175 |
| 2. | ಕೊಪ್ಪಳ | 27 | 3,54,83,362 | 1,43,43,973 | 2,11,39,389 |
| | | | | **ಒಟ್ಟು** | **5,52,05,564** |

(ಅನುಬಂಧ-11 ರೂ. 2,11,39,389 ಹಾಗೂ ಅನುಬಂಧ-12 ರೂ.3,40,66,175 )

ಕ್ರ.ಸಂಖ್ಯೆ 1, 2 ಮತ್ತು 3 ರಲ್ಲಿನ ನ್ಯೂನತೆಗಳ ಇರುವುದರಿಂದ ನಿಖರವಾಗಿ ಕಾಲೇಜುವಾರು ವಸೂಲಿಯಾಗಬೇಕಾದ ಮೊತ್ತ ತಿಳಿದು ಬಂದಿರುವುದಿಲ್ಲ.

**ಇನ್ನಿತರೆ ನ್ಯೂನತೆಗಳು:**

1. ಕೆಲವೊಂದು ಕಾಲೇಜುಗಳಲ್ಲಿ ಯಾವುದೇ ಚಲನ್ ಅಥವಾ ಚಲನ್ ಪ್ರತಿಗಳನ್ನಾಗಲಿ ಸಲ್ಲಿಸಿರುವುದಿಲ್ಲ ಕೆಲವೊಂದು ಪ್ರಕರಣಗಳಲ್ಲಿ ಕೈ ಬರಹದಲ್ಲಿ ಡಿ.ಡಿ.ನಂ. & ರೂ. ಗಳನ್ನು ನಮೂದಿಸಿರುವುದು ಕಂಡುಬಂದಿರುತ್ತದೆ.
2. ಪ್ರವೇಶ ಶುಲ್ಕವನ್ನು ವಿದ್ಯಾರ್ಥಿಗಳು ಕಾಲೇಜಿನವರಿಗೆ ಭರಿಸುತ್ತಿದ ಕಾಲೇಜಿನವರು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ Online ಚಲನ್ ಮುಖಾಂತರ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ (General Fund) ಜಮಾ ಮಾಡುತಿದ್ದಾರೆ. ಇದರಲ್ಲಿ ಕಾಲೇಜಿನವರು ವಿದ್ಯಾರ್ಥಿಗಳಿಂದ ಪಡೆಯಲಾದ ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ವಿಳಂಬವಾಗಿ ಸಂದಾಯ ಮಾಡುತ್ತಿರುವ ಬಗ್ಗೆ ಹಾಗೂ ಕೆಲವೊಂದು ಕಾಲೇಜಿನವರು ಆ ಪೂರ್ಣ ಶುಲ್ಕವನ್ನು ಸಂದಾಯ ಮಾಡುತ್ತಿರುವದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

   ಇದರಿಂದ ಪ್ರತಿ ವರ್ಷವು ಕಾಲೇಜುಗಳಿಂದ ಬರಬೇಕಾದ ಪ್ರವೇಶ ಶುಲ್ಕದ ಕೋಟಿಗಳಷ್ಟು ಮೊತ್ತವು ವಸೂಲಾತಿಯಾಗದೇ ಬಾಕಿ ಉಳಿದುಕೊಂಡಿರುತ್ತದೆ.
3. ಪ್ರತಿಯೊಂದು ಕಾಲೇಜಿಗೆ ಪ್ರವೇಶದ ಶುಲ್ಕದ ವಿವರ ದಂಡರಹಿತ ಮತ್ತು ದಂಡಸಹಿತವಾಗಿ ಕಟ್ಟಬೇಕಾಗಿರುವ ಮೊತ್ತದ ಕುರಿತು ಸುತ್ತೋಲೆಯನ್ನು ಹೊರಡಿಸಬೇಕು. ಆ ಸುತ್ತೋಲೆಯ ಅನ್ವಯ ಕಾಲೇಜುವಾರು ವಿದ್ಯಾರ್ಥಿಗಳಿಂದ ವಸೂಲಿಯಾಗಿರುವ ಮೊತ್ತವನ್ನು ಆಯಾ ದಿನಾಂಕದಂದು ಪೂರ್ತಿಯಾಗಿ ಕಟ್ಟಿಸತಕ್ಕದ್ದು.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 46 ದಿನಾಂಕ: 06-12-2021 ರಂದು ನೀಡಲಾಗಿದೆ.**

ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮಹಾವಿದ್ಯಾಲಯಗಳಿಂದ ಮಾಹಿತಿಯನ್ನು ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ಅನುಬಂಧ-11 ಮತ್ತು 12 ರಲ್ಲಿ ನಮೂದಿಸಿದ ಮೊತ್ತ **ರೂ. 5,52,05,564/-** ಗಳನ್ನು (3,40,66,175 + 2,11,39,389) ಸಂಬಂಧಿಸಿದ ಮಹಾವಿದ್ಯಾಲಯಗಳಿಂದ **ವಸೂಲಿಸಿ ಲೆಕ್ಕಪರಿಶೋಧನೆಗೆ ವರದಿಸಲು ತಿಳಿಸಿದೆ.**

**32. 2020-21ನೇ ಸಾಲಿನ ಸಂಯೋಜನಾ ಶುಲ್ಕ ವಸೂಲಾತಿಯಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿ/ಅಧಿಕಾರಿಗಳಿಂದ ವಂಚನೆಯ ಪ್ರಕರಣ ಕಂಡುಬಂದಿರುವ ಕುರಿತು.**

ಉಲ್ಲೇಖ:- 1. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧಿಸೂಚನೆ ಪತ್ರಸಂಖ್ಯೆ:ವಿ.ಶ್ರೀ.ಕೃ.ವಿ.ವಿ.ಬ/ಸಿಡಿಸಿ/ ಸಂಯೋಜನೆ/ 2020-21/ ದಿನಾಂಕ:11.09.2019

2 ವಿಶ್ವವಿದ್ಯಾಲಯದ ಸಂಯೋಜನಾ ಪ್ರಕಟಣೆ ಸಂಖ್ಯೆ: ವಿಶ್ರೀಕೃವಿಬ/ ಕಾ.ಅ.ಮುಂ/2019-20/482 ದಿನಾಂಕ: 07.09.2019

ಉಲ್ಲೇಖಿತ ಪತ್ರಗಳ ಅನ್ವಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಅಧೀನದಲ್ಲಿ ಬರುವ Saint Paul’s ಗಂಗಾವತಿ ಹಾಗೂ ಕೊಪ್ಪಳ ಮಹಾವಿದ್ಯಾಲಯದವರು 2019-20 ನೇ ಸಾಲಿನಲ್ಲಿ ಭರಿಸಬೇಕಾದ 2020-21ನೇ ಸಾಲಿನ ಸಂಯೋಜನ ಶುಲ್ಕದ ವಿವರ <u>ಅನುಬಂಧ-13 ಮತ್ತು 14</u> ರಲ್ಲಿ ವಿವರಿಸಿದೆ.

ಸದರಿ ಮಹಾವಿದ್ಯಾಲಯದ ಸಂಯೋಜನಾ ಶುಲ್ಕದ ಅರ್ಜಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1) Saint Paul’s ಗಂಗಾವತಿ ಹಾಗೂ ಕೊಪ್ಪಳ ಮಹಾವಿದ್ಯಾಲಯದವರು ಸಂಯೋಜನಾ ಶುಲ್ಕ ಭರಿಸಿದ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | College Name | ಮೊತ್ತ ದಿನಾಂಕ | ಚಲನ್ ಸಂಖ್ಯೆ |
|---|---|---|---|
| 1) | Saint Paul’s College Gangavathi | 12,000<br>29.11.2019 | KARBNI9333766939 |
| 2) | -do- | 4,000<br>29.11.2019 | KARBNI9333767095 |
| 3) | Saint Paul’s College Koppal | 6,000<br>29.11.2019 | KARBNI9333767010 |
| 4) | -do- | 4,000<br>29.11.2019 | KARBNI9333767095 |

ಈ ಮೇಲೆ ವಿವರಿಸಿದಂತೆ, ಕ್ರಮ ಸಂಖ್ಯೆ (2) ಮತ್ತು (4) ರ ಚಲನ್ ಒಂದೇ ಆಗಿರುತ್ತದೆ.

ಕ್ರಮ ಸಂಖ್ಯೆ (1) ಮತ್ತು (2) ನೇ ಚಲನ್ ಮೊತ್ತ ರೂ. 12,000 ಮತ್ತು ರೂ.4,000 ಗಳು ಬ್ಯಾಂಕ ಸ್ಟೇಟಮೆಂಟ್ ನಿಂದ ದೃಢಪಟ್ಟಿದ್ದು, ಆದರೆ ವಿಶ್ವವಿದ್ಯಾಲಯದ ದಾಖಲೆಗಳಲ್ಲಿ ಕ್ರಮ ಸಂಖ್ಯೆ (1) ಮತ್ತು (2) ರೂ.1,20,000/- ಮತ್ತು 40,000/- ಗಳೆಂದು ತೋರಿಸಲಾಗಿದೆ. ಈ ಕುರಿತು ಸೂಕ್ತ ವಿವರಣೆ ನೀಡುವುದು.

2) ಸಂಯೋಜನಾ ಅರ್ಜಿಯಲ್ಲಿ Saint Paul's College ಗಂಗಾವತಿ ಹಾಗೂ ಕೊಪ್ಪಳದವರು ಕ್ರಮ ಸಂಖ್ಯೆ (2) ಮತ್ತು (4) ರಂತೆ ಒಂದೇ ಚಲನ್ ಸಂಖ್ಯೆಯಿಂದ ಶುಲ್ಕ ಭರಿಸಲು ಹೇಗೆ ಸಾಧ್ಯವಾಯಿತು ವಿವರಿಸುವುದು.

3) ಮೇಲೆ ತಿಳಿಸಿದಂತೆಯೇ Saint Paul's ಮಹಾವಿದ್ಯಾಲಯ ಕೊಪ್ಪಳದವರು ಭರಿಸಿದ ರೂ. 6,000/- ಗಳ ಚಲನ್‌ಗೆ ರೂ. 60,000/-ಗಳೆಂದು ತಿದ್ದುಪಡಿ ಮಾಡಿ ವಿಶ್ವವಿದ್ಯಾಲಯಕ್ಕೆ ವಂಚನೆ ಮಾಡುವ ಪ್ರಯತ್ನ ನಡೆದಿರುತ್ತದೆ.

4) ವಿಶ್ವವಿದ್ಯಾಲಯದವರು ನೀಡಿದ ದಾಖಲೆಗಳಾದ ಸಂಯೋಜನಾ ಶುಲ್ಕ ವಸೂಲಿಸಿದ ವಿವರಗಳ ಪ್ರತಿ ಹಾಗೂ ರಜಿಸ್ಟರ್‌ನಲ್ಲಿ ದಾಖಲಿಸಿದಂತೆ, Saint Paul's ಮಹಾವಿದ್ಯಾಲಯ ಗಂಗಾವತಿಯವರು ದಿನಾಂಕ:09.10.2019 ರಂದು ರೂ. 1,78,900/- ಗಳನ್ನು ಚಲನ್ ಸಂಖ್ಯೆ AXINSP0076096335 ರ ಮೂಲಕ 2020-21 ನೇ ಸಾಲಿನ ಸಂಯೋಜನಾ ಶುಲ್ಕ ಪಾವತಿಸಿರುವುದಾಗಿ ತಿಳಿಸಲಾಗಿದೆ.

ಆದರೆ ಸದರಿ ಚಲನ ಸಂಖ್ಯೆಯನ್ನು ಪರಿಶೀಲಿಸಲಾಗಿ, ಆ ಚಲನ್ ಗಂಗಾವತಿ ಭಾಗ್ಯಮ್ಮ ರೂರಲ್ ಮಹಾವಿದ್ಯಾಲಯ ಹೂವಿನ ಹಡಗಲಿಯವರು ಪಾವತಿಸಿರುವುದು ಬ್ಯಾಂಕ್ ಸ್ಟೇಟ್‌ಮೆಂಟ್‌ನಿಂದ ದೃಢಪಟ್ಟಿರುತ್ತದೆ.

ಅಂದರೆ Saint Paul's College ಗಂಗಾವತಿಯವರು ಭರಿಸದೇ ಇರುವ ಸಂಯೋಜನಾ ಶುಲ್ಕವನ್ನು ಭರಿಸಲಾಗಿದೆ ಎಂದು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ವಿಶ್ವವಿದ್ಯಾಲಯಕ್ಕೆ ವಂಚನೆ ಮಾಡುವ ಪ್ರಯತ್ನ ನಡೆದಿರುತ್ತದೆ.

5) ಉಲ್ಲೇಖ 2 ರಂತೆ ಸಂಯೋಜನಾ ಶುಲ್ಕ ಪಾವತಿಸಲು ದಂಡ ರಹಿತ ಕೊನೆಯ ದಿನಾಂಕ:10.10.2019 ರಂದು ನಿಗದಿಪಡಿಸಲಾಗಿದ್ದು, ವಿಳಂಬವಾದಲ್ಲಿ ದಿನಾಂಕ: 11.10.2019 ರಿಂದ ದಿನಾಂಕ: 16.10.2019 ರವರೆಗೆ ರೂ. 20,000/- ಗಳನ್ನು ಹಾಗೂ ದಿನಾಂಕ: 17.10.2019 ರಿಂದ ದಿನಾಂಕ: 23.10.2019 ರವರೆಗೆ ರೂ. 40,000/- ದಂಡ ಶುಲ್ಕದ ಜೊತೆಗೆ ಸಂಯೋಜನಾ ಶುಲ್ಕ ಪಾವತಿಸಬೇಕಾಗಿರುತ್ತದೆ. ಆದರೆ Saint Paul's College ಗಂಗಾವತಿ ಹಾಗೂ ಕೊಪ್ಪಳರವರು ಒಟ್ಟು ಮೂರು ಚಲನ್‌ಗಳನ್ನು ಮಾತ್ರ ಪಾವತಿಸಲಾಗಿದ್ದು, ಅವು ದಿನಾಂಕ: 29.11.2019 ರಂದು ಪಾವತಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ನಿಯಮದಂತೆ ರೂ. 40,000/- ದಂಡ ಶುಲ್ಕದೊಂದಿಗೆ ಸಂಯೋಜನಾ ಶುಲ್ಕ ವಸೂಲಿಸಬೇಕಾಗಿದ್ದು, ವಿಶ್ವವಿದ್ಯಾಲಯದವರು ಬಾಕಿ ಇರುವ ಮೊತ್ತಕ್ಕೆ ಮಹಾವಿದ್ಯಾಲಯಗಳಿಗೆ ಯಾವುದೇ ಪತ್ರ ವ್ಯವಹಾರ

ಮಾಡದೇ ಇರುವುದು ಗಮನಿಸಲಾಗಿರುತ್ತದೆ. ಈ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

6) ಮೇಲಿನ ಎಲ್ಲಾ ನ್ಯೂನತೆಗಳಿಗೆ ವಿಶ್ವವಿದ್ಯಾಲಯದ ಸಿಡಿಸಿ (ಕಾಲೇಜು ಅಭಿವೃದ್ಧಿ ಮಂಡಳಿ) ವಿಭಾಗದ ಸಿಬ್ಬಂದಿ/ಅಧಿಕಾರಿಗಳೆ ನೇರ ಹೊಣೆಗಾರರಾಗಿದ್ದು, ಸದರಿಯವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ಚರ್ಚಿಸುವುದು.

7) ಸ್ಥಳೀಯ ತನಿಖಾ ಸಮಿತಿ (Local Investigation committee) ಯಲ್ಲಿ ಪಾಲ್ಗೊಂಡ ಅಧಿಕಾರಿ ಸಿಬ್ಬಂದಿಗಳ ಕರ್ತವ್ಯಲೋಪವಾಗಿರುವ ಕುರಿತು ಸೂಕ್ತ ವಿವರಣೆ ನೀಡುವುದು.

8) Saint Paul's College ಗಂಗಾವತಿ ಹಾಗೂ ಕೊಪ್ಪಳ ಮಹಾವಿದ್ಯಾಲಯಗಳಿಗೆ ಮುಂದಿನ ಸಾಲಿನಲ್ಲಿ ಸಂಯೋಜನೆ ನೀಡದೇ ಇರುವ ಕುರಿತು ನಿರ್ಣಯ ಕೈಗೊಳ್ಳುವುದು ಅವಶ್ಯಕವಾಗಿರುವುದಾಗಿ ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿರುತ್ತದೆ.

**ಅನುಬಂಧ-13 ಮತ್ತು 14** ರಲ್ಲಿ ವಿವರಿಸಿದಂತೆ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಬಾಕಿ ಶುಲ್ಕ ರೂ. 1,40,600/- ಮತ್ತು ರೂ. 71,816-ಗಳನ್ನು ಮಹಾವಿದ್ಯಾಲಯಗಳಿಂದ ಶೀಘ್ರದಲ್ಲಿ ವಸೂಲಿಸಿ ವಿಶ್ವವಿದ್ಯಾಲಯದ ಸಂಯೋಜನಾ ಶುಲ್ಕದ ಖಾತೆಗೆ ಜಮೆ ತೆಗೆದುಕೊಳ್ಳಲು ತಿಳಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 47 ದಿನಾಂಕ: 06-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸೇಂಟ್ ಪಾಲ್ಸ್ ಮಹಾವಿದ್ಯಾಲಯ ಗಂಗಾವತಿ & ಕೊಪ್ಪಳ ಇವರಿಗೆ ಶೀಘ್ರವೆ ಹಣವನ್ನು ಪಾವತಿಸುವಂತೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮೊತ್ತ ವಸೂಲಾತಿಯಾಗುವವರೆಗೆ ಕಂಡಿಕೆಯನ್ನು ಮುಂದುವರೆಸುತ್ತಾ ಒಟ್ಟು ಬಾಕಿ ಮೊತ್ತ ರೂ. 1,40,600+ 71,816 = **2,12,416/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

**೩೩. ಬಳ್ಳಾರಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ವಸೂಲಿಸುವ ಬಗ್ಗೆ.**

**ಉಲ್ಲೇಖ:-1** ಕುಲಸಚಿವರು ವಿ.ಶ್ರೀ.ಕೃ.ದೇ.ವಿ.ವಿ.ಯ ಬಳ್ಳಾರಿಯವರ ಅಧಿಸೂಚನೆ ಸಂ. ವಿ.ಶ್ರೀ.ಕೃ.ವಿ.ಬ: ವಿಮೆವಿ/2018-19/124.

**2** ಕುಲಸಚಿವರು ಆದೇಶದಂತೆ Fee Structure.

2018-19ನೇ ಸಾಲಿನ ಬಳ್ಳಾರಿ ವಿಶ್ವವಿದ್ಯಾಲಯದ ಲೆಕ್ಕ ತನಿಖೆಯಲ್ಲಿ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಶುಲ್ಕದ ವಿವರ ಉಲ್ಲೇಖಿತ ಅಧಿಸೂಚನೆ 1 ಹಾಗೂ 2 ರನ್ವಯ ವಿವರಿಸಿರುವಂತೆ III ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ದಂಡರಹಿತವಾಗಿ ಪಡೆಯಲು ಕೊನೆಯ ದಿನಾಂಕ:31.07.2018 ಹಾಗೂ ಪ್ರಥಮ ಸೆಮಿಸ್ಟರ್ ಪ್ರವೇಶ ಶುಲ್ಕ ದಂಡರಹಿತವಾಗಿ ಪಡೆಯಲು ಕೊನೆಯ ದಿನಾಂಕ:15.08.2018 ಹಾಗೂ ದಂಡದೊಂದಿಗೆ ಪಡೆಯಲು ಕೊನೆಯ ದಿನಾಂಕ:17.08.2018 ಎಂದು ನಮೂದಿಸಲಾಗಿದ್ದು, ಆದರೆ ಯಾವುದೇ ವಿದ್ಯಾರ್ಥಿಗಳಿಂದ ದಂಡ ಶುಲ್ಕದ ಮೊತ್ತ ನಮೂದಿಸಿರುವುದಿಲ್ಲ. ಇದರಿಂದಾಗಿ ಕೊನೆಯ ದಿನಾಂಕ ಮುಗಿದ ನಂತರ ಹಣ ಪಾವತಿ ಮಾಡಿರುವ ವಿದ್ಯಾರ್ಥಿಗಳಿಗೆ ದಂಡ ಶುಲ್ಕ ಎಷ್ಟು ವಸೂಲಿಸಬೇಕೆಂದು ತಿಳಿದು ಬಂದಿರುವುದಿಲ್ಲ.

ಸದರಿ ಅಧಿಸೂಚನೆಗಳಲ್ಲಿ ನಿಗದಿಪಡಿಸಿದ ದಿನಾಂಕವಾರು ಶುಲ್ಕಗಳನ್ನು ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳ ಪ್ರವೇಶ ಶುಲ್ಕ/ಅರ್ಹತಾ ಶುಲ್ಕದ ರಜಿಸ್ಟರನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ.

1. 2018-19ನೇ ಸಾಲಿನ ಪ್ರವೇಶ ಶುಲ್ಕದ ಪ್ರತ್ಯೇಕವಾದ ಕಡತವನ್ನು ನಿರ್ವಹಿಸಿರುವುದಿಲ್ಲ. ಇದರಿಂದ ನಿಖರವಾದ ಪ್ರವೇಶ ಶುಲ್ಕದ ಮಾಹಿತಿಯನ್ನು ಕಲೆ ಹಾಕಲು ಲೆಕ್ಕಪರಿಶೋಧನೆಗೆ ಸಾಧ್ಯವಾಗುವುದಿಲ್ಲ &ಇಲಾಖೆಯ ಮುಖ್ಯಸ್ಥರು ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.
2. 2018-19ನೇ ಸಾಲಿನ ಬೇಡಿಕೆ ರಜಿಸ್ಟರ್‌ನಲ್ಲಿ 2017-18 ಸಾಲಿನ ಬಾಕಿ ಉಳಿದ ಶಿಲ್ಕಿನ (Closing Balance) ಮೊತ್ತವನ್ನು 2018-19ನೇ ಸಾಲಿನ ಆರಂಭಿಕ ಶಿಲ್ಕು (Opening Balance) ಮೊತ್ತವನ್ನಾಗಿ ನಮೂದಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದವರು ಆರಂಭಿಕ ಶಿಲ್ಕಿನ ಮೊತ್ತವನ್ನು ನಮೂದಿಸದೇ ಇರುವುದಕ್ಕೆ ಸ್ಪಷ್ಟೀಕರಣ ಕೋರಿದೆ.
3. ಸದರಿ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಲಾದ ಅರ್ಹತಾ ಶುಲ್ಕದ ದಸ್ತಾವೇಜಿನಲ್ಲಿ ಬರಬೇಕಾದ ಶುಲ್ಕ ಹಾಗೂ ವಿಶ್ವವಿದ್ಯಾಲಯಕ್ಕೆ ನೇರವಾಗಿ ಸಂದಾಯವಾಗಿರುವ ಮೊತ್ತ ಹಾಗೂ ಬಾಕಿ ಉಳಿದ ಶಿಲ್ಕಿನ ಮೊತ್ತಗಳನ್ನು ನಿಖರವಾಗಿ ನಮೂದಿಸಿರುವುದಿಲ್ಲ. ಮುಂದುವರೆದಂತೆ ಸದರಿ ರಜಿಸ್ಟರನಲ್ಲಿ ವರ್ಷಾಂತ್ಯಕ್ಕೆ ನಮೂದಿಸಲಾದ ಅಂಕಿ/ಅಂಶಗಳು ಅಧಿಕೃತವಾಗಿರುವುದಕ್ಕೆ ಯಾವುದೇ ಅಧಿಕಾರಿ/ಸಿಬ್ಬಂದಿಗಳು ಸಹಿ ಮಾಡಿರುವುದಿಲ್ಲ,

ಆದ್ದರಿಂದ ನಿರ್ವಹಿಸಲಾದ ರಜಿಸ್ಟರ್‌ನಲ್ಲಿ ನಮೂದಿಸಲಾದ ವಿವರಗಳಿಗೆ ಮಾನ್ಯ ಮಾಡಲು ಸಾಧ್ಯವಾಗಿರುವುದಿಲ್ಲ.

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತೆ ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ವಿವರ | ಸ್ನಾತಕೋತ್ತರ ವಿಭಾಗಗಳು | ಬೇಡಿಕೆ | ವಸೂಲಿ | ಬಾಕಿ | ವಿ.ವಿ. ಜಮಾ |
|---|---|---|---|---|---|---|
| 01 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ | 15 | 69,19,940 | 39,43,185 | 29,76,755 | 21,80,530 |

ಮೇಲೆ ವಿವರಿಸದಂತೆ ಬೇಡಿಕೆ ರೂ.69,19,940/- ವಸೂಲಾತಿ ರೂ. 39,43,185/- ಹಾಗೂ ಇನ್ನೂ ಬರಬೇಕಾದ ಬಾಕಿ ರೂ. 29,76,755 ಆಗಿರುತ್ತದೆ. ಹಾಗೂ ನೇರವಾಗಿ ವಿಶ್ವವಿದ್ಯಾಲಯಕ್ಕೆ ಭರಿಸಿರುವ ರೂ 21,80,530/- ವಿಶ್ವವಿದ್ಯಾಲಯಕ್ಕೆ ಜಮೆಯಾಗಿರುವ ಬಗ್ಗೆ ಯಾವುದೇ ವಿವರ ಇರುವುದಿಲ್ಲ.

ಉಲ್ಲೇಖ 1 ರಂತೆ ಕೊನೆಯ ದಿನಾಂಕವನ್ನು ನಮೂದಿಸಿದ್ದು ಅದಕ್ಕೆ ಯಾವುದೇ ಮೊತ್ತ ನಮೂದಿಸಿರುವುದಿಲ್ಲ. ಇದರಿಂದಾಗಿ ಎಲ್ಲಾ ಸ್ನಾತಕೋತ್ತರ ವಿಭಾಗಗಳಿಂದ ಕೊನೆಯ ದಿನಾಂಕ ಮುಗಿದ ನಂತರ ವಿಶ್ವವಿದ್ಯಾಲಯಕ್ಕೆ ಹಣ ಭರಿಸಿರುವುದು ಕಂಡು ಬಂದಿರುತ್ತದೆ.

4. ಸಮಾಜ ಕಲ್ಯಾಣ ಇಲಾಖೆಯಿಂದ ಬರಬೇಕಾದ ಪ್ರವೇಶ ಶುಲ್ಕದ ವಿವರ ಇರುವುದಿಲ್ಲ. ಇದರಿಂದಾಗಿ ಪ್ರತಿ ವರ್ಷ ಮಹಾವಿದ್ಯಾಲಯಗಳಿಂದ ಬರಬೇಕಾದ ಪ್ರವೇಶ ಶುಲ್ಕದ ಕೋಟಿಗಳಷ್ಟು ಮೊತ್ತವು ವಸೂಲಾತಿಯಾಗದೇ ಬಾಕಿ ಉಳಿದುಕೊಂಡಿರುತ್ತದೆ.

ಆದ್ದರಿಂದ ಪ್ರವೇಶ ಶುಲ್ಕವನ್ನು ಸಂದಾಯ ಮಾಡಲು ಅನುಸರಿಸುತ್ತಿರುವ ಸದರಿ ಪದ್ಧತಿಯನ್ನು ಬದಲಾಯಿಸಿ ನೇರವಾಗಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾಲಯದ ವೇಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಯ ಪದ್ಧತಿಯನ್ನು ಅಳವಡಿಸಬಹುದಾಗಿದೆಯೆಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯ ನೀಡಲಾಗಿದೆ.

5. **ಅನುಬಂಧ-15ರಲ್ಲಿ** ವಿವರಿಸಿದಂತೆ ಮಹಾವಿದ್ಯಾಲಯಗಳಿಂದ ವಸೂಲಾತಿಯಾಗಬೇಕಾದ ಒಟ್ಟು **ಮೊತ್ತ ರೂ.29,76,755/-ಗಳನ್ನು** ವಿಶ್ವವಿದ್ಯಾಲಯದ ಸಾಮನ್ಯ ನಿಧಿಗೆ ಭರಿಸಲು ಸೂಚಿಸಲಾಗಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 49 ದಿನಾಂಕ: 10-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕಂಡಿಕೆಯಲ್ಲಿ ನಮೂದಿಸಿದ ವಸೂಲಾತಿಯ ಮೊತ್ತವು ಕಾರ್ಯಗತದಲ್ಲಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ **ಮೊತ್ತ ರೂ.29,76,755/- ಗಳನ್ನು ವಸೂಲಾತಿಯಲ್ಲಿಡಲಾಗಿದೆ**.

**34. 2020-21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸಂಲಗ್ನತೆ ಹಾಗೂ ವಿಸ್ತರಣೆ ಶುಲ್ಕ ವಸೂಲಿಸುವ ಕುರಿತು.**

ವಿಶ್ವವಿದ್ಯಾಲಯದ ಅಧಿಸೂಚನೆ ಪತ್ರ ಸಂಖ್ಯೆ:ವಿ.ಶ್ರೀ.ಕೃ.ವಿ.ಬ/ಕಾ.ಅ.ಮಂ/2019-20. ದಿನಾಂಕ:11.09.2019 ರನ್ವಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳು 2020-21ನೇ ಶೈಕ್ಷಣಿಕ ವರ್ಷಕ್ಕಾಗಿ ಕೋರ್ಸುಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಲಗ್ನತೆ ನವೀಕರಣಗಳಾಗಿ ಅಧಿಸೂಚನೆಯನ್ವಯ ಶುಲ್ಕ ನಿಗದಿ ಪಡಿಸಿದ್ದು, ನಿಗದಿತ ಸಮಯದಲ್ಲಿ ಪಾವತಿಸಬೇಕಾಗಿರುತ್ತದೆ. (ದಂಡ ರಹಿತ) ಆದರೆ ಕೆಲವೊಂದು ಮಹಾವಿದ್ಯಾಲಯಗಳು ಸದರಿ ಅಧಿಸೂಚನೆಯನ್ನು ಪಾಲಿಸದೆ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟು ಮಾಡಿರುವ ವಿವರ ಅನುಬಂಧ-16 ರಲ್ಲಿ ನೀಡಲಾಗಿದೆ.

ಮುಂದುವರೆದು ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ದಂಡವನ್ನು ಲೆಕ್ಕಾಚಾರ ಮಾಡಿ **ಅನುಬಂಧ-16** ರಲ್ಲಿ ನೀಡಲಾಗಿದ್ದು, ಸದರಿ ಬಾಕಿ ಮೊತ್ತ **ರೂ. 89,400/- ಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಿಂದ ಶೀಘ್ರದಲ್ಲಿ ವಸೂಲಿಸಿ** ವಿಶ್ವವಿದ್ಯಾಲಯದ ಸಂಲಗ್ನತೆ ಬ್ಯಾಂಕ್ ಖಾತೆಗೆ ಜಮೆ ತೆಗೆದುಕೊಂಡು ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ತಿಳಿಸಿದೆ.

ವಿಶ್ವವಿದ್ಯಾಲಯದ ಸಂಲಗ್ನತೆ (Affiliation) ಬ್ಯಾಂಕ್ ಖಾತೆ ಸಂಖ್ಯೆ 3866101001427 ಗೆ ಜಮೆ ಆಗಬೇಕಾಗಿದ್ದ ಸಂಲಗ್ನತೆ ಶುಲ್ಕ ರೂ. 6,29,808/- ಗಳು ತಪ್ಪಾಗಿ ವಿಶ್ವವಿದ್ಯಾಲಯದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಯಾದ ಜನರಲ್ ಅಕೌಂಟ್ ಸಂಖ್ಯೆ 3866101000001 ರಲ್ಲಿ ತಪ್ಪಾಗಿ ಜಮೆ ಮಾಡಲಾಗಿರುತ್ತದೆ. ಸದರಿ ಮೊತ್ತವನ್ನು ಸಂಲಗ್ನತೆ (Affiliation) ಬ್ಯಾಂಕ್ ಖಾತೆಗೆ ವರ್ಗಾಯಿಸಿ ಸರಿಪಡಿಸಲು ಸೂಚಿಸಿ ಅಲ್ಲಿಯವರೆಗೆ **ರೂ.6,29,808/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 50 ದಿನಾಂಕ: 16-12-2021 ರಂದು ನೀಡಲಾಗಿದೆ.**

ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಬಾಕಿ ಹಣವನ್ನು ಆಯಾ ಮಹಾವಿದ್ಯಾಲಯಗಳಿಂದ ವಸೂಲಿ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಮೊತ್ತ ವಸೂಲಿಯಾಗುವವರೆಗೂ ಕಂಡಿಕೆ ಮುಂದುವರೆಸುತ್ತಾ ಸದರಿ ಬಾಕಿ ಮೊತ್ತ **ರೂ. 89,400/- ಗಳನ್ನು ವಸೂಲಾತಿಯಲ್ಲಿಡಲಾಗಿದೆ ಮತ್ತು ರೂ.6,29,808/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**೩೮. VSKUB ಯ ಜ್ಞಾನ ಸಾಗರ ಆವರಣದಲ್ಲಿನ ರಾಜ್ಯಪಾಲರ ಸೂಟ್ ಮತ್ತು ಅತೀ ಗಣ್ಯರ ಅತಿಥಿ ಗೃಹಗಳಿಗೆ ಬೇಕಾಗುವ ಪೀಠೋಪಕರಣ ಕುರಿತು.**

ಕುಲಸಚಿವರ ಆದೇಶ ಸಂ 19-20/010 ದಿನಾಂಕ 09.04.2019 ರನ್ವಯ ಮೇ|| ಕ್ರಿಯೇಟಿವ್ ಡಿಸೈನ್ ಆಂಡ್ ಪ್ರಾಡೆಕ್ಟ್ಸ್ ಬೆಂಗಳೂರುರವರಿಗೆ ರೂ.57,22,525/- ಮತ್ತು ಆದೇಶ ಸಂ.186 ದಿನಾಂಕ:04.06.2019 ರನ್ವಯ ಮೇ|| ಶ್ರೀನಿವಾಸ್ ಕನ್‌ಸ್ಟ್ರಕ್ಷನ್ ಇಂಡಿಯಾ ಪ್ರೈ.ಲಿ.ಬಳ್ಳಾರಿ ರವರಿಗೆ ರೂ.18,09,000/- ಗಳನ್ನು ಪಾವತಿಸಿದ್ದು ಗಮನಿಸಿದೆ.

ಈ ಸಂಬಂಧ ದಿನಾಂಕ:07.02.2017 ರಂದು ನಡೆದ ಖರೀದಿ ಸಮಿತಿ ಹಾಗೂ ದಿನಾಂಕ: 18.02.2017 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ರಾಜ್ಯಪಾಲರ ಸೂಟ್ ಮತ್ತು ಅತಿಥಿ ಗೃಹಗಳಿಗೆ ಬೇಕಾಗುವ ಪೀಠೋಪಕರಣ ಖರೀದಿಸಲು ಮಾರುಕಟ್ಟೆ ದರಗಳನ್ನಾಧರಿಸಿ ರೂ.97,52,000/- ತಯಾರಿಸಿದ ಅಂದಾಜು ಪಟ್ಟಿಗೆ ಅನುಮೋದನೆ ನೀಡಿದ್ದು, ಸದರಿ ಸಾಮಗ್ರಿಗಳ ಮಾರುಕಟ್ಟೆ ದರಗಳನ್ನು ಯಾವ ಆಧಾರದ ಮೇಲೆ ಪಡೆಯಲಾಗಿದೆ ಎಂದು ಲೆಕ್ಕಪರಿಶೋಧನೆಗೆ ತಿಳಿದಿರುವುದಿಲ್ಲ. ಈ ರೀತಿ ಸೂಕ್ತ ನಿಖರವಾದ ದಾಖಲೆಗಳಿಲ್ಲದೆ ತಯಾರಿಸಿದ ಅಂದಾಜು ಪಟ್ಟಿಯನ್ನು ಮಾನ್ಯ ಮಾಡಲು ಬರುವುದಿಲ್ಲ.

ಸದರಿ ಅಂದಾಜು ಪಟ್ಟಿಯನ್ನು ಆಧರಿಸಿ ಟೆಂಡರ್ ಕರೆದಿದ್ದು, ಟೆಂಡರ್‌ನಲ್ಲಿ ಕಡಿಮೆ ದರ ಸೂಚಿಸಿದ L1 ಏಜೆನ್ಸಿಗೆ ಸರಬರಾಜು ಆದೇಶ ನೀಡಿ ಸಾಮಗ್ರಿಗಳನ್ನು ಪಡೆಯಲಾಗಿದೆ ವಿವರ **ಅನುಬಂಧ-17** ರಲ್ಲಿ ನೀಡಲಾಗಿದೆ. (ಮೇ ಕ್ರಿಯೇಟಿವ್ ಡಿಸೈನ್ ಆಂಡ್ ಪ್ರಾಡೆಕ್ಟ್ಸ್ ಬೆಂಗಳೂರುರವರಿಗೆ ರೂ.57,22,525/-ಗಳ ಪಾವತಿಯಲ್ಲಿ ರೂ. 18,09,000/-ಗಳನ್ನು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯನ್ನಾಗಿಸಿರುತ್ತಾರೆ.)

ಸದರಿ ಸಾಮಗ್ರಿಗಳಲ್ಲಿ ಕ್ರಮ ಸಂ. 4, 6, 9, 10, 11, 15 ಮತ್ತು 16 ಗಳಲ್ಲಿ ಗುತ್ತಿಗೆದಾರನಾದ ಶ್ರೀನಿವಾಸ ಕನ್‌ಸ್ಟ್ರಕ್ಷನ್ ರವರು ಅಂದಾಜು ಪಟ್ಟಿಯ ದರವನ್ನೇ ನಮೂದಿಸಿದ್ದು, ಅದೇ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿದೆ.

ಕ್ರಮ ಸಂ 6 ರಲ್ಲಿ 3 Modular Kitchen ರೂ. 2,50,000/- ಕ್ಕೆ ಒಂದರಂತೆ ರೂ. 7,50,000/- ನೀಡಿ ಖರೀದಿಸಿದ್ದು, ಇ-ಮಾರ್ಕೆಟನಲ್ಲಿ ಸದರಿ ಸಾಮಗ್ರಿಯ ದರಗಳನ್ನು ಪರಿಶೀಲಿಸಿದಾಗ ರೂ. 60,000/- ಕ್ಕೆ ಒಂದು Modular Kitchen (Ajjo.com) ಲಭ್ಯವಿರುತ್ತದೆ. ಇಲ್ಲಿ ನಾವು ಕೇವಲ ಒಂದು ಸಾಮಗ್ರಿಯ ದರವನ್ನು ಇ-ಮಾರ್ಕೆಟನಲ್ಲಿ ಪರಿಶೀಲಿಸಿದಾಗ ಸುಮಾರು 4 ಪಟ್ಟು ಹೆಚ್ಚಿಗೆ ದರ ನೀಡಿ ಸಾಮಗ್ರಿ ಖರೀದಿಸಿರುವುದು ವಿಶ್ವವಿದ್ಯಾಲಯಕ್ಕೆ ಮಾಡಿದ ಆರ್ಥಿಕ ಹೊರೆಯಾಗಿದೆ ಎಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ಈ ರೀತಿ ಸೂಕ್ತ ದಾಖಲೆಗಳಿಲ್ಲದೇ/ಆಧಾರಗಳಿಲ್ಲದೇ ಅಂದಾಜು ಪಟ್ಟಿ ತಯಾರಿಸಿ ಅದೇ ಅಂದಾಜು ಪಟ್ಟಿ ಆಧಾರವನ್ನಾಗಿಸಿ ಟೆಂಡರ್ ಕರೆದು, ಅತೀ ಹೆಚ್ಚಿನ ಬೆಲೆಗೆ ಸಾಮಗ್ರಿಗಳನ್ನು ಖರೀದಿಸಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಮಾಡಿರುವುದು ಮೊದಲನೇ ನೋಟದಲ್ಲಿ ಸ್ಪಷ್ಟವಾಗಿ ಕಾಣುತ್ತಿರುವುದರಿಂದ ರಾಜ್ಯಪಾಲರ ಸೂಟ್ ಮತ್ತು ಅತಿಥಿ ಗೃಹಗಳಿಗೆ ಬೇಕಾಗುವ ಪೀಠೋಪಕರಣ ಖರೀದಿಸಲಾಗಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 51 ದಿನಾಂಕ: 20-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸದರಿ ಅಂದಾಜು ಪಟ್ಟಿಯನ್ನು ಅಂದಿನ ಮಾರುಕಟ್ಟೆ ದರಗಳನ್ವಯ ಮಾನ್ಯ ಕುಲಪತಿಗಳ ಮೌಖಿಕ ಆದೇಶ ಮೇರೆಗೆ ಅಂದಾಜನ್ನು ಸಿದ್ಧಪಡಿಸಲಾಗಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ರಾಜ್ಯಪಾಲರ ಸೂಟ್ ಮತ್ತು ಅತಿಥಿ ಗೃಹಗಳಿಗೆ ಬೇಕಾಗುವ ಪೀಠೋಪಕರಣ ಖರೀದಿಸಿದ ಒಟ್ಟು ವೆಚ್ಚ (57,22,525+18,09,000) ರೂ.**75,31,525/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**36. ಟೆಂಡರ ಕರೆಯುವುದನ್ನು ತಪ್ಪಿಸಲು ಖರೀದಿಗಳನ್ನು ವಿಂಗಡಿಸಿರುವ ಬಗ್ಗೆ.**

**ಅನುಬಂಧ-18ರಲ್ಲಿ** ವಿವರಿಸಿರುವಂತೆ ನ್ಯಾಕ್ ವೋಚರ್‌ಗಳನ್ನು ಖರೀದಿಸಲು ಟೆಂಡರ್ ಕರೆಯುವುದನ್ನು ತಪ್ಪಿಸಲು ಖರೀದಿಗಳನ್ನು ರೂ. 1.00 ಲಕ್ಷದೊಳಗೆ ವಿಂಗಡಿಸಿ ರೂ.3,29,870/-ಗಳನ್ನು ನಾಲ್ಕು ಬಿಲ್ಲುಗಳ ಮುಖಾಂತರ ಖರೀದಿಸಿದೆ.

ಕ್ರಮ ಸಂಖ್ಯೆ. 2, 3 ಮತ್ತು 4 ರ ಬಿಲ್ಲುಗಳನ್ನು ಪರಿಶೀಲಿಸಿದಾಗ ದರಪಟ್ಟಿ ಕರೆದ ಅಧಿಸೂಚನೆ ಪ್ರತಿ, ಹಾಗೂ ಸರಬರಾಜು ಆದೇಶಗಳ ಪ್ರತಿ ಇರುವುದಿಲ್ಲ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 53 ದಿನಾಂಕ: 22-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸಮಯದ ಅಬಾವ ಇದ್ದ ಕಾರಣ ಟೆಂಡರ್ ಕರೆಯದೇ ಖರೀದಿಸಲಾಗಿದೆ ಮತ್ತು ಮುಂದಿನ ದಿನಗಳಲ್ಲಿ ಈ ತರಹ ತಪ್ಪುಗಳು ಜರುಗದಂತೆ ಎಚ್ಚರ ವಹಿಸಿಕೊಳ್ಳಲಾಗುವುದು ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ **ಅನುಬಂಧ-18ರಲ್ಲಿ** ವಿವರಿಸಿರುವ **ರೂ.3,29,870/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**37. 2018-19 ಹಾಗೂ 2019-20ನೇ ಸಾಲಿನಲ್ಲಿ ಬಳಕೆಯಾದ ಸೇವಾ ಅಂಚೆ ಚೀಟಿಗಳ ವಿವರ ಲೆಕ್ಕ ತನಿಖೆಗೆ ಹಾಜರುಪಡಿಸುವ ಬಗ್ಗೆ.**

2018-19 ಹಾಗೂ 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಕಛೇರಿ ವ್ಯವಹಾರಕ್ಕಾಗಿ ಬಳಸಲಾದ ಸೇವಾ ಅಂಚೆ ಚೀಟಿಗಳ (ಈ ಎರಡು ವರ್ಷಗಳಲ್ಲಿ) ಪ್ರಾರಂಭಿಕ ಶಿಲ್ಕು ಹಾಗೂ ಸದರಿ ಸಾಲಿನಲ್ಲಿ ಖರೀದಿಸಲಾದ ಅಂಚೆ ಚೀಟಿಗಳು ಹಾಗೂ ದಿನಾಂಕ 31.03.2020 ರಂದು ಮುಕ್ತಾಯದ ಶಿಲ್ಕಿನ ವಿವರ ಸಲ್ಲಿಸಲು ಸೂಚಿಸಲಾಗಿದ್ದು, ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ ಅಂಚೆ ಕಛೇರಿಯಿಂದ ಖರೀದಿಸಲಾದ BMP ಪುಸ್ತಕಗಳನ್ನು ಮಾತ್ರ ಲೆಕ್ಕ ತನಿಖೆಗೆ ಹಾಜರು ಪಡಿಸಿರುತ್ತಾರೆ. ಆದರೆ ಯಾವುದೇ ಜಾವಕ ದಸ್ತಾವೇಜನ್ನು ನಿರ್ವಹಿಸಿರುವುದಿಲ್ಲ. ಹಾಗೂ BMP ಪುಸ್ತಕದಲ್ಲಿಯೂ ಕೂಡ ಯಾವುದೇ ಖರ್ಚಾಗಿರುವ ಹಣದ ಮೊತ್ತ ನಮೂದಿಸಿರುವುದಿಲ್ಲ.

ಹಣಕಾಸು ವಿಭಾಗದಿಂದ 2018-19 ಹಾಗೂ 2019-20ನೇ ಸಾಲಿನಲ್ಲಿ ಅಂಚೆ ಚೀಟಿಗಳ ಖರೀದಿಗಾಗಿ ಪಾವತಿಯಾದ ವಿವರ ನೋಡಿದಾಗ 2018-19 ರಲ್ಲಿ ರೂ.2,53,679/- ಗಳು ಮತ್ತು 2019-20ನೇ ಸಾಲಿನಲ್ಲಿ ರೂ.1,07,797/- ಗಳು ಒಟ್ಟು 3,61,476/- ಗಳ ಅಂಚೆ ಚೀಟಿಗಳು ಖರೀದಿಸಿದ್ದು, ಸದರಿ ಅಂಚೆ ಚೀಟಿಗಳ ವಿವರಗಳನ್ನು ಸಂಬಂಧಪಟ್ಟ ವಿಭಾಗಗಳು ನಿರ್ವಹಿಸಿರುವುದಿಲ್ಲ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 55 ದಿನಾಂಕ: 24-12-2021 ರಂದು ನೀಡಲಾಗಿದೆ**. ಕಂಡಿಕೆಯಲ್ಲಿ ಕೇಳಲಾದ ಅಂಶಗಳಿಗೆ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸುತ್ತಾ ಮತ್ತು ಅಂಚೆ ಚೀಟಿಗಳನ್ನು ಸಂಬಂಧಪಟ್ಟ ವಿಭಾಗಗಳು ನಿರ್ವಹಿಸಬೇಕೆಂದು ಸೂಚಿಸಲಾಗಿದೆ.

**೩೮. ಕುಲಪತಿಗಳ ನಿವಾಸದ ಕೊಠಡಿಗೆ ಅಗತ್ಯವಾದ ಪೀಠೋಪಕರಣಗಳನ್ನು ಖರೀದಿಸುವಲ್ಲಿ ಕೆ.ಟಿ.ಪಿ.ಪಿ ನಿಯಮವನ್ನು ಉಲ್ಲಂಘಿಸಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ೨೦೧೮-೧೯ನೇ ಸಾಲಿನ ವೋಚರ್‌ಗಳನ್ನು ಪರಿಶೀಲಿಸಲಾಗಿ, ಕುಲಪತಿಗಳ ನಿವಾಸದ ಕೊಠಡಿಗೆ ಖರೀದಿಸಿದ ಪೀಠೋಪಕರಣಗಳ ವಿವರ ಈ ಕೆಳಗಿನಂತಿದೆ.

| S.No. | Voucher No. Date | Invoice No. Date | Agency Name | Amount |
|---|---|---|---|---|
| 01 | 850/14.12.2018 | 513/25.09.2018 | Pankaj Alumminium | 59,380 |
| 02 | 849/14.12.2018 | 2712/21.09.2018 | Stylish Living | 94,400 |
| 03 | 848/14.12.2018 | 2707/21.09.2018 | Stylish Living | 98,800 |
| | | | **Total** | **2,52,580** |

ಕರ್ನಾಟಕ ಸಾರ್ವಜನಿಕ ಅಧಿನಿಯಮ ೧೯೯೯ರ ಕಲಂ ೫ ರ ಪ್ರಕಾರ ರೂ. ಒಂದು ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಸಾಮಾಗ್ರಿ ಖರೀದಿಗೆ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸಬೇಕೆಂದು ನಿಯಮವಿದ್ದರೂ, ವಿಶ್ವವಿದ್ಯಾಲಯದವರು ಬಿಲ್‌ಗಳನ್ನು ವಿಭಜಿಸಿ ಒಂದೇ ತೆರನಾದ ಪೀಠೋಪಕರಣಗಳನ್ನು ಎರಡು ಏಜೆನ್ಸಿಗಳಿಂದ ದರಪಟ್ಟಿ ಮುಖಾಂತರ ಒಂದೇ ದಿನದಂದು ಖರೀದಿಸಿ ಸದರಿ ಕೆ.ಟಿ.ಪಿ.ಪಿ. ನಿಯಮವನ್ನು ಉಲ್ಲಂಘಿಸಿರುತ್ತಾರೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: ೫೬ ದಿನಾಂಕ: ೦೪-೦೧-೨೦೨೨ ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮಾನ್ಯ ಕುಲಪತಿಗಳ ಹೊಸ ನಿವಾಸಕ್ಕೆ ಯಾವುದೇ ಪೀಠೋಪಕರಣಗಳು ಇಲ್ಲದ ಕಾರಣ, ವಿಶ್ವವಿದ್ಯಾಲಯವೇ ಎಲ್ಲಾ ಸೌಲಭ್ಯಗಳನ್ನು ನೀಡಬೇಕಾಗಿರುವುದರಿಂದ ಹೊಸದಾಗಿ ಅತ್ಯಗತ್ಯವಾದ ಪೀಠೋಪಕರಣಗಳನ್ನು ದರಪಟ್ಟಿ ಮೂಲಕ ಖರೀದಿಸಲಾಗಿದೆ ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಸದರಿ ಉಲ್ಲಂಘನೆಗೆ ಸ್ಪಷ್ಟೀಕರಣ ನೀಡುವವರೆಗೆ ಪಾವತಿಯಾದ **ಮೊತ್ತ ರೂ. ೨,೫೨,೫೮೦/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**39. ಮುದ್ದತ್ತು ಠೇವಣಿಗಳಲ್ಲಿ ಹಣ ಮಾಡಿಸುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-19ನೇ ಸಾಲಿನಲ್ಲಿ ಒಟ್ಟು 14 ಮುದ್ದತ್ತು ಠೇವಣಿಗಳಲ್ಲಿ ರೂ.9,62,79,974/- ಗಳನ್ನು ಮತ್ತು 2019-20 ನೇ ಸಾಲಿನಲ್ಲಿ ಒಟ್ಟು 12 ಮುದ್ದತ್ತು ಠೇವಣಿಗಳಲ್ಲಿ ರೂ.7,91,52,760/- ಗಳನ್ನು ಅರ್ಧ ವಾರ್ಷಿಕದ ಅವಧಿಗೆ ಠೇವಣಿ ಮಾಡಿ, ಅರ್ಧ ವಾರ್ಷಿಕದ ಅವಧಿ ಮುಗಿದ ನಂತರ Renew ಮಾಡುತ್ತಾ ಬಂದಿರುತ್ತಾರೆ.

ಈ ಸಂಬಂಧ ಸರ್ಕಾರದ ಸುತ್ತೋಲೆ ಸಂ. ಎಫ್.ಡಿ.38 ಟಿ.ಎ.ಆರ್.2018 ದಿನಾಂಕ: 27.08.2018 ರಂದು ಮುದ್ದತ್ತು ಠೇವಣಿಗಳನ್ನು ನಿಭಾಯಿಸುವ ಕುರಿತು/ಹೊಸ ಮುದ್ದತ್ತು ಠೇವಣಿಗಳನ್ನು ಮಾಡುವ ಕುರಿತು ವಿಸ್ತೃತವಾಗಿ ವಿವರಿಸಿರುತ್ತಾರೆ. ಸದರಿ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ವಿವರ ಈ ಕೆಳಗಿನಂತಿರುತ್ತದೆ.

1) ಸುತ್ತೋಲೆಯ ಕ್ರಮ ಸಂ. 6 V (a) ರಲ್ಲಿ "All investments exceeding Rs. 1.00 Crore & above or as may be prescribed by Govt from time to time to be invested in FDs, & FDs shall be made only by obtaining competative Quotations through e-bidding in the E-procurement portal of Govt of Karnataka, without availing or using the services of intermediaries/agents/broker etc." ಎಂದು ತಿಳಿಸಲಾಗಿದೆ. ಆದರೆ ಬಳ್ಳಾರಿ ವಿಶ್ವವಿದ್ಯಾಲಯದವರು 2018-19 ಮತ್ತು 2019-20ನೇ ಸಾಲುಗಳಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಬಿಡ್ಡಿಂಗ್ ಮಾಡದೇ ನೇರವಾಗಿ ರೂ. 1.00 ಕೋಟಿಗಿಂತ ಹೆಚ್ಚಿನ ಮೊತ್ತದ ಮುದ್ದತ್ತು ಠೇವಣಿಗಳನ್ನು ನವೀಕರಿಸಿ ಸದರಿ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿರುತ್ತಾರೆ. (ಮುದ್ದತ್ತು ಠೇವಣಿಗಳ ವಿವರ **ಅನುಬಂಧ-19 ಎ, ಬಿ & ಸಿ.** ರಲ್ಲಿ ನೀಡಲಾಗಿದೆ.)

2) ಸದರಿ ಸುತ್ತೋಲೆಯ ಕ್ರಮ ಸಂ. 6 V (b) ರಲ್ಲಿ, "The investments of below Rs. 1.00 crores shall be invested by obtaining quotations from eligible banks through a notification in the official website of the investing entities" ಎಂದು ತಿಳಿಸಲಾಗಿದೆ. ಆದರೆ ಬಳ್ಳಾರಿ ವಿಶ್ವವಿದ್ಯಾಲಯದವರು 2018-19ನೇ ಸಾಲಿನಲ್ಲಿ ರೂ.25.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ 5 ಮುದ್ದತ್ತು

ಠೇವಣಿಗಳನ್ನು ಮತ್ತು 2019-20ನೇ ಸಾಲಿನಲ್ಲಿ ರೂ. 25 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ 4 ಮುದ್ದತ್ತು ಠೇವಣಿ ನವೀಕರಿಸಿದ್ದು, ಯಾವುದೇ ದರ ಪಟ್ಟಿ ಕರೆದಿರುವುದಿಲ್ಲ.

3) ಸುತ್ತೋಲೆಯ ಕ್ರಮ ಸಂಖ್ಯೆ 6 (IV) ರಲ್ಲಿ "The minimum availability of surplus funds for investment in fixed deposits shall not be less than Rs. 25.00 lakhs at any point of time. For the surplus amount less than Rs.25.00 Lakhs, only sweep-in sweep-out deposit accounts as prescribed may be considered ಎಂದು ತಿಳಿಸಲಾಗಿದೆ. ಆದರೆ ಬಳ್ಳಾರಿ ವಿಶ್ವವಿದ್ಯಾಲಯದವರು 2018-19ನೇ ಮತ್ತು 2019-20ನೇ ಸಾಲಿನಲ್ಲಿ ರೂ. 25.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಹಣವನ್ನು ಮುದ್ದತ್ತು ಠೇವಣಿಗಳಲ್ಲಿ ತೊಡಗಿಸಿ ಸದರಿ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿರುತ್ತಾರೆ.

4) ಸದರಿ ಸುತ್ತೋಲೆಯ ಕ್ರಮ ಸಂ. 7 ರಲ್ಲಿ "No investment shall be made in the instrument, the maturity period of which exceeds one year, including cases of residual maturity from the date of investment but this will not apply to the investment made in Karnataka Goverment securities and Karnataka Govt backed bonds" ಎಂದು ತಿಳಿಸಿದೆ ಆದರೆ ಬಳ್ಳಾರಿ ವಿಶ್ವವಿದ್ಯಾಲಯದವರು 2018-19 ಮತ್ತು 2019-20 ರಲ್ಲಿ ಎಲ್ಲಾ ಮುದ್ದತ್ತು ಠೇವಣಿಗಳನ್ನು 6 ತಿಂಗಳುಗಳ ಅವಧಿಗೆ ನವೀಕರಿಸುತ್ತಾ ಬಂದಿದ್ದಾರೆ.

5) ಸದರಿ ಸುತ್ತೋಲೆಯ ಕ್ರ ಸಂ. 8 (1) ರಲ್ಲಿ "The competent authority for taking all the decisions on investment authority for taking all the decisions on investment of surplus funds reporting there of shall be the Board of concerned investor entity. The board shall ensure that all investment decisions are in accordance with the govt of karnatka & any other relevant legislation and rules as applicable (ii) The Board may at it's descretion constitute an internal investment committee and delegate the powers regarding investment of surplus funds upto one year period and short term investments the board may also prescribe the financial limit upto which the Investment committee in authorised to take the decision

on the investment” ಎಂದು ತಿಳಿಸಿದೆ. ಆದರೆ VSKU ಬಳ್ಳಾರಿಯಲ್ಲಿ ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

6) ಸದರಿ ಸುತ್ತೋಲೆಯ ಕ್ರ ಸಂ. 6 (IV) d ರಲ್ಲಿ **“**The Registrar along with the original FDR has to be kept in safe custody, the keys of which have to be retained jointly by the manager of Finance and Director/Executive Director in charge of Finance” ಎಂದು 6 (IV) f ರಲ್ಲಿ **“**The details of Quarterly interest accrued, received from the bank have to be entered in the register and to be acknowledge jointly by the manager of finance and Director/Executive Director in charge of finance” ಎಂದು ತಿಳಿಸಿದೆ. ಆದರೆ VSKU ಬಳ್ಳಾರಿಯಲ್ಲಿ ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಮುಂದುವರೆದು ಸದರಿ ಎಲ್ಲಾ ಮುದ್ದತ್ತು ಠೇವಣಿಗಳು ಆರು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಸ್ವಯಂಚಾಲಿತವಾಗಿ ನವೀಕರಣವಾಗುತ್ತಿದ್ದು, ಮೇಲೆ ಉಲ್ಲೇಖಿಸಿದ ಸರ್ಕಾರದ ಮಾರ್ಗಸೂಚಿಗಳಂತೆ ಒಂದು ವರ್ಷದ ಅವಧಿಗೆ ಮಾತ್ರ ಮುದ್ದತ್ತು ಠೇವಣಿ ಇಡಬಹುದಾಗಿದ್ದು, ಒಂದು ವರ್ಷದ ನಂತರ ಮುದ್ದತ್ತು ಠೇವಣಿಗಳನ್ನು ಮುಕ್ತಾಯಗೊಳಿಸಿ, ಹಣವನ್ನು ವಿಶ್ವವಿದ್ಯಾಲಯ ಖಾತೆಗೆ ವರ್ಗಾಯಿಸಿ, ಪುನಃ ಟೆಂಡರ್ ಮೂಲಕ ಅಥವಾ ದರಪಟ್ಟಿ ಕರೆದು ಹೊಸ ಮುದ್ದತ್ತು ಠೆವಣಿ ಮಾಡಬೇಕು. ಆದರೆ VSKUB ಯಲ್ಲಿ ಯಾವಾಗೋ ಮಾಡಿದ ಮುದ್ದತ್ತು ಠೇವಣಿಗಳನ್ನು ನವೀಕರಿಸುತ್ತಿರುವುದು ಆಕ್ಷೇಪಿಸಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 57 ದಿನಾಂಕ: 05-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸರ್ಕಾರದ ಸುತ್ತೋಲೆಯಂತೆ ಠೇವಣಿ ಮಾಡಲು ಕ್ರಮ ಕೈಗೊಳ್ಳುತ್ತೇವೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ 2018-19 ಮತ್ತು 2019-20ನೇ ಸಾಲಿನಲ್ಲಿ ಮುದ್ದತ್ತು ಠೇವಣಿ ಇಟ್ಟು **ಒಟ್ಟು ಮೊತ್ತ ರೂ.17,54,32,734/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**೪೦. Sep/Oct 2018 ಮತ್ತು May/June 2019 ರಲ್ಲಿ ನಡೆಸಿದ ಪರೀಕ್ಷಾ ಅಧಿವೇಶನಕ್ಕೆ ಸಾಮನ್ಯ ವರ್ಗದ (GM) ವಿದ್ಯಾರ್ಥಿಗಳಿಂದ ಕಡಿಮೆ ಪರೀಕ್ಷಾ ಶುಲ್ಕ ವಸೂಲಿಸಿದ ಕುರಿತು.**

ಉಲ್ಲೇಖ: 1. ವಿಶ್ವವಿದ್ಯಾಲಯದ ಪರೀಕ್ಷಾ ಅಧೀಸೂಚನೆ ಪತ್ರ ಸಂಖ್ಯೆ ವಿ.ಶ್ರೀಕೃವಿಬ/ ಸ್ನಾತಕ/ ಪರೀಕ್ಷಾ ಅಧಿಸೂಚನೆ/2018-19/2598 ದಿನಾಂಕ: 22.09.2018.

2. ಪತ್ರ ಸಂಖ್ಯೆ ವಿ.ಶ್ರೀಕೃವಿಬ/ಪರೀಕ್ಷಾ/ಸ್ನಾಕೋ/ಪರೀಕ್ಷಾ ಶುಲ್ಕ/ ಅಧಿಸೂಚನೆ/ 2018-19/2938 ದಿನಾಂಕ:30.10.2018.

3. ಪತ್ರ ಸಂಖ್ಯೆ ವಿ.ಶ್ರೀಕೃವಿಬ/ಸ್ನಾತಕ/ಪರೀಕ್ಷಾ-ಅಧಿಸೂಚನೆ/2018-19/ 5064 ದಿನಾಂಕ:14.03.2019

4. ಪತ್ರ ಸಂಖ್ಯೆ ವಿ.ಶ್ರೀಕೃವಿಬ/ಪರೀಕ್ಷಾ/ಸ್ನಾ.ಕೋ/ಪರೀಕ್ಷಾಶುಲ್ಕ/ಅಧಿಸೂಚನೆ/ 2019-20/95 ದಿನಾಂಕ:09.04.2019

ಉಲ್ಲೇಖಿತ ಪತ್ರಗಳ ಅನ್ವಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ Sep/Oct 2018 ರ ಮತ್ತು May/June 2019 ರ ಪರೀಕ್ಷಾ ಅಧಿವೇಶನಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಉಲ್ಲೇಖಿತ ಪತ್ರಗಳಂತೆ ನಿಗದಿಪಡಿಸಿದ ಪರೀಕ್ಷಾ ಶುಲ್ಕ ವಸೂಲಿಸ ಬೇಕಾಗಿರುತ್ತದೆ.

ಆದರೆ ಸದರಿ ವಿದ್ಯಾರ್ಥಿಗಳಿಂದ ಕಡಿಮೆ ಪರೀಕ್ಷಾ ಶುಲ್ಕ ವಸೂಲಿಸಿದ್ದ ವಿವರ <u>ಅನುಬಂಧ-20</u> ರಲ್ಲಿ ನೀಡಲಾಗಿದೆ ಪರೀಕ್ಷಾ ವಿಭಾಗದಿಂದ ಹೊರಡಿಸಲಾದ ಪರೀಕ್ಷಾ ಅಧಿಸೂಚನೆಯಂತೆ ಸಾಮಾನ್ಯ ವರ್ಗದ (GM) ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ, ಆದರೆ ಸದರಿ ವಿಭಾಗದವರು ಒದಗಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ ಕಡಿಮೆ ಪರೀಕ್ಷಾ ಶುಲ್ಕ ಭರಿಸಿರುವುದು ಗಮನಿಸಲಾಗಿರುತ್ತದೆ.

ಮುಂದುವರೆದು Sep/Oct 2018ರ ಪರೀಕ್ಷೆಗಳಿಗೆ, ಸಾಮನ್ಯ ವರ್ಗದ ವಿದ್ಯಾರ್ಥಿಗಳಿಂದ ಒಟ್ಟು ಮೊತ್ತ ರೂ.34,76,305/-ಗಳನ್ನು ವಸೂಲಿಸಬೇಕಾಗಿದ್ದು, ಆದರೆ ಕೇವಲ ರೂ.17,09,245/- ಗಳನ್ನು ಮಾತ್ರ ವಸೂಲಿಸಲಾಗಿದ್ದು, ಬಾಕಿ ಮೊತ್ತ ರೂ. 17,67,060/- ಗಳನ್ನು ಸದರಿ ವಿದ್ಯಾರ್ಥಿಗಳಿಂದ ವಸೂಲಿಸಲು ತಿಳಿಸಿದೆ. ಅದರಂತೆಯೆ May/June 2019 ರ ಪರೀಕ್ಷೆಗಳಿಗೆ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಒಟ್ಟು ಮೊತ್ತ ರೂ.35,32,420/-ಗಳನ್ನು ವಸೂಲಿಸಬೇಕಾಗಿದ್ದು, ರೂ.19,65,535/-ಗಳನ್ನು ಮಾತ್ರ ವಸೂಲಿಸಲಾಗಿರುತ್ತದೆ. ಬಾಕಿ ಮೊತ್ತ ರೂ.15,66,885/-ಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಲು ತಿಳಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 58 ದಿನಾಂಕ:07-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಶುಲ್ಕ

ಪಾವತಿಯ ಕುರಿತು ವಿವರಣೆಯನ್ನು ಕೋರಿ ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ ಪತ್ರವನ್ನು ಬರೆಯಲಾಗಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಎರಡು ಅಧಿವೇಶನಗಳಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಬರಬೇಕಾದ ಬಾಕಿ ಶುಲ್ಕ (**ಅನುಬಂಧ-20 (ಎ & ಬಿ) ರಲ್ಲಿ** ವಿವರಿಸಿದಂತೆ) (17,67,060+15,66,885) **ರೂ. 33,33,945/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

41. **ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ವಿದ್ಯಾವಿಷಯಕ ಪರಿಷತ್ ಸಭೆ/ಸಿಂಡಿಕೇಟ್ ಸಭೆ/BOS ಸಭೆ ಮತ್ತು ಸಂದರ್ಶನಗಳಿಗೆ ಹಾಜರಾಗಿದ್ದಕ್ಕೆ ಆಸನ ಭತ್ಯೆಯನ್ನು ನೀಡಿರುವ ಕುರಿತು.**

VSKU ಬಳ್ಳಾರಿಯ 2018-19ನೇ ಮತ್ತು 2019-20ನೇ ಸಾಲಿನ ಸಾಮಾನ್ಯ ಪಾವತಿಗಳಲ್ಲಿ ಆಂತರಿಕ ಪ್ರಾಧ್ಯಾಪಕರಿಗೆ ಆಸನ ಭತ್ಯೆಯನ್ನು ನೀಡಿರುವುದನ್ನು ಗಮನಿಸಲಾಗಿದೆ.

ವಿಶ್ವವಿದ್ಯಾಲಯದಲ್ಲಿ ಕಾಲಕಾಲಕ್ಕೆ ನಡೆಯುವ ವಿದ್ಯಾವಿಷಯಕ ಪರಿಷತ್ ಸಭೆ/BOS /ಸಭೆ/ಸಿಂಡಿಕೇಟ್ ಸಭೆ ಮತ್ತು ಸಂದರ್ಶನಗಳಿಗೆ ಹಾಜರಾಗುವ ಬಾಹ್ಯ ಸದಸ್ಯರುಗಳಿಗೆ ಮಾತ್ರ ಟಿಎ/ಡಿಎಗಳನ್ನು ನೀಡಬೇಕು. ಆದರೆ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ ವಿವಿಧ ಸಭೆಗಳಿಗೆ ಹಾಜರಾಗಿದ್ದಕ್ಕೆ ಆಸನ ಭತ್ಯೆ ನೀಡಲಾಗಿದೆ. ವಿವರ **ಅನುಬಂಧ-21 ರಲ್ಲಿ** ಲಗತ್ತಿಸಿದೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಪತ್ರ ಸಂಖ್ಯೆ ಇಡಿ/30/ಯುಎನ್ಇ/2000 ದಿನಾಂಕ:11.08.2000ದ ಕಂಡಿಕೆ (1) ರಲ್ಲಿ ತಿಳಿಸಿರುವಂತೆ, Discontinuance of Educational/other remunaration payble to the Lecturer’s and other staff in the university and colleges. This issue was figuared in the 34 th ‘IUB’ Meeting held on 09.06.2000 and the decision emerged is as under

Recommendation No. 39/2000 payment of examination /other remunaration to the teacher’s and other staff in the universities and college shall be totally discontinued. TA/DA for journey performed by them for examination/ other work shall be admissible under KCSR ಎಂದಿರುತ್ತದೆ. ಆದರೆ ವಿಶ್ವವಿದ್ಯಾಲಯದವರು ಮೇಲೆ ತಿಳಿಸಿರುವ ಸರ್ಕಾರದ ನಿಯಮಗಳನ್ನು ಪಾಲಿಸದೇ ಆಂತರಿಕ ಪ್ರಾಧ್ಯಾಪಕರಿಗೆ ಆಸನ ಭತ್ಯೆಯನ್ನು ಪಾವತಿಸಿ ಮೇಲಿನ ನಿಯಮ ಉಲ್ಲಂಘನೆ ಮಾಡಿರುತ್ತಾರೆ.

ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ವಿಭಿನ್ನ ಸಮಿತಿಯ ಸದಸ್ಯರನ್ನಾಗಿ ಮಾಡಿದಾಗ, ಸದರಿ ಸಭೆಗಳಲ್ಲಿ ಹಾಜರಾಗಿ ತಮ್ಮ ಅಭಿಪ್ರಾಯ ನೀಡುವುದು/ನಿರ್ಣಯ ತೆಗೆದುಕೊಳ್ಳುವುದು ಅವರ ಮೂಲಭೂತ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.

ಸದರಿ ಸಭೆಗಳಲ್ಲಿ ಹಾಜರಾಗಿ ಅದಕ್ಕೆ ಆಸನ ಭತ್ಯೆಯನ್ನು ಪಡೆದದ್ದು ವಿಶ್ವವಿದ್ಯಾಲಯಕ್ಕೆ ಮಾಡುವ ಅನಾವಶ್ಯಕ ವೆಚ್ಚವೆಂದು ಭಾವಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 59 ದಿನಾಂಕ: 11-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮುಂದಿನ ದಿನಗಳಲ್ಲಿ ಈ ರೀತಿಯ ತಪ್ಪುಗಳ ಆಗದಂತೆ ಎಚ್ಚರ ವಹಿಸಲಾಗುವುದು ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಅನುಬಂಧ-21 ರಲ್ಲಿ ನಮೂದಿಸಿರುವ ಮೊತ್ತ **ರೂ.46,500/- ಗಳನ್ನು ಸಂಬಂಧಿಸಿದ ಪ್ರಾಧ್ಯಾಪಕರಿಂದ ವಸೂಲಿಸಿ** ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಿ ಲೆಕ್ಕಪರಿಶೋಧನೆಗೆ ವರದಿಸಲು ತಿಳಿಸಿದೆ.

**42. 7ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮದಲ್ಲಿ ಟೆಂಡರ್ ಕರೆಯದೇ ನೇರವಾಗಿ ವಿವಿಧ ಏಜೆನ್ಸಿಗಳಿಂದ ದರಪಟ್ಟಿ ಕರೆದು ಸಾಮಗ್ರಿ & ಸೇವೆಯನ್ನು ಪಡೆದಿರುವ ಬಗ್ಗೆ.**

2019-20ನೇ ಸಾಲಿನ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮದಡಿ ವಿವಿಧ ಏಜೆನ್ಸಿಗಳಿಂದ ಹಣ ಪಾವತಿಸಿದ ವಿವರ ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಲೇವಣಿ ಸಂಖ್ಯೆ | ಏಜೆನ್ಸಿಯ ಹೆಸರು | ವಿಷಯ | ಬಿಲ್ ಸಂಖ್ಯೆ & ದಿನಾಂಕ | ಬಿಲ್ಲಿನ ಮೊತ್ತ |
|---|---|---|---|---|---|
| 01) | 4EE8 | Shree Vinayaka Shamiyana Suppliers | Shamiyana | 15/ 18.05.2019 | 89,394 |
| 02) | 4EE8 | -do- | Stage Printing | 17/ 18.05.2019 | 50622 |
| 03) | 4EE8 | -do- | Shamiyana/ Other work | 14/ 18.05.2019 | 95,628 |
| 04) | 4EE8 | -do- | Shamiyana Other work | 12/ 18.05.2019 | 92,488 |
| 05) | 4EE8 | -do- | ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಹಾಗೂ ಇನ್ನಿತರೆ | 17/ 18.05.2019 | 99,120 |
| 06) | 4EE8 | ಜನಪರ ಸೇವಾ ಸಂಸ್ಥೆ | ಉಟೋಪಚಾರ ಸರಬರಾಜು ಮಾಡಿದ ವೆಚ್ಚ | 17.05.2019 | 3,90,000 |
| | | | | **Grand Total** | **8,17,252** |

ಈ ಮೇಲಿನ ಪ್ರಕರಣವನ್ನು ಪರಿಶೀಲಿಸಿದಾಗ ಕರ್ನಾಟಕ ಸಾರ್ವಜನಿಕ ಅಧಿನಿಯಮ 1999 ರ ಕಾಯ್ದೆ ಕಲಂ 5 ರ ಅನ್ವಯ ರೂ. 1.00 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಸರಕು ಅಥವಾ ಸೇವೆಯನ್ನು ಪಡೆಯಬೇಕಾದಲ್ಲಿ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಖರೀದಿಸಬೇಕಾಗಿರುತ್ತದೆ. ಆದರೆ ಈ ಮೇಲಿನ ಪ್ರಕರಣದಲ್ಲಿ ವಿಶ್ವವಿದ್ಯಾಲಯದವರು 7ನೇ ವಾರ್ಷಿಕ ಘಟಿಕೋತ್ಸವಗೋಸ್ಕರ ಅಂದಾಜು ಪಟ್ಟಿಯನ್ನು ತಯಾರಿಸಿ ಅದರನ್ವಯ ಟೆಂಡರ್/ದರಪಟ್ಟಿಯನ್ನು ಕರೆಯಬೇಕಾಗಿರುತ್ತದೆ. ಆದರೆ ಇಲ್ಲಿ ಟೆಂಡರ್ ತಪ್ಪಿಸುವ ಉದ್ದೇಶದಿಂದ ಸದರಿ ಖರೀದಿಗಳನ್ನು ದರಪಟ್ಟಿಯ ಮೂಲಕ ಖರೀದಿಸಿ KTPP ನಿಯಮದ ಸ್ಪಷ್ಟ ಉಲ್ಲಂಘನೆಯನ್ನು ಮಾಡಿರುತ್ತಾರೆ. ಪ್ರಯುಕ್ತ ಸದರಿ ಪ್ರಕರಣಕ್ಕೆ

ಅವಶ್ಯಕ ದಾಖಲಾತಿಗಳೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 60 ದಿನಾಂಕ: 11-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಘಟಿಕೋತ್ಸವ ಸಮಾರಂಭದ ದಿನಾಂಕವು ತುರ್ತಾಗಿ ನಿಗದಿಯಾಗಿರುವ ಪ್ರಯುಕ್ತ ಸಮಯದ ಅಭಾವದಿಂದ ಕೆಲವು ನಿಯಮಾವಳಿ ಪಾಲಿಸಲಾಗಿಲ್ಲ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಎರಡು ಏಜೆನ್ಸಿಗಳಿಗೆ ಪಾವತಿಸಿದ ಮೊತ್ತ **ರೂ.8,17,252/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**43. 2019-20ನೇ ಸಾಲಿನಲ್ಲಿ ಜರುಗಿಸಲಾದ 7ನೇ ಘಟಿಕೋತ್ಸವ ಸಮಾರಂಭದಲ್ಲಿ KTPP ನಿಯಮ ಪಾಲಿಸದೇ ಸರಕು/ಸಾಮಗ್ರಿಗಳನ್ನು ಖರೀದಿಸಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 2019-20ನೇ ಸಾಲಿನಲ್ಲಿ ಜರುಗಿಸಲಾದ 7ನೇ ಘಟಿಕೋತ್ಸವ ಸಮಾರಂಭದಲ್ಲಿ ದರಪಟ್ಟಿ ಕರೆಯುವುದರ ಮೂಲಕ ಚಿನ್ನದ ಪದಕಗಳು ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಪಡೆದುಕೊಂಡ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ಏಜೆನ್ಸಿಯ ಹೆಸರು | ಬಿಲ್ ಸಂಖ್ಯೆ ಮತ್ತು ದಿನಾಂಕ | ವಿವರ | ಪಾವತಿಸಿದ ಮೊತ್ತ |
|---|---|---|---|---|
| 01) | Vikram Jewellers | 529/ 25.05.2019 | 72 Gold Medals Purchase | 3,81,600 |
| 2) | Geetha Offset Printers | 057/ 25.08.2019 | Gold Medal & Convocation Certificates Printing | 1,45,360 |
| 3) | Geetha Offset Printers | 212/ 13.05.2019 | Leather Folder & Convocation Certificate folder Printing | 76,850 |
| 4) | Raja Printers Banglore | 008/ 12.05.2019 | Convocation Eligibility Cum Presentation List Boosklets | 89,250 |
| | | | **Total** | **6,93,060** |

ಮೇಲೆ ತಿಳಿಸಿದಂತೆ, ಕ್ರ.ಸಂ. 1 ರಲ್ಲಿ 72 ವಿದ್ಯಾರ್ಥಿಗಳಿಗೆ 72 ಚಿನ್ನದ ಪದಕಗಳನ್ನು 7ನೇ ಘಟಿಕೋತ್ಸವ ಸಮಾರಂಭದಲ್ಲಿ ದರಪಟ್ಟಿ ಕರೆಯುವುದರ ಮೂಲಕ ಖರೀದಿಸಲಾಗಿರುತ್ತದೆ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರ ಹಾಗೂ ಪುಸ್ತಕಗಳನ್ನು ಮುದ್ರಿಸಲು ಕ್ರ.ಸಂ.2 ರಿಂದ 4 ರಲ್ಲಿ ದರಪಟ್ಟಿ ಮುಖಾಂತರ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4 (ಇ) ಕಲಂ (5) ರನ್ವಯ ರೂ. 1.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಖರೀದಿಗೆ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಮೂಲಕ ಖರೀದಿಸಬೇಕಾಗಿರುತ್ತದೆ. ಆದರೆ ಮೇಲಿನ ಪ್ರಕರಣದಲ್ಲಿ ರೂ. 1.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿಗಳನ್ನು ದರಪಟ್ಟಿ ಮುಖಾಂತರ ಖರೀದಿಸಿರುವುದು ನಿಯಮ ಉಲ್ಲಂಘನೆಯಾಗಿರುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ, ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕಗಳಿಗೆ ಸಂಬಂಧಿಸಿದ ಹಣದ ವ್ಯವಹಾರ ಮಾಡಲು ವಿಶ್ವವಿದ್ಯಾಲಯದಿಂದ Canara Bank ನಲ್ಲಿ ಖಾತೆ ಸಂಖ್ಯೆ 3866101000652 ಯನ್ನು ಪ್ರತ್ಯೇಕವಾಗಿ ತೆರೆಯಲಾಗಿದ್ದು,

ಸದರಿ ಖಾತೆಯಲ್ಲಿ ಎರಡು ವರ್ಷಗಳಿಂದ ಯಾವುದೇ ವ್ಯವಹಾರ ಮಾಡಲಾಗಿರುವುದಿಲ್ಲ. ಬದಲಾಗಿ ಚಿನ್ನದ ಪದಕಗಳ ಖರೀದಿಗೆ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಬ್ಯಾಂಕ್ ಖಾತೆ ಸಂಖ್ಯೆ 38661010008 55 ರಿಂದ ಖರ್ಚು ಭರಿಸಲಾಗಿರುತ್ತದೆ.

ಪ್ರತ್ಯೇಕ ಖಾತೆ ಇದ್ದರೂ ಕೂಡ ಬೇರೆ ಖಾತೆಯಿಂದ ಖರ್ಚು ಭರಿಸಿರುವ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು ಹಾಗೂ ಅವಶ್ಯಕತೆ ಇಲ್ಲದೆ ಇದ್ದಲ್ಲಿ ಸದರಿ ಖಾತೆಯನ್ನು ಮುಕ್ತಾಯಗೊಳಿಸಿ ಖಾತೆಯಲ್ಲಿನ ಮೊತ್ತವನ್ನು ಸಾಮಾನ್ಯ ನಿಧಿಗೆ ವರ್ಗಾಯಿಸಲು ಲೆಕ್ಕಪರಿಶೋಧನೆಯು ತಿಳಿಸುತ್ತದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 61 ದಿನಾಂಕ: 12-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಘಟಿಕೋತ್ಸವ ಸಮಾರಂಭದ ದಿನಾಂಕವು ತುರ್ತಾಗಿ ನಿಗದಿಯಾಗಿರುವ ಪ್ರಯುಕ್ತ ಸಮಯದ ಅಭಾವದಿಂದ ಕೆಲವು ನಿಯಮಾವಳಿ ಪಾಲಿಸಲಾಗಿಲ್ಲ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ನಿಯಮ ಪಾಲಿಸದೇ ಪಾವತಿಸಿದ ಒಟ್ಟು ಮೊತ್ತ **ರೂ.6,93,060/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**44. ವಾರ್ಷಿಕ ಲೆಕ್ಕ ಪತ್ರದಲ್ಲಿ ನಮೂದಿಸಿದ ವಲಸೆ ಪ್ರಮಾಣ ಪತ್ರಗಳ ಸ್ವೀಕೃತಿ ಶುಲ್ಕದ ಮೊತ್ತಕ್ಕೂ ಮತ್ತು ವಿಶ್ವವಿದ್ಯಾಲಯದವರು ಒದಗಿಸಿದ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸವಿರುವ ಕುರಿತು.**

ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದಾಗ ವಲಸೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. 2018-19 ನೇ ಸಾಲಿನ ವಲಸೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಸ್ವೀಕೃತಿಯ ರಜಿಸ್ಟರನ್ನು ಪರಿಶೀಲಿಸಿದಾಗ ಸದರಿ ವಿಭಾಗದವರು ದಿನಾಂಕ: 01.04.2018 ರಿಂದ ಬರೆಯದೇ ದಿನಾಂಕ:29.09.2018 ರಿಂದ ಬರೆದಿರುತ್ತಾರೆ. ಇದರಿಂದ ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯು ಪರಿಪೂರ್ಣವಿಲ್ಲವೆಂದು ಭಾವಿಸಲಾಗಿದೆ.
2. ವಾರ್ಷಿಕ ಲೆಕ್ಕ ಪತ್ರದಲ್ಲಿ ನಮೂದಿಸಿದ ವಲಸೆ ಪ್ರಮಾಣ ಪತ್ರಗಳ ಸ್ವೀಕೃತಿ ಶುಲ್ಕದ ಮೊತ್ತಕ್ಕೂ ಮತ್ತು ವಿಶ್ವವಿದ್ಯಾಲಯದವರು ಒದಗಿಸಿದ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸವಿರುವ ವಿವರಣೆ ಈ ಕೆಳಗಿನಂತಿವೆ.

| ವರ್ಷ | ವಾರ್ಷಿಕ ಲೆಕ್ಕ ಪತ್ರದ ಪ್ರಕಾರ ಸ್ವೀಕೃತಿಯಾದ ಮೊತ್ತ | ವಿಶ್ವವಿದ್ಯಾಲಯದವರು ಒದಗಿಸಿರುವ ಸ್ವೀಕೃತಿಯಾದ ಮೊತ್ತ | ವ್ಯತ್ಯಾಸ |
|---|---|---|---|
| 2018-19 | 3,57,603 | 8,27,400 | 4,69,797 |
| 2019-20 | 9,59,275 | 12,23,600 | 2,64,325 |
| **ಒಟ್ಟು** | **13,16,878** | **20,51,000** | **7,34,122** |

ಈ ಮೇಲಿನ ತಃಖ್ತೆಯನ್ನು ಪರಿಶೀಲಿಸಿದಾಗ ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಿದ ವಲಸೆ ಪ್ರಮಾಣ ಪತ್ರದ ಸ್ವೀಕೃತಿಯ ಮೊತ್ತ ಹಾಗೂ ಲೆಕ್ಕಪರಿಶೋಧನೆಗೆ ಒದಗಿಸಿದ ಸ್ವೀಕೃತಿಯ ಮೊತ್ತ ಒಂದೇ ಆಗಿರದೇ ರೂ.7,34,122/- ಗಳ ವ್ಯತ್ಯಾಸವಿರುತ್ತದೆ. ಸದರಿ ಮೊತ್ತದಲ್ಲಿ ವ್ಯತ್ಯಾಸವಿರುವುದರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗುವುದಿಲ್ಲ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 62 ದಿನಾಂಕ: 13-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸುವಾಗ ಯಾವ ಕಾರಣಕ್ಕೆ ಭರಿಸುವುದಾಗಿ ನಮೂದಿಸದ ಕಾರಣ ಅದನ್ನು ಇತರೆ ಸ್ವೀಕೃತಿಯಲ್ಲಿ ನಮೂದಿಸಲಾಗಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಆದರೆ ಸ್ವೀಕೃತಿಯನ್ನು ಜಮೆ ಮಾಡಬೇಕಾದರೆ ಸಂಬಂಧಪಟ್ಟ ಕಾರಣವನ್ನು ನಮೂದಿಸಿ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯುವುದು ವಿಶ್ವವಿದ್ಯಾಲಯದ ಆದ್ಯ ಕರ್ತವ್ಯವಾಗಿರುತ್ತದೆ. ಪ್ರಯುಕ್ತ ನೀಡಿರುವ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ವ್ಯತ್ಯಾಸದ ಮೊತ್ತ **ರೂ.7,34,122/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**45. ಸೇವಾ ಪುಸ್ತಕಗಳಲ್ಲಿನ ನ್ಯೂನತೆಗಳು ಸರಿಪಡಿಸುವ ಬಗ್ಗೆ.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ 2018-19 ಹಾಗೂ 2019-20ನೇ ಸಾಲಿನ ಲೆಕ್ಕ ತನಿಖೆ ಸಮಯದಲ್ಲಿ ಶಿಕ್ಷಕೇತರ ಸಿಬ್ಬಂದಿಯವರ ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಕೆಲವು ಸಿಬ್ಬಂದಿಯವರ ಗಳಿಕೆ ರಜೆ ಖಾತೆಯಲ್ಲಿ ಹೆಚ್ಚು ಕಡಿಮೆ ಜಮೆ ತೆಗೆದುಕೊಂಡಿರುವದು ಕಂಡುಬಂದಿರುತ್ತದೆ.
2. ಕೆಲವು ಸಿಬ್ಬಂದಿಯವರ ಸೇವಾ ಪುಸ್ತಕಗಳಲ್ಲಿ ಹಣ ಬಿಡುಗಡೆ ಅಧಿಕಾರಿಗಳ ಸಹಿ ಇರುವುದಿಲ್ಲ.
3. ದಿನಾಂಕ:23.05.2018 ರಂದು ಬಿಡುಗಡೆಯಾದ 6 ನೇ ವೇತನ ಶ್ರೇಣಿ ಅನ್ವಯ ಪರಿಷ್ಕೃತ ವೇತನ ಮಂಜೂರಾತಿ ಆದೇಶ ಮಾತ್ರ ಲಗತ್ತಿಸಿದ್ದು, ಸೇವಾ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ. ಹಾಗೂ ಸಿಬ್ಬಂದಿಯವರ ವೈಯಕ್ತಿಕ ವೇತನಗಳಿದ್ದರೆ ಅವರ ಸೇವಾ ಪುಸ್ತಕದಲ್ಲಿ ಆದೇಶ ಪ್ರತಿ ಲಗತ್ತಿಸಿ ಸೇವಾ ಪುಸ್ತಕದಲ್ಲಿ ನಮೂದಿಸಿ ಮೇಲಾಧಿಕಾರಿಗಳು ಸಹಿ ಮಾಡಲು ಸೂಚಿಸಲಾಗಿದೆ.
4. ಸೇವಾ ಪುಸ್ತಕಗಳ ನಿರ್ವಹಣೆಗೆ ತಾತ್ಕಾಲಿಕ ಸಿಬ್ಬಂದಿಯವರಿಗೆ ವಹಿಸಿಕೊಟ್ಟಿರುವುದು ಕಂಡು ಬಂದಿರುತ್ತದೆ. ಆದರೆ ಸೇವಾ ಪುಸ್ತಕಗಳ ನಿರ್ವಹಣೆ ಕಾರ್ಯ ಅತಿ ಮುಖ್ಯವಾದ ಕಾರ್ಯವೆಂದು ಪರಿಗಣಿಸಿ ಖಾಯಂ ಸಿಬ್ಬಂದಿಯವರನ್ನೇ ನಿಯೋಜಿಸಲು ಕೋರಲಾಗಿದೆ.
5. ಮೂಲ ಸೇವಾ ಪುಸ್ತಕಗಳ ನಿರ್ವಹಣೆ ಕನ್ನಡ ಭಾಷೆಯಲ್ಲಿಯೇ ನಮೂದಿಸಲು ತಿಳಿಸಲಾಗಿದೆ.

**ಕೇಂದ್ರಿಯ ಗ್ರಂಥಾಲಯ ಬಳ್ಳಾರಿ:–**

46. **ಪ್ರತ್ಯೇಕವಾಗಿ ಗ್ರಂಥಾಲಯ ಖಾತೆಯನ್ನು ನಿರ್ವಹಿಸದೇ ಇರುವ ಕುರಿತು**.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ, ಬಳ್ಳಾರಿಯ ಅಧಿನದಲ್ಲಿ ಬರುವ ಗ್ರಂಥಾಲಯ ವಿಭಾಗದ 2018–19 ಮತ್ತು 2019–20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದಾಗ ಸದರಿ ವಿಭಾಗದವರು ಪ್ರತ್ಯೇಕವಾಗಿ ಖಾತೆಯನ್ನು ನಿರ್ವಹಿಸದೇ ಇರುವದು ಗಮನಿಸಿದೆ.

ಈ ಕುರಿತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ "State Governing the Library Advising Board under Sec 37 of KSU Act, 2000 (ಪುಟ 73) ಕ್ರಮ ಸಂಖ್ಯೆ 05 ರಲ್ಲಿ There shall be a separate account in the bank under the name Library account" ಎಂದು Statute ನಲ್ಲಿ ಅಳವಡಿಸಿ ಘನವತ್ತಾದ ರಾಜ್ಯಪಾಲರಿಂದ ಸಹಿ ಪಡೆದ ತರುವಾಯ ಅಂದರೆ 2012 ರಿಂದ ಇಲ್ಲಿಯವರೆಗೆ ಪ್ರತ್ಯೇಕವಾಗಿ ಗ್ರಂಥಾಲಯ ಖಾತೆಯನ್ನು ನಿರ್ವಹಿಸದೇ ಸದರಿ ವಿಶ್ವವಿದ್ಯಾಲಯದವರು ಕರ್ತವ್ಯಲೋಪವೆಸಗಿರುತ್ತಾರೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡೆಯಲಾಗಿದೆ. ಪ್ರತ್ಯೇಕವಾಗಿ ಬ್ಯಾಂಕ್ ಖಾತೆಯ ಅವಶ್ಯಕತೆ ಇರದಿದ್ದರೆ Statute ನಲ್ಲಿ ಅಳವಡಿಸುವ ಅವಶ್ಯಕತೆ ಏನಿತ್ತು ತಿಳಿದು ಬಂದಿರುವುದಿಲ್ಲ. ಪ್ರಯುಕ್ತ ಸದರಿ ಪ್ರಕರಣಕ್ಕೆ ಸ್ಪಷ್ಟೀಕರಣ ಕೋರಿದೆ.

ಮುಂದುವರೆದು ದಿನಾಂಕ:26.12.2019 ರಲ್ಲಿ ನಡೆದ ಗ್ರಂಥಾಲಯ ಸಲಹಾ ಸಮಿತಿಯ ನಡಾವಳಿಯ ಕ್ರಮ ಸಂಖ್ಯೆ 10 ರಲ್ಲಿ ಪ್ರತ್ಯೇಕ ಗ್ರಂಥಾಲಯದ ಬ್ಯಾಂಕ್ ಖಾತೆಯನ್ನು ತೆರೆಯಲು ಅವಕಾಶವಿಲ್ಲ ಎಂದು ನಿರ್ಣಯಿಸಲಾಗಿದೆ. ಅಂದರೆ Statute ನಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಲು ಈಗಾಗಲೇ ಕುಲಾಧಿಪತಿಗಳಿಂದ ಅನುಮತಿಯನ್ನು ಪಡೆದು ತರುವಾಯ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಲು ಅವಕಾಶವಿಲ್ಲವೆಂದು ನಿರ್ಣಯಿಸಿರುವುದು ಕುಲಾಧಿಪತಿಗಳ ಅಧಿಕಾರಕ್ಕೆ ಚ್ಯುತಿ ತಂದಾಂತಾಗಿರುತ್ತದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಪ್ರಯುಕ್ತ ಈ ರೀತಿ ನಿರ್ಣಯಿಸಿರುವುದಕ್ಕೆ ಸ್ಪಷ್ಟೀಕರಣ ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 01 ದಿನಾಂಕ: 07–01–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

47. **ಗ್ರಂಥಾಲಯದಲ್ಲಿ ಕಾಣೆಯಾಗಿರುವ ಪುಸ್ತಕಗಳನ್ನು ದಾಖಲೆಗಳಿಂದ ತೆಗೆದು ಹಾಕಿರುವ ಕುರಿತು.**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿರುವ ಗ್ರಂಥಾಲಯದಲ್ಲಿ 2015-16 ರಲ್ಲಿ ಮತ್ತು 2019-20 ರಲ್ಲಿ ಪುಸ್ತಕಗಳ ಭೌತಿಕ ತಪಾಸಣೆ ಕೈಗೊಂಡಿದ್ದು, ಗ್ರಂಥಾಲಯ ಭೌತಿಕ ತಪಾಸಣೆ ಸಮಿತಿಯ ದಿನಾಂಕ:16.01.2020 ರಂದು ಸಲ್ಲಿಸಿದ ವರದಿಯನ್ವಯ ಒಟ್ಟು 5903 ಪುಸ್ತಕಗಳು ಕಡಿಮೆ ಇರುವುದಾಗಿ ವರದಿಸಿರುತ್ತಾರೆ. ಸದರಿ ವರದಿ ಹಾಗೂ ದಿನಾಂಕ:09.02.2020 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಪರಿಶೀಲಿಸಿದಾಗ ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿರುವಂತೆ ಪುಸ್ತಕಗಳು ಕಾಣೆಯಾಗಿರುತ್ತವೆ.

| Sl.No. | Nature of collection | 2015-16 No. of Missing Books | 2019-20 No. of Missing Books | Total |
|---|---|---|---|---|
| 1 | General Library | 1629 | 592 | 5371 |
| | Sri Room Krishna Ashram Books | 3150 | | |
| 2 | SC/ST Book Bank | 65 | 260 | 325 |
| 3 | DSWO Book Bank | 15 | 33 | 48 |
| 4 | Donated Books | 128 | 31 | 159 |
| **Total** | | **4987** | **916** | **5903** |

ಗ್ರಂಥಾಲಯ ಪುಸ್ತಕಗಳು ಕಳೆದು ಹೋದಲ್ಲಿ ಪುಸ್ತಕಗಳ ಜಿಲ್ಲೆಯ ಸುಮಾರು ಐದು ಪಟ್ಟು ದಂಡ ವಸೂಲಿಸಬೇಕಾಗಿರುತ್ತದೆ. ಆದರೆ ದಿನಾಂಕ: 09.07.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕಾಣೆಯಾಗಿರುವ ಪುಸ್ತಕಗಳ ಪ್ರಮಾಣ ಕಡಿಮೆಯಾಗಿರುವುದರಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಕಾಣೆಯಾದ ಪುಸ್ತಕಗಳನ್ನು ದಾಖಲೆಗಳಿಂದ ತೆಗೆದು ಹಾಕಲು ತಿರ್ಮಾನಿಸಿದೆ.

ಈ ರೀತಿ ಕಾಣೆಯಾಗಿರುವ ಪುಸ್ತಕಗಳ ಮೊತ್ತವನ್ನು ಲೆಕ್ಕ ಹಾಕದೇ ನೇರವಾಗಿ ಕಾಣೆಯಾಗಿರುವ ಪುಸ್ತಕಗಳನ್ನು ದಾಖಲೆಗಳೆಂದು ತೆಗೆದು ಹಾಕುವುದು ಸರಿಯಾದ ಕ್ರಮವಿಲ್ಲವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಟ್ಟಿದೆ.

ಈ ಸಂಬಂಧ 2019-20ನೇ ಸಾಲಿನಲ್ಲಿ ಕೈಗೊಂಡ ಭೌತಿಕ ತಪಾಸಣೆಯಲ್ಲಿ ಕಾಣೆಯಾಗಿರುವ 916 ಪುಸ್ತಕಗಳ ಲೆಕ್ಕ ಹಾಕಿ ಸಂಬಂಧಿಸಿದವರಿಂದ ದಂಡ ಸಮೇತ ವಸೂಲಿಸುವ ಕ್ರಮ ಜರುಗಿಸಬೇಕೆಂದು ತಿಳಿಸಲಾಗಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 02 ದಿನಾಂಕ: 14-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

**ಭೌತಶಾಸ್ತ್ರ ವಿಭಾಗ:–**

48. **ಭೌತಿಕ ಪರಿಶೀಲನೆ ಮಾಡದಿರುವ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಅಧೀನದಲ್ಲಿ ಅಡಿಯಲ್ಲಿ ಬರುವ ಭೌತಶಾಸ್ತ್ರ ವಿಭಾಗದ 2018–19 ಮತ್ತು 2019–20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದಾಗ ಸದರಿ ವಿಭಾಗದವರು ಭೌತಿಕ ಪರಿಶೀಲನೆ ಮಾಡದಿರುವುದು ಗಮನಿಸಿದೆ.

ಈ ಕುರಿತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–169 ರನ್ವಯ "Stores should be verified periodically in the manner prescribed for each department, in any case, at least once a year. Subject to any special rules or orders, consumable stores and raw materials should be checked annually by the Government servants in charge of them and a report of verification should be sent to the controlling authorities, who will check the inventories in the course of their inspections".

"In the case of furniture and other office stores, the stock should be verified at least once a year (in April) by the head of the office or one of his Gazetted Assistants. A certificate of check should be submitted to the controlling officer, where there is one, signed by the head of the office who will be held responsible for the proper maintenance of the registers and the correctness of the verification report, whether he conducts the verification himself or entrusts it to a Gazetted Assistant" ಎಂದಿರುತ್ತದೆ.

ಈ ಮೇಲೆ ತಿಳಿಸಿರುವ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದದಂತೆ ಸದರಿ ವಿಭಾಗದವರು ಭೌತಿಕ ಪರಿಶೀಲನೆಯನ್ನು ಕೈಗೊಂಡಿರುವುದಿಲ್ಲ. ಪ್ರಯುಕ್ತ ಈ ಮೇಲೆ ತಿಳಿಸಿರುವಂತೆ ನಿಯಮದಂತೆ ಭೌತಿಕ ಪರಿಶೀಲನೆಯನ್ನು ಕೈಗೊಂಡು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 01 ದಿನಾಂಕ: 23–12–2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

**49. ಟೆಂಡರ್ ಕರೆಯುವುದನ್ನು ತಪ್ಪಿಸಲು ಖರೀದಿಗಳನ್ನು ವಿಂಗಡಿಸಿ ಉಪಕರಣಗಳನ್ನು ಖರೀದಿಸಿದ ಬಗ್ಗೆ.**

ಕುಲಸಚಿವರ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯರವರ ಆದೇಶ ಸಂಖ್ಯೆ: 1631 ದಿನಾಂಕ: 28.02.2019 ರನ್ವಯ ರೂ. 99,863/- ಮತ್ತು ಆದೇಶ ಸಂಖ್ಯೆ: 1630 ದಿನಾಂಕ:28.02.2019 ರನ್ವಯ ರೂ. 99,775/- ಗಳ ಉಪಕರಣಗಳನ್ನು ಖರೀದಿಸಲು ಆದೇಶಿಸಿರುತ್ತಾರೆ.

ಕಡತವನ್ನು ಪರೀಶಿಲಿಸಲಾಗಿ ವಿಶ್ವವಿದ್ಯಾಲಯ ಭೌತಶಾಸ್ತ್ರ ವಿಭಾಗಕ್ಕೆ 2018-19ನೇ ಸಾಲಿನಲ್ಲಿ ಒದಗಿಸಿದ ಅನುದಾನ ರೂ.10.00 ಲಕ್ಷಗಳಲ್ಲಿ ಈಗಾಗಲೇ ರೂ.9.61 ಲಕ್ಷಗಳ ಅನುದಾನ ಉಪಯೋಗವಾಗಿದ್ದು, ಬಾಕಿ ಕೇವಲ ರೂ.0.39 ಲಕ್ಷಗಳ ಅನುದಾನ ಬಾಕಿ ಇರುತ್ತದೆ. ಆದರೆ 2018-2019 ನೇ ಸಾಲಿನಲ್ಲಿ ಮುಖ್ಯ ಆವರಣ ಮತ್ತು ಸ್ನಾಕೋತ್ತರ ಕೇಂದ್ರ ಕೊಪ್ಪಳಕ್ಕೆ ಬೇಕಾಗುವ ರೂ.2.00 ಲಕ್ಷಗಳ ಉಪಕರಣಗಳನ್ನು ಖರೀದಿಸಲು co-ordinator, Department of Physics VSKUB ರವರು ಮನವಿ ಸಲ್ಲಿಸಿ, ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವುದರಿಂದ ಕೇವಲ 1 ತಿಂಗಳಲ್ಲಿ ಟೆಂಡರ ಪ್ರಕ್ರಿಯೆ ನಡೆಸಲು ವಿಳಂಬವಾಗುತ್ತದೆ ಎಂದು ಸಬೂಬು ನೀಡುತ್ತಾ ಮುಖ್ಯ ಆವಕ ಮತ್ತು ಸ್ನಾತಕೋತ್ತರ ಕೋರ್ಸ್‌ಕ್ಕೆ ಪ್ರತ್ಯೇಕವಾಗಿ ರೂ. 1.00 ಲಕ್ಷಗಳಿಗೆ ಬರುವಂತೆ ಮಾಡಿ ಖರೀದಿಸಲು ಅನುಮತಿ ಕೋರಿರುತ್ತಾರೆ. ಸದರಿಯವರ ಲೆಕ್ಕ ಶೀರ್ಷಿಕೆ 1.AC3.10.5 ರಲ್ಲಿ 2018-19 ರಲ್ಲಿ ಅಷ್ಟು ಅನುದಾನವಿರದಿದ್ದರೂ ಹಣಕಾಸು ಅಧಿಕಾರಿಗಳು ಬೇರೆ ಎರಡು ಲೆಕ್ಕ ಶೀರ್ಷಿಕೆಗಳಿಂದ ಖರ್ಚನ್ನು ಭರಿಸಲು ಅನುಮತಿಸಿರುತ್ತಾರೆ. ಈ ರೀತಿ ಸದರಿ ವಿಭಾಗದ ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಇರದದಿದ್ದರೂ ವಿಶ್ವವಿದ್ಯಾಲಯ ಬೇರೆ ಲೆಕ್ಕ ಶೀರ್ಷಿಕೆಗಳಿಂದ ಖರ್ಚು ಭರಿಸಿ Diversion of fund ಮಾಡಿರುತ್ತಾರೆ ಮತ್ತು ರೂ.2.00 ಲಕ್ಷಗಳ ಖರೀದಿಗಳನ್ನು ರೂ. 1.00 ಲಕ್ಷಗಳೊಳಗೆ ಮಾಡಿ ಖರೀದಿಸಲು ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿದ್ದಲ್ಲದೇ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಇದಕ್ಕೆ ಅನುಮತಿ ನೀಡಿ ಕೆ.ಟಿ.ಪಿ.ಪಿ. ನಿಯಮ ಉಲ್ಲಂಘನೆ ಮಾಡಿರುತ್ತಾರೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 02 ದಿನಾಂಕ: 23-12-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಸ್ನಾತಕೋತ್ತರ ಕೇಂದ್ರ ಕೊಪ್ಪಳದಲ್ಲಿ ಯಾರು ಖಾಯಂ ಬೋಧಕರು ಇಲ್ಲದ ಕಾರಣ ಮತ್ತು ಮುಂದಿನ ದಿನಗಳಲ್ಲಿ ಸದರಿ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ಉತ್ತರವನ್ನು ಮಾನ್ಯ ಮಾಡಲು ಸಾಧ್ಯವಿರದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸುತ್ತಾ ಕುಲಸಚಿವರು ಆದೇಶಿಸಿದ ಮೊತ್ತ ರೂ.99,863/- ಮತ್ತು ರೂ.99,775/- ಒಟ್ಟು **ರೂ.1,99,638/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

**ರಸಾಯನ ಶಾಸ್ತ್ರ ವಿಭಾಗ :-**

50. **ಪ್ರಯೋಗಾಲಯದಲ್ಲಿರುವ ಅನಿಲ ಸಂಪರ್ಕಗಳ ದುರಸ್ತಿ ಕಾರ್ಯಕ್ಕೆ ಸಂಬಂಧಿಸಿದ ನ್ಯೂನತೆಗಳು.**

ರಸಾಯನ ಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ Zenith & Company ಏಜೆನ್ಸಿಗೆ ರೂ.20,735/- ಗಳನ್ನು ಪ್ರಯೋಗಾಲಯದಲ್ಲಿರುವ ಅನಿಲ ಸಂಪರ್ಕಗಳ ದುರಸ್ತಿ ಕಾರ್ಯಕ್ಕೆ ಪಾವತಿಸಲಾಗಿದೆ. ಸದರಿ ಪಾವತಿಯನ್ನು ದರಪಟ್ಟಿಯನ್ನು ಕೈಗೊಳ್ಳಲಾಗಿದೆ. ದರಪಟ್ಟಿಯಲ್ಲಿ ಮೂರು ಏಜೆನ್ಸಿಗಳಾದ Zenith & Company, M.N.Gas heating equipments ಮತ್ತು Ganesh Gas Materials ಭಾಗವಹಿಸಿರುತ್ತಾರೆ ಆದರೆ ದರಪಟ್ಟಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಪರಿಶೀಲಿಸಿದಾಗ ದರಪಟ್ಟಿಯನ್ನು ಅಹ್ವಾನಿಸುವ ಆದೇಶವಾಗಲಿ ಸರಬರಾಜು ಆದೇಶವಾಗಲಿ ಕಡತದಲ್ಲಿ ಲಭ್ಯವಿರುವುದಿಲ್ಲ. ಇದರ ಜೊತೆಗೆ M.N.Gas Heating equipments ಮತ್ತು Ganesh Gas Materials ದರಪಟ್ಟಿಯ ಪ್ರತಿಯನ್ನು ಪರಿಶೀಲಿಸಿದಾಗ GST ಸಂಖ್ಯೆ ಇರದ ಪ್ರತಿ ಲಗತ್ತಿಸಿರುತ್ತಾರೆ. ಇದರಿಂದ ಲೆಕ್ಕಪರಿಶೋಧನೆಯಲ್ಲಿ ಒದಗಿಸಿದ/ಲಗತ್ತಿಸಿದ ದಾಖಲೆಗಳು Fake ಪ್ರತಿಗಳು ಮತ್ತು ದರಪಟ್ಟಿಯ ಪ್ರಕ್ರಿಯೆಯನ್ನು ಪೂರ್ಣಗೊಳಸಲು ಕೈಗೊಂಡ ಒಂದು ಪ್ರಕ್ರೀಯೆ ಆಗಿರುತ್ತದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಪ್ರಯುಕ್ತ ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 01 ದಿನಾಂಕ: 23-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿಶ್ವವಿದ್ಯಾಲಯದ ಅಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಏಜೆನ್ಸಿಗಳಂದ ದರಪಟ್ಟಿಯನ್ನು ತರಿಸಿಕೊಳ್ಳಲಾಯಿತು ಎಂದು, ಕಣ್ತಪ್ಪಿನಿಂದಾಗಿ ಜಿ.ಎಸ್.ಟಿ ಇಲ್ಲದೇ ಇರುವುದನ್ನು ನೋಡಿರುವುದಿಲ್ಲವೆಂದು ಮತ್ತು ಅನಿಲ ಸಂರ್ಪಕಗಳ ದುರಸ್ಥಿ ತುರ್ತಾಗಿ ನಡೆಯಬೇಕಾಗಿರುವುದರಿಂದ ಈ ರೀತಿ ತಪ್ಪಾಗಿರುತ್ತದೆ ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಪಾವತಿಯಾದ ಮೊತ್ತ **ರೂ.20,735/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

51. **ವಿಶ್ವವಿದ್ಯಾಲಯದಲ್ಲಿ ಆಸ್ತಿವಹಿಯನ್ನು ನಿರ್ವಹಿಸದೇ ಇರುವ ಕುರಿತು**.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ದಿನಾಂಕ: 27.03.2010 ರಂದು ಕಾರ್ಯಾರಂಭವಾಗಿರುತ್ತದೆ. ವಿಶ್ವವಿದ್ಯಾಲಯದ ಮುಖ್ಯ ಆವರಣವು ಸುಮಾರು 95.37 ಎಕರೆ ಜಮೀನಿನಲ್ಲಿ ವ್ಯಾಪಿಸಿಕೊಂಡಿರುತ್ತದೆ. ವಿಶ್ವವಿದ್ಯಾಲಯ ಪ್ರಾರಂಭದಿಂದ ನಿರ್ವಹಿಸಲಾಗಿರುವ ಕಟ್ಟಡಗಳು, ಆವರಣದಲ್ಲಿರುವ ರಸ್ತೆಗಳು, ಮರ ಗಿರಗಳು ಮುಂತಾದವು ವಿಶ್ವವಿದ್ಯಾಲಯದ ಸ್ಥಿರಾಸ್ತಿಗಳಾಗಿದ್ದು, ಇವುಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆ ನಮೂನೆಗಳಾದ PWF 22, 23, 24 ಮತ್ತು 25 ಗಳಲ್ಲಿ ನಮೂದಿಸಿ ಪ್ರಾರಂಭದಿಂದ ಇಲ್ಲಿಯವರೆಗೆ ಸದರಿ ಆಸ್ತಿಗಳನ್ನು ಅರ್ಜಿಸಿದ ವಿಧಾನ, ಅವುಗಳ ಮೊತ್ತ ಮತ್ತು ಅವುಗಳಿಗೆ ಸಂಬಂಧಿಸಿದ ಇತರೆ ವಿವರಗಳನ್ನು ದಾಖಲಿಸುವುದು ಅತ್ಯಗತ್ಯವಾಗಿರುತ್ತದೆ. ಆದರೆ ವಿಶ್ವವಿದ್ಯಾಲಯದವರು ಈ ಮೇಲೆ ತಿಳಿಸಿರುವ ನಿಯಮಗಳಲ್ಲಿ ನಿರ್ವಹಿಸದೇ ಸದರಿ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

ಪ್ರಯುಕ್ತ ವಿಶ್ವವಿದ್ಯಾಲಯವು ಪ್ರಾರಂಭದಿಂದ ಹೊಂದಿರುವ ಚರಾಸ್ತಿಗಳ ವಿವರಗಳನ್ನು ಕೇಂದ್ರಿಕೃತ ದಾಖಲೆ ವಹಿ ನಿರ್ವಹಿಸಿ, ಕಾಲೋಚಿತಗೊಳಿಸಿ ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 02 ದಿನಾಂಕ: 21-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

**ಕ್ರೀಡಾ ವಿಭಾಗ:–**

52. **ನಗದು ಪುಸ್ತಕ ನಿರ್ವಹಿಸದೇ ಇರುವ ಕುರಿತು**.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಅಧೀನದಲ್ಲಿ ಬರುವ ಕ್ರೀಡಾ ವಿಭಾಗ ವಿಭಾಗದ ಬ್ಯಾಂಕ್ ಖಾತೆ ಸಂಖ್ಯೆ 38661010012565ಇರುತ್ತದೆ. ವಿಭಾಗದ ಯಾವುದೇ ಚಟುವಟಿಕೆಗಳಿಗೋಸ್ಕರ ಖರ್ಚು ಮಾಡಿದ ಮೊತ್ತವನ್ನು ಆ ದಿನದ ನಗದು ಪುಸ್ತಕದಲ್ಲಿ ಬರೆಯಬೇಕು. ಆದರೆ, ಸದರಿ ವಿಭಾಗದವರು ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.

ಈ ಕುರಿತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–331 ರನ್ವಯ The cash book has to be written up from day to day, the entry relating to each item of receipt or expenditure being made simultaneously with the transaction. The balance on hand at the beginning of each day being brought forward on the receipt side, the sums received during the course of the day are entered on the receipt side in the order of their receipt while on the expenditure side money spent is entered item by item, noting against each item the corresponding voucher number. The cash book should be closed at the end of each day and the balance struck. At the end of the month, after the transactions of the last day of the month are over, the cash book should be closed, as usual, as at the end of each day, and the particulars of items (heads of account) working up to the cash balance should be given in detail ಎಂದಿರುತ್ತದೆ.

ಅದೇ ರೀತಿ ಆರ್ಥಿಕ ವರ್ಷದ ಕೊನೆಯ ದಿನಾಂಕದಂದು ಲೆಕ್ಕ ಸಮನ್ವಯ (Bank Reconcilation Statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್ ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್ಕಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.

ಆದರೆ, ಸದರಿ ವಿಭಾಗದವರು ಈ ಮೇಲೆ ತಿಳಿಸಿರುವ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದದ ಪ್ರಕಾರ ನಿರ್ವಹಿಸದೇ ಇರುವುದರಿಂದ ಸದರಿ ನಿಯಮ ಉಲ್ಲಂಘನೆಯಾಗಿರುತ್ತದೆ. ಪ್ರಯುಕ್ತ ಮುಂದಿನ ಸಾಲಿನಲ್ಲಿ ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331 ರನ್ವಯ ನಗದು ಪುಸ್ತಕವನ್ನು ನಿರ್ವಹಿಸಿ ಲೆಕ್ಕಪರಿಶೋಧನೆ ಒದಗಿಸಲು ತಿಳಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 02 ದಿನಾಂಕ: 06–01–2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ.

**೫೩. ಚೆಕ್ಕು ಪುಸ್ತಕಗಳ ದಾಸ್ತಾನು ನಿರ್ವಹಿಸದೇ ಇರುವ ಕುರಿತು.**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಅಧೀನದಲ್ಲಿ ಬರುವ ಕ್ರೀಡಾ ವಿಭಾಗದ ಬ್ಯಾಂಕ್ ಖಾತೆ ಸಂಖ್ಯೆ ೩೮೬೬೧೦೧೦೦೧೨೫೬ ಇರುತ್ತದೆ. ಸದರಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಚೆಕ್ ಪುಸ್ತಕದ ಸ್ವೀಕೃತಿ, ಬಳಕೆ ಮತ್ತು ರದ್ದುಪಡಿಸುವ ಚೆಕ್‌ಗಳ ಮಾಹಿತಿಯನ್ನು ನಿರ್ವಹಿಸಿರುವುದಿಲ್ಲ. ಇದರಿಂದ ಬಳಕೆಯಾಗದ ಚೆಕ್‌ಗಳನ್ನು ಬಳಸಿ ಮೋಸ/ವಂಚನೆ ಹಾಗೂ ಹಣ ದುರುಪಯೋಗದಂತಹ ಪ್ರಕರಣಗಳಿಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ, ಚೆಕ್ ಪುಸ್ತಕದ ದಾಸ್ತಾನು ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ತಿಳಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: ೦೩ ದಿನಾಂಕ: ೦೬-೦೧-೨೦೨೨ ರಂದು ನೀಡಲಾಗಿದೆ.**

54. **ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಕುರಿತು**.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಅಧೀನದಲ್ಲಿ ಬರುವ ಕ್ರೀಡಾ ವಿಭಾಗದ 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿ 2019-20 ಆಯವ್ಯಯದ ಅಂದಾಜಿನ ಪುಟ ಸಂಖ್ಯೆ 25 ರಲ್ಲಿ ಕ್ರೀಡಾ ವಿಭಾಗಕ್ಕೆ ರೂ.14.27. ಲಕ್ಷಗಳನ್ನು ಖರ್ಚು ಭರಿಸಿದ್ದು ಮತ್ತು 2020-21ರ ಆಯವ್ಯಯ ಅಂದಾಜಿನ ಪುಟ ಸಂಖ್ಯೆ 24 ರಲ್ಲಿ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದಂತೆ ರೂ. 20.49 ಲಕ್ಷಗಳನ್ನು ಒಟ್ಟಾರೆಯಾಗಿ ರೂ. 34.76 ಲಕ್ಷಗಳನ್ನು ಖರ್ಚು ಭರಿಸಲಾಗಿದೆ.

2018-19ನೇ ಸಾಲಿನಲ್ಲಿ ಖರ್ಚಾದ ಮೊತ್ತ ರೂ. 14.27 ಲಕ್ಷಗಳಿಗೆ ಯಾವುದೇ ವೋಚರ್‌ಗಳನ್ನು ಮತ್ತು 2019-20ನೇ ಸಾಲಿನಲ್ಲಿ ಖರ್ಚಾದ ಒಟ್ಟು ಮೊತ್ತ ರೂ. 20.49 ಲಕ್ಷಗಳಿಗೆ ರೂ. 10.48 ಲಕ್ಷಗಳಿಗೆ ಮಾತ್ರ ವೋಚರ್‌ಗಳನ್ನು ಸಲ್ಲಿಸಿದ್ದು ವ್ಯತ್ಯಾಸದ ಮೊತ್ತ ರೂ. 10.01 ಲಕ್ಷಗಳಿಗೆ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ. ಅಂದರೆ ಒಟ್ಟಾರೆಯಾಗಿ ರೂ. 24.28 ಲಕ್ಷಗಳಿಗೆ (ರೂ. 14.27+ರೂ.10.01) ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ. ಕಾರಣವೇನೆಂದು ವಿಚಾರಿಸಿ ಪಾವತಿಯ ಎಲ್ಲಾ ವೋಚರ್‌ಗಳನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಕುರಿತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 24, 25 ಮತ್ತು 26 ರಲ್ಲಿ ಯಾವುದೇ ಪಾವತಿಯನ್ನು ಕೈಗೊಳ್ಳುವಾಗಬಿಲ್ಲನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸುವಾಗ ಬಿಲ್ಲಿನ ಒಂದು ಪ್ರತಿಯನ್ನು ವಿಭಾಗದಲ್ಲಿರಿಸಿಕೊಂಡು ಲೆಕ್ಕಪರಿಶೋಧನೆಗೆ ಒದಗಿಸಬೇಕೆಂದು ಸದರಿ ಅನುಚ್ಛೇದದಲ್ಲಿ ತಿಳಿಸಿದರೂ ಇಲಾಖಾ ಮುಖ್ಯಸ್ಥರು ಇದರ ಬಗ್ಗೆ ಪರಿಗಣಿಸದೇ ತಮಗೆ ಒದಗಿಸಿದ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 04 ದಿನಾಂಕ: 06-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಆಯಾ ಸಾಲಿನ ವೋಚರ್‌ಗಳು ಆಯಾ ವರ್ಷಗಳಲ್ಲಿ ಹಣಕಾಸು ವಿಭಾಗಕ್ಕೆ ಸಲ್ಲಿಸುತ್ತೇವೆ ಎಂದು, ಇನ್ನು ಮುಂದೆ ಪ್ರತಿಯೊಂದು ವೋಚರ್‌ಗಳನ್ನು ವಿಭಾಗದಲ್ಲಿ ಒಂದು ಪ್ರತಿಯನ್ನು ದಾಖಲಾತಿಗಾಗಿ ಇಡುತ್ತೇವೆ ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಸದರಿ ಅನುಪಾಲನೆಯನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸುತ್ತಾ ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ವೋಚರ್‌ಗಳ ಮೊತ್ತ **ರೂ.24,28,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**.

೫೫. **ಸಾಮಾನ್ಯ ಅಭಿಪ್ರಾಯ:–**

1. ವಿಶ್ವವಿದ್ಯಾಲಯದಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ನಿಗದಿತ ನಮೂನೆಯಲ್ಲಿ ಯೋಜನೆವಾರು ನಿರ್ವಹಿಸಿರುವದಿಲ್ಲ.
2. ಮಾಸಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಲೆಕ್ಕಪರಿಶೋಧನೆಗೆ ಒಳಪಡಿಸಲಾಗಿಲ್ಲ. ವಾರ್ಷಿಕ ಲೆಕ್ಕ ಪತ್ರಗಳನ್ನು ಕೂಡಾ ನಿಗದಿತ ಅವಧಿಯಲ್ಲಿ ತಯಾರಿಸಿಲ್ಲ.
3. ಪರೀಕ್ಷೆ ವಿಭಾಗದಲ್ಲಿ ಉತ್ತರ ಪತ್ರಿಕೆಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಲಾಗಿದೆ.
4. ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಪ್ರಸಕ್ತ ವರ್ಷದಲ್ಲಿಯೂ ಕೂಡಾ ಅನಿಯಮಿತವಾಗಿ ವಿವಿಧ ಸಂಭಾವನೆ/ಗೌರವಧನ ಮುಂತಾದ ಪಾವತಿಗಳನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ಅನಾವಶ್ಯಕ ಅರ್ಥಿಕ ಹೊರೆ ಮಾಡಲಾಗಿದೆ.
5. ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳ ತಿರುವಳಿಗೆ ಪ್ರಸಕ್ತ ವರ್ಷದಲ್ಲಿಯೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
6. ಹಣಬಳಕೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ, ಫಂಡಿಂಗ ಏಜೆನ್ಸಿಗಳಿಂದ ನೀಡಲಾಗುವ ಮಾರ್ಗದರ್ಶಿ ನಿಯಮಗಳನ್ವಯ ದಾಖಲೆಗಳನ್ನು ನಿರ್ವಹಿಸಿ, ಸಂಬಂಧಿಸಿದ ಫಂಡಿಂಗ ಏಜೆನ್ಸಿಗಳಿಗೆ ಹಣಬಳಕೆ ಪ್ರಮಾಣ ಪತ್ರಗಳನ್ನು ತಪ್ಪದೇ ಸಲ್ಲಿಸುವುದರೊಂದಿಗೆ ಲೆಕ್ಕಗಳನ್ನು ಮರುಸಮನ್ವಯಗೊಳಿಸುವುದು.
7. ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘನೆ ಮಾಡುವುದು ರೂಢಿಯಾಗಿದ್ದು, ಇದನ್ನು ಪ್ರತಿ ವರ್ಷ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.
8. ಸಾಕಷ್ಟು ಮೊತ್ತದ ಮುಂಗಡ ಹೊಂದಾಣಿಕೆಗಾಗಿ ಬಾಕಿಯಿದ್ದು, ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
9. ಪರೀಕ್ಷಾ ಕಾರ್ಯಗಳಗಾಗಿ ಸಿಬ್ಬಂದಿಗಳಿಗೆ ಸರ್ಕಾರದ ಸ್ಪಷ್ಟ ಆದೇಶದ ಹೊರತಾಗಿಯೂ ಅನಿಯಮಿತವಾಗಿ ಸಂಭಾವನೆ/ಪರಿಹಾರ ಭತ್ಯೆ/ ಪ್ರೋತ್ಸಾಹ ಧನ ಎಂದು ವಿವಿಧ ಹೆಸರಿನಲ್ಲಿ ಪಾವತಿಸಿ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟುಮಾಡಲಾಗಿದೆ.
10. ಹಣಕಾಸಿನ ನಿರ್ವಹಣೆಯಲ್ಲಿ ನಿಯಮಗಳ ಪರಿಪಾಲನೆ, ಪಾವತಿ/ಕ್ಲೇಮಗಳ ಸಂಪೂರ್ಣ ಪರಿಶೀಲನೆ ಮುಂತಾದ ಕ್ರಮಗಳ ಕಡೆ ಗಮನ ಹರಿಸುವುದು ಅತ್ಯವಶ್ಯ ಎಂದು ಅಭಿಪ್ರಾಯಪಟ್ಟಿದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಕಲಬುರಗಿ